ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 19 ಮಂಗಳವಾರ 2024

ಸಂಪುಟ: 44 | ಸಂಚಿಕೆ: 330 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮೈಸೂರು ಪಾಲಿಕೆ ವ್ಯಾಪ್ತಿ ಆಸ್ತಿ ತೆರಿಗೆ ಏ. 1ರಿಂದ ಏ.30ರ ಒಳಗೆ ಪಾವತಿಸಿದಲ್ಲಿ
ಶೇ.5ರಷ್ಟು ರಿಯಾಯಿತಿ



ಮೈಸೂರು,ಮಾ.18–ವಿವಿಧ ವರ್ಗಗಳ ಸ್ವತ್ತುಗಳ ಮಾರುಕಟ್ಟೆ ಬೆಲೆಗಳಿಗೆ ಅನುಗುಣವಾಗಿ ಪ್ರಸಕ್ತ ಸಾಲಿನಲ್ಲಿ ಚಾಲ್ತಿ ಇರುವ ಪರಿಷ್ಕೃತ ಮಾರ್ಗಸೂಚಿ ಬೆಲೆಗಳನ್ನು ಅಳವಡಿಸಿಕೊಳ್ಳಲಾಗಿದ್ದು ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಇರುವ ಎಲ್ಲಾ ಆಸ್ತಿಗಳಿಗೆ ಏ.1ರಿಂದ ಅನ್ವಯವಾಗುವಂತೆ ಜಾರಿಗೊಳಿಸಲಾಗುತ್ತಿದೆ.

2024–25ನೇ ಸಾಲಿನ ಆಸ್ತಿ ತೆರಿಗೆಯನ್ನು ಏ. 1ರಿಂದ ಏ.30 ಒಳಗೆ ಪಾವತಿಸಿದಲ್ಲಿ ಶೇ.5ರಷ್ಟು ಆಸ್ತಿ ತೆರಿಗೆ ರಿಯಾಯಿತಿ ಲಭ್ಯವಿರುತ್ತದೆ. ಆದುದರಿಂದ, ಏಪ್ರಿಲ್ ಮಾಹೆಯಲ್ಲಿ 2024–25ನೇ ಸಾಲಿನ ಆಸ್ತಿ ತೆರಿಗೆಯನ್ನು ಆಯಾ ವಲಯ ಕಚೇರಿಗಳಲ್ಲಿ ಪಾವತಿಸುವ ಮೂಲಕ ಶೇಕಡ 5 ರಷ್ಟು ತೆರಿಗೆ ರಿಯಾಯಿತಿ ಪಡೆದುಕೊಳ್ಳಬಹುದು ಎಂದು ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಆಸ್ತಿ ಮಾಲೀಕರಿಗೆ ಮೈಸೂರು ಮಹಾನಗರ ಪಾಲಿಕೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೆಹಲಿ ಕಲೆಕ್ಷನ್‌ಗಾಗೇ ರಾಜ್ಯದಲ್ಲಿ ಮಂತ್ರಿ ಇದ್ದಾರೆ

ಶಿವಮೊಗ್ಗದಲ್ಲಿ ಪ್ರಧಾನಿ ಮೋದಿ ವಾಗ್ದಾಳಿ

ಕರ್ನಾಟಕದಲ್ಲಿದ್ದಾರೆ ಸಿಎಂ, ಸೂಪರ್ ಸಿಎಂ, ಶ್ಯಾಡೋ ಸಿಎಂಗಳು...

- ಮತ್ತೊಮ್ಮೆ ರಾಜ್ಯ ಕಾಂಗ್ರೆಸ್ ಸರ್ಕಾರ ಎಟಿಎಂ ಆಗಿದೆ
- ಬರೀ ಸುಳ್ಳು ಭರವಸೆ, ಸುಳ್ಳು ಆರೋಪದಿಂದ ಜನರ ಮೆಚ್ಚಿಸುವ ಕಾರ್ಯವಾಗುತ್ತಿದೆ
- ದೇಶವನ್ನೇ ವಿಭಜಿಸುವ ಹೇಳಿಕೆ ನೀಡಿದ ಸಂಸದನ ವಜಾ ಮಾಡುವ ಬದಲು ಬಚಾವ್ ಮಾಡಿದರು
- 28 ಕೇಂದ್ರಗಳಲ್ಲಿ ಎನ್‌ಡಿಎ ಗೆಲ್ಲಿಸಿ; 400 ಸ್ಥಾನ ಗೆಲ್ಲಲು ಸಹಕರಿಸಿ
- ಜೂ.4ರ ಫಲಿತಾಂಶ ನಾರಿಶಕ್ತಿ, ಹಿಂದೂತ್ವ ನಾಶಪಡಿಸಲು ಹೊರಟವರಿಗೆ ಪಾಠವಾಗಲಿ: ಪಿಎಂ



ಬೆಂಗಳೂರು, ಮಾ. 18(ಕೆಂಶಿ)–ಕಾಂಗ್ರೆಸ್, ಕರ್ನಾಟಕದಲ್ಲಿನ ತನ್ನ ಸರ್ಕಾರವನ್ನು ರಾಜ್ಯವನ್ನು ಲೂಟಿ ಮಾಡುವ ಎಟಿಎಂ ಮಾಡಿಕೊಂಡಿದೆ. ಅಭಿವೃದ್ಧಿ ಕಾರ್ಯಗಳಿಗೂ ಹಣವಿಲ್ಲದೆ ಸರ್ಕಾರ ಬರೀ ಲೂಟಿಯಲ್ಲಿ ತೊಡಗಿದೆ ಎಂದು ಪ್ರಧಾನಿ ಮೋದಿ ಆರೋಪಿಸಿದರು.

ಶಿವಮೊಗ್ಗದಲ್ಲಿ ಚುನಾವಣಾ ಪ್ರಚಾರ ಭಾಷಣ ಮಾಡಿದ ಅವರು, ಕರ್ನಾಟಕದ ಕೋಟಿ ಕೋಟಿ ಜನರಿಗೆ ನನ್ನ ನಮಸ್ಕಾರಗಳು, ಸಿಗಂದೂರು ಚೌಡೇಶ್ವರಿಯವರಿಗೆ ನಮನಗಳು ಎಂದು ಹೇಳುತ್ತಲೇ ಭಾಷಣ ಆರಂಭಿಸಿದರು. ರಾಜ್ಯದಲ್ಲಿ ಸಿಎಂ, ಭವಿಷ್ಯದ ಸಿಎಂ, ಸೂಪರ್ ಸಿಎಂ, ಶ್ಯಾಡೋ ಸಿಎಂಗಳ ಆಡಳಿತವಿದೆ. ದೆಹಲಿ ಕಲೆಕ್ಷನ್‌ಗಾಗಿಯೇ ಮಂತ್ರಿಯಿದ್ದಾರೆ, ಕಾಂಗ್ರೆಸ್ ರಾಜ್ಯದ ಖಜಾನೆ ಖಾಲಿ ಮಾಡಿದೆ ಎಂದು ಟೀಕಿಸಿದರು. ಕಾಂಗ್ರೆಸ್ ಸುಳ್ಳುಗಳ ಮೂಲಕ ಅಧಿಕಾರಕ್ಕೆ ಬಂತು, ಬಳಿಕ ಕೇಂದ್ರ, ಮೋದಿ ಮೇಲೆ ಆರೋಪ ಹೊರಿಸುತ್ತಿದೆ. ಅಧಿಕಾರಕ್ಕಾಗಿ ಕಾಂಗ್ರೆಸ್ ಏನನ್ನು ಬೇಕಾದರೂ ಮಾಡುತ್ತದೆ. ಬ್ರಿಟಿಷರ ಒಡೆದು ಆಳುವ ನೀತಿ ಯನ್ನು ಅನುಸರಿಸುತ್ತಿದೆ. ಕರ್ನಾಟಕದ ಸಂಸದ ರೊಬ್ಬರು ರಾಜ್ಯವನ್ನೇ ಪ್ರತ್ಯೇಕ ರಾಷ್ಟ್ರ ಮಾಡುವ ಮಾತನ್ನು ಆಡುತ್ತಿದ್ದಾರೆ. ಅಂಥ ಸಂಸದರನ್ನು ವಜಾ ಮಾಡುವ ಬದಲು ಅವರನ್ನು ಬಚಾವ್ ಮಾಡಲು ಕಾಂಗ್ರೆಸ್ ಮುಂದಾಯಿತು. ಇದಕ್ಕೆ ತಕ್ಕ ಪಾಠವನ್ನು ಜನತೆ ನೀಡುವುದು ಖಚಿತ ಎಂದರು. ನಾರಿ ಶಕ್ತಿ ನನಗೆ ಮತದಾರರಾಗಿ ಕಾಣುವುದಿಲ್ಲ, ಅವರು ದೇಶದ ಸುರಕ್ಷಾ ಕವಚ, ಕರ್ನಾಟಕದ ಮೂಲೆ ಮೂಲೆಯಲ್ಲಿ ಬಿಜೆಪಿಗೆ ಅಪಾರ ಜನ ಬೆಂಬಲ ಸಿಗುತ್ತಿದೆ. ನಾರಿಶಕ್ತಿಯನ್ನು ಕಾಂಗ್ರೆಸ್ ಮತ್ತು ಅದರ ಸಹಯೋಗಿ ಪಕ್ಷಗಳು ನಾಶ ಮಾಡಲು ಹೊರಟಿವೆ.

● 6ನೇ ಪುಟಕ್ಕೆ

28 ಸಂಸದರ ಗೆಲ್ಲಿಸಿ ದೆಹಲಿಗೆ ಕರೆದುಕೊಂಡು ಬರ್ತೀನಿ

ಮೋದಿಗೆ ಗ್ಯಾರಂಟಿ ಕೊಟ್ಟ ಬಿ.ಎಸ್.ಯಡಿಯೂರಪ್ಪ!



ಶಿವಮೊಗ್ಗ: ಈ ಬಾರಿ ಕರ್ನಾಟಕದಲ್ಲಿ 28ಕ್ಕೆ 28 ಕ್ಷೇತ್ರಗಳಲ್ಲೂ ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸಿ, ದೆಹಲಿಗೆ ಕರೆದುಕೊಂಡು ಬರುತ್ತೇನೆ ಎಂದು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಭರವಸೆ ನೀಡಿದ್ದಾರೆ. ಶಿವಮೊಗ್ಗದ ಅಲ್ಲಮಪ್ರಭು ಫ್ರೀಡಂ ಪಾರ್ಕ್ ಆವರಣದಲ್ಲಿ ಆಯೋಜನೆಗೊಂಡಿದ್ದ ಬೃಹತ್ ಸಮಾವೇಶವನ್ನುದ್ದೇಶಿಸಿ ಮಾತನಾಡಿದ ಅವರು, ಕರ್ನಾಟಕದ ಅಭಿವೃದ್ಧಿ ದೃಷ್ಟಿಯಿಂದ ಮೋದಿ ಅವರು ಕೈಗೊಂಡ ನಿರ್ಧಾರಗಳಿಗೆ ಕೈಜೋಡಿಸಿದ್ದೇವೆ. ಹಾಗಾಗಿ ಈ ಬಾರಿ 28 ಲೋಕಸಭಾ

● 6ನೇ ಪುಟಕ್ಕೆ

ಶೇ.60ರಷ್ಟು ಕನ್ನಡ ಬಳಕೆ ಕಡ್ಡಾಯ
ಸರ್ಕಾರದ ಸುತ್ತೋಲೆ ಪಾಲಿಸದ ಸಂಸ್ಥೆಗಳನ್ನು ಮುಚ್ಚಬಾರದು



ಬೆಂಗಳೂರು, ಮಾ. 18– ನಾಮಫಲಕಗಳಲ್ಲಿ ಶೇ.60ರಷ್ಟು ಕನ್ನಡ ಬಳಕೆ ಕಡ್ಡಾಯ ವಿಚಾರಕ್ಕೆ ಸಂಬಂಧಿಸಿದಂತೆ ಸರ್ಕಾರದ ಸುತ್ತೋಲೆ ಪಾಲಿಸದ ಸಂಸ್ಥೆಗಳನ್ನು ಮುಚ್ಚಬಾರದು ಎಂದು ಹೈಕೋರ್ಟ್ ಏಕಸದಸ್ಯ ಪೀಠದಿಂದ ಮಧ್ಯಂತರ ಆದೇಶ ಹೊರಡಿಸಿದೆ. ವಾಣಿಜ್ಯ ಸಂಸ್ಥೆಗಳ ವಿರುದ್ಧ ಬಲವಂತದ ಕ್ರಮಕೈಗೊಳ್ಳದಂತೆ ಸೂಚನೆ ನೀಡಲಾಗಿದೆ. ಆದರೆ ಕರ್ನಾಟಕದಲ್ಲಿ ವ್ಯಾಪಾರ ಮಾಡುವಾಗ ಕನ್ನಡ ನಾಮಫಲಕವಿರಬೇಕು ಎಂದು ಹೈಕೋರ್ಟ್ ಹೇಳಿದೆ.

ಶೇ.60ರಷ್ಟು ಕನ್ನಡ ನಾಮಫಲಕ ಹಾಕಿದರೆ ಸಮಸ್ಯೆ ಏನು ಎಂದು ಮಳಿಗೆಗಳ ಸಂಘದ ಪರ ವಕೀಲರಿಗೆ ನ್ಯಾ.ಎಂ.ನಾಗಪ್ರಸನ್ನ ಪ್ರಶ್ನೆ ಮಾಡಿದ್ದು, ಕನ್ನಡ ಭಾಷೆ ಸಮಗ್ರ ಅಭಿವೃದ್ಧಿ ಕಾಯ್ದೆ–2022 ಜಾರಿ ಸಮರ್ಪಕವಾಗಿಲ್ಲ. ಜಾರಿಯ ದಿನಾಂಕದ ಬಗ್ಗೆ ಗೆಜೆಟ್ ಅಧಿಸೂಚನೆ ಹೊರಡಿಸಲಾಗಿಲ್ಲ. ಡಿಜಿಟಲ್ ನಾಮಫಲಕಗಳನ್ನು ಬದಲಿಸಲು ಕಾಲಾವಕಾಶ ಬೇಕು. ನಾಮಫಲಕದಲ್ಲಿ ಶೇ.60ರಷ್ಟು ಕನ್ನಡವಿಲ್ಲದಿದ್ದರೆ ಮುಚ್ಚಲಾಗುತ್ತಿದೆ ಎಂದು ಸರ್ಕಾರದ ಸುತ್ತೋಲೆ ಪ್ರಶ್ನಿಸಿ ವ್ಯಾಪಾರಿಗಳ ಸಂಘದಿಂದ ವಾದ ಮಾಡಲಾಗಿದೆ. ಕಾಯ್ದೆ ಜಾರಿ ಬಗ್ಗೆ ಗೆಜೆಟ್ ಅಧಿಸೂಚನೆ ವಿವರ ನೀಡಿ ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಏಕಸದಸ್ಯ ಪೀಠ ಸೂಚನೆ ನೀಡಿದೆ. ರಾಜ್ಯದ ಅಂಗಡಿ ಮುಂಗಟ್ಟು ಮತ್ತು ವ್ಯಾಪಾರ ಮಳಿಗೆಗಳು ಸೇರಿದಂತೆ ಎಲ್ಲಾ ರೀತಿಯ ನಾಮಫಲಕಗಳಲ್ಲಿ ಕಡ್ಡಾಯವಾಗಿ ಶೇ 60 ರಷ್ಟು ಕನ್ನಡ ಬಳಕೆ ಮಾಡಬೇಕು. ಈ ಸಂಬಂಧ ರಾಜ್ಯ ಸರ್ಕಾರ ಇತ್ತೀಚೆಗೆ ಸುಗ್ರಿವಾಜ್ಞೆ ಹೊರಡಿಸಿತ್ತು. ಬಳಿಕ ಶೇ.60 ರಷ್ಟು ಕನ್ನಡ ಬಳಕೆ ಕಡ್ಡಾಯಗೊಳಿಸುವ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ (ತಿದ್ದುಪಡಿ) ಮಸೂದೆ, 2024 ಅನ್ನು ಕರ್ನಾಟಕ ವಿಧಾನಸಭೆ ಅಧಿವೇಶನದಲ್ಲಿ ಮಂಡಿಸಿ ಅಂಗೀಕರಿಸಲಾಗಿತ್ತು.

ನೀವಿಂಗೆ ನೋಡಬ್ಯಾಡಿ ನಮ್ಮ...

ಮೈತ್ರಿಯಂತೆ ಮೂರು ಸ್ಥಾನ ನೀಡಿಕೆಯಲ್ಲೂ ಬಿಜೆಪಿ ಚೌಕಾಸಿಗೆ ಹೆಚ್‌ಡಿಕೆ ಬೇಸರ



ಬೆಂಗಳೂರು: ಬಿಜೆಪಿಯೊಂದಿಗಿನ ಮೈತ್ರಿ ವಿಚಾರದಲ್ಲಿ ಜೆಡಿಎಸ್ ನಾಯಕರು ಅದೇಕೋ ಬೇಸರಗೊಂಡಿದ್ದಾರೆ. ಆದರೂ ಹಾಸನ, ಮಂಡ್ಯ ಹಾಗೂ ಕೋಲಾರ ಲೋಕಸಭೆ ಕ್ಷೇತ್ರಗಳಲ್ಲಿ ಜೆಡಿಎಸ್ ಅಭ್ಯರ್ಥಿಗಳನ್ನು ನಿಲ್ಲಿಸುತ್ತೇವೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಘೋಷಣೆ ಮಾಡಿದ್ದಾರೆ. ಪಕ್ಷದ ರಾಜ್ಯ ಕಚೇರಿಯಲ್ಲಿ ಇಂದು ಕೋರ್ ಕಮಿಟಿ ಸಭೆ ನಂತರ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ನಮ್ಮ ಪಕ್ಷದಲ್ಲಿ ಯಾವುದೇ ಗೊಂದಲಗಳು ಇಲ್ಲ. ಮೂರು ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಹಾಕುತ್ತೇವೆ ಎಂದರು.

ನಾವು ಕೇಳಿರೋದು 3–4 ಕ್ಷೇತ್ರ ಸೀಟು ಹಂಚಿಕೆ ಬಗ್ಗೆ ಅಧಿಕೃತವಾಗಿ ಘೋಷಣೆ ಆಗುವ ವರೆಗೂ ಮಾತನಾಡುವುದಿಲ್ಲ. ಆದರೆ, ಅಭ್ಯರ್ಥಿಗಳ ಘೋಷಣೆ ಹಾಗೂ ಕ್ಷೇತ್ರಗಳ ಹಂಚಿಕೆ ವಿಳಂಬ ಆಗುತ್ತಿದೆ ಎಂದು ಪಕ್ಷದ ನಾಯಕರು ಆತಂಕ ವ್ಯಕ್ತಪಡಿಸಿದರು. ನಾವು ಬಿಜೆಪಿಯಿಂದ 6–7 ಸೀಟು ಕೇಳಿಲ್ಲ. ಕೇಳಿರೋದು 3–4 ಸೀಟು ಮಾತ್ರ. ನಮ್ಮ ಶಕ್ತಿ ಅವರಿಗೂ ಗೊತ್ತಿದೆ. 3– 4 ಸೀಟು ಕೊಡ್ತಾರೆ ಎಂಬ ನಂಬಿಕೆ ಇಟ್ಟುಕೊಂಡಿದ್ದೇನೆ. ಕೇವಲ ಎರಡು ಕ್ಷೇತ್ರ ತೆಗೆದುಕೊಳ್ಳೋಕೆ ನಾನು ಇಷ್ಟು ಪ್ರಯತ್ನ ಮಾಡಬೇಕಿತ್ತಾ? ಇಷ್ಟೆಲ್ಲಾ ಹೊಂದಾಣಿಕೆ ಬೇಕಾ ನನಗೆ ಎಂದು ಅವರು ಬೇಸರ ವ್ಯಕ್ತಪಡಿಸಿದರು. ಹಾಸನ, ಮಂಡ್ಯದಲ್ಲಿ ಸ್ವತಂತ್ರವಾಗಿ ನಮ್ಮ ಅಭ್ಯರ್ಥಿಗಳು ಗೆಲ್ಲುತ್ತಾರೆ. ತ್ರಿಕೋನ ಸ್ಪರ್ಧೆ ಆದರೆ ಸುಲಭವಾಗಿ ನಾವು ಗೆಲ್ಲುತ್ತೇವೆ. ಆದರೆ 18 ಕ್ಷೇತ್ರಗಳಲ್ಲಿ ಬಿಜೆಪಿಗೆ ನಮ್ಮ ಪಕ್ಷದಿಂದ ಅನುಕೂಲ ಆಗಲಿದೆ. ಈ ವಿಷಯವನ್ನು ಸಭೆಯಲ್ಲಿ ಚರ್ಚೆ ಮಾಡಿದ್ದೇವೆ. ನಮ್ಮ ಶಕ್ತಿ ಧಾರೆ ಎರೆದರೆ ಬಿಜೆಪಿಗೆ ಒಳ್ಳೆಯ ಫಲಿತಾಂಶ ಬರುತ್ತದೆ. ಏಕೆಂದರೆ ಕರ್ನಾಟಕದ ರಾಜಕೀಯ ಬೇರೆ, ದೇಶದ ಇತರ ರಾಜ್ಯಗಳ ರಾಜಕೀಯವೇ ಬೇರೆ. ಬಿಜೆಪಿ ಹೈಕಮಾಂಡ್ ಗಮನಕ್ಕೆ ತನ್ನಿ ಎಂದು ಮುಖಂಡರು ನನ್ನ

● 6ನೇ ಪುಟಕ್ಕೆ

ನಮ್ಮ ಶಕ್ತಿ ಇರುವ ಕಡೆ ಮಾತ್ರ ಟಿಕೆಟ್ ಕೇಳಿದ್ದೇವೆ: ಜಿಟಿಡಿ

ಬೆಂಗಳೂರು: ನಮ್ಮ ಶಕ್ತಿ ಇರುವ ಕಡೆ ಮಾತ್ರ ಟಿಕೆಟ್ ಕೇಳಿದ್ದೇವೆ ಎಂದು ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡ ಹೇಳಿದ್ದಾರೆ. ಪಕ್ಷದ ಕಚೇರಿ ಜೆಪಿ ಭವನದಲ್ಲಿ ಇಂದು ಕೋರ್ ಕಮಿಟಿ ಸಭೆಗೂ ಮುನ್ನ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ನಮ್ಮ ಶಕ್ತಿಯ ಕ್ಷೇತ್ರಗಳನ್ನು ಬಿಟ್ಟು ಉಳಿದ ಕ್ಷೇತ್ರಗಳಲ್ಲಿ ಜೆಡಿಎಸ್‌ಗೆ 2ರಿಂದ 3 ಲಕ್ಷ ಮತಗಳು ಇವೆ. ಅದನ್ನು ಬಿಜೆಪಿಗೆ ಹಾಕಲು ಸೂಚನೆ ನೀಡಲಾಗಿದೆ ಎಂದರು. ಲೋಕಸಭೆ ಚುನಾವಣೆ ಘೋಷಣೆ ಆಗಿದೆ. ದಿನಾಂಕ ಪ್ರಕಟ ಆಗಿದೆ. ನಮ್ಮ ಪಕ್ಷದಲ್ಲಿ ಈಗಾಗಲೇ ಜಿಲ್ಲಾಧ್ಯಕ್ಷರ ನೇಮಕ ಆಗಿದೆ. 28 ಕ್ಷೇತ್ರಕ್ಕೆ ಉಸ್ತುವಾರಿಗಳ ನೇಮಕ ಮಾಡಿದ್ದೇವೆ. ಪದಾಧಿಕಾರಿಗಳು ಹೇಗೆ ಕೆಲಸ ಮಾಡುತ್ತಿದ್ದಾರೆಂದು ತಿಳಿಯಲು ಇವತ್ತು ಸಭೆ ಮಾಡುತ್ತೇವೆ. ನಾವು 3 ರಿಂದ 4 ಕ್ಷೇತ್ರಗಳನ್ನು ಕೇಳಿದ್ದೇವೆ. ನಮ್ಮ ಪಕ್ಷ ಗೆಲ್ಲುವ ಕ್ಷೇತ್ರ ಮಾತ್ರ ಕೇಳ್ತಿದ್ದೇವೆ. ನಮಗೆ ಸಿಗುವ ಟಿಕೆಟ್ ಜಾಗದಲ್ಲಿ ಬಿಜೆಪಿ ಅವರು ನಮಗೆ ಮತ ಹಾಕುತ್ತಾರೆ. ನಮ್ಮ ಗುರಿ 28ಕ್ಕೆ 28 ಸ್ಥಾನ ಗೆಲ್ಲುವುದು. ಮೋದಿ ಮತ್ತೊಮ್ಮೆ

● 6ನೇ ಪುಟಕ್ಕೆ

ಲೋಕಸಭಾ ಚುನಾವಣೆ–2024

ಮಂಡ್ಯದಲ್ಲಿ 99 ಲಕ್ಷ ಜಪ್ತಿ

ಚಾ.ನಗರ ಸೇರಿ ರಾಜ್ಯದ ವಿವಿಧೆಡೆ 15.37 ಕೋಟಿ ಮದ್ಯ, 45 ಲಕ್ಷ ನಗದು, ಮಾದಕ ವಸ್ತು ವಶ



ಕೆ.ಆರ್.ಪೇಟೆಯ ಅಡಿಕೆ ವ್ಯಾಪಾರಿಯೊಬ್ಬರು ಬೆಂಗಳೂರಿನಿಂದ ಕೆ.ಆರ್.ಪೇಟೆಗೆ ಕ್ರೆಟಾ ಕಾರಿನಲ್ಲಿ(ಕೆಎ–54, ಎಂ–4030) ತೆರಳುವಾಗ ಮದ್ದೂರು ಬಳಿಯ ಕೊಂಗಬೋರನದೊಡ್ಡಿ ಚೆಕ್ ಪೋಸ್ಟ್‌ನಲ್ಲಿ ತಪಾಸಣೆ ನಡೆಸಿದ ವೇಳೆ 99.20 ಲಕ್ಷರೂ. ದೊರಕಿದೆ. ಆದರೆ, ಈ ಹಣಕ್ಕೆ ಸೂಕ್ತ ದಾಖಲೆಗಳು ಇಲ್ಲದ ಕಾರಣ ಪೊಲೀಸರು ಕಾರು ಮತ್ತು ಹಣವನ್ನು ವಶಪಡಿಸಿಕೊಂಡಿದ್ದಾರೆ. ಸ್ಥಳಕ್ಕೆ ತಹಸೀಲ್ದಾರ್ ಕೆ.ಎಸ್.ಸೋಮಶೇಖರ್, ಮದ್ದೂರು ಸರ್ಕಲ್ ಇನ್ಸ್‌ಪೆಕ್ಟರ್ ಕೆ.ಆರ್.ಪ್ರಸಾದ್ ಹಾಗೂ ಹಿರಿಯ ಅಧಿಕಾರಿಗಳು ಭೇಟಿ ನೀಡಿ, ಕ್ರಮ ವಹಿಸಿದ್ದಾರೆ.

ಭಾರಿ ಮದ್ಯ ವಶ: ಚುನಾವಣಾ ನೀತಿ ಸಂಹಿತೆ ಉಲ್ಲಂಘಿಸಿ ಸಾಗಿಸುತ್ತಿದ್ದ ಆರೋಪದಡಿ ರಾಜ್ಯದ ವಿವಿಧೆಡೆ 15.37 ಕೋಟಿ ಮೌಲ್ಯದ ಮದ್ಯ, ಸುಮಾರು 45 ಲಕ್ಷ ನಗದು ಹಾಗೂ ಮಾದಕ ವಸ್ತುಗಳನ್ನು ವಶಪಡಿಸಿ



● 9ನೇ ಪುಟಕ್ಕೆ

ನೀವೇನು ಅರಮನೆಗೆ ಬರಬೇಡಿ, ನಾನೇ ನಿಮ್ಮ ಬಳಿ ಬರುತ್ತೇನೆ

ಬಿಜೆಪಿ ಮಾಧ್ಯಮ ಸಂವಾದದಲ್ಲಿ ಮೈಸೂರು–ಕೊಡಗು ಬಿಜೆಪಿ ಅಭ್ಯರ್ಥಿ ಯದುವೀರ್ ಜನರಿಗೆ ಭರವಸೆ

- ನಾನು ರಾಜ ಎಂದು ಯಾವತ್ತೂ ಘೋಷಿಸಿಕೊಂಡಿಲ್ಲ
- ನಾನು ಸಹ ಸಾಮಾನ್ಯ ವ್ಯಕ್ತಿ ಎಂಬುದ ಮರೆಯಬೇಡಿ
- ಸಂವಿಧಾನದ ಪ್ರಕಾರ ದೇಶದ ಎಲ್ಲರೂ ಸರಿ ಸಮಾನರು
- ನಾನು ಟಿಕೆಟ್ ಕೇಳಿಲ್ಲ, ಬಿಜೆಪಿಯೇ ನನಗೆ ಟಿಕೆಟ್ ಕೊಟ್ಟಿದೆ

ಮೈಸೂರು, ಮಾ.18(ಬಿಎಲ್‌ಯು)–ನಾನು ರಾಜ ಎಂದು ಯಾವತ್ತೂ ಘೋಷಿಸಿಕೊಂಡಿಲ್ಲ. ಜನರು ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಅರಮನೆಗೆ ಬರಬೇಕಿಲ್ಲ, ನಾನೇ ಅವರ ಬಳಿಗೆ ಹೋಗುತ್ತೇನೆ ಎಂದು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಭರವಸೆ ನೀಡಿದ್ದಾರೆ.

ಮೈಸೂರಿನ ಗ್ರೀನ್ ಹೆರಿಟೇಜ್ ಹೋಟೆಲ್‌ನಲ್ಲಿ ಇಂದು ಬಿಜೆಪಿ ಆಯೋಜಿಸಿದ್ದ ಮಾಧ್ಯಮ ಸಂವಾದದಲ್ಲಿ ಮಾತನಾಡಿದ ಅವರು, ನಾನು ಸಾಮಾನ್ಯರಲ್ಲಿ ಸಾಮಾನ್ಯನಾಗಿ ಇರುತ್ತೇನೆ ನನ್ನನ್ನು ಸಂಸದ, ಪ್ರತಿನಿಧಿ ಏನು ಬೇಕಾದರೂ ಕರೆಯಿರಿ. ನಾನು ಕೂಡ ಸಾಮಾನ್ಯ ವ್ಯಕ್ತಿ ಎಂಬುದನ್ನು ಮರೆಯಬೇಡಿ. ರಾಜ ಪ್ರಭುತ್ವ ಇದ್ದಾಗ ಒಂದು ಪದವಿ ಇತ್ತು, ಹಕ್ಕು ಇತ್ತು. ಆದರೆ ಈಗ ಭಾರತ ಸಂವಿಧಾನಾತ್ಮಕವಾಗಿ ರೂಪುಗೊಂಡ ರಾಷ್ಟ್ರ. ಇಲ್ಲಿ ಎಲ್ಲರಿಗೂ ಒಂದೇ ರೀತಿಯ ಕಾನೂನು ಇದೆ, ಒಂದೇ ರೀತಿಯ ಸಂವಿಧಾನವಿದೆ. ಸಂವಿಧಾನಾತ್ಮಕವಾಗಿ ಇಲ್ಲಿ ಎಲ್ಲರೂ ಒಂದೇ. ಇದರಲ್ಲಿ ನಾನು ಕೂಡ ಒಬ್ಬ. ಸಂವಿಧಾನದ ಅಡಿಯಲ್ಲಿ ಎಲ್ಲರೂ ಕೆಲಸ ಮಾಡಬೇಕಿದೆ ಎಂದು ಯದುವೀರ್ ಸ್ಪಷ್ಟಪಡಿಸಿದರು.

> “ನಾನು ಸಂಸದನಾದ ನಂತರ ಅರಮನೆ ಬಿಟ್ಟು ಹೊರಗೆ ಕಚೇರಿ ತೆರೆಯುತ್ತೇನೆ. ಅಲ್ಲಿ ಜನರಿಗೆ ಸದಾ ಸಿಗುತ್ತೇನೆ. ಈ ಮೂಲಕ ಜನರೊಡನೆ ಸಂಪರ್ಕ ಸಾಧಿಸುತ್ತೇನೆ. ಬಡ ಹಾಗೂ ಸಾಮಾನ್ಯ ಜನರ ಕಷ್ಟ ಏನೆಂದು ನನಗೂ ಚೆನ್ನಾಗಿ ಗೊತ್ತಿದೆ. ನಾನು ರಾಜ ಎಂದು ಯಾವತ್ತೂ ಘೋಷಿಸಿಕೊಂಡಿಲ್ಲ. ನಾನು ಕೂಡ ಸಾಮಾನ್ಯರಲ್ಲಿ ಸಾಮಾನ್ಯ ಎಂಬುವುದನ್ನು ಪುನರ್ ಸ್ಪಷ್ಟಪಡಿಸುತ್ತೇನೆ.
> –ಯದುವೀರ್

ಈಗ ಬರೀ ಮಾತನಾಡುವುದಲ್ಲ. ನಾನು ಒಬ್ಬ ಸಾಮಾನ್ಯ ಸಂಸದ ಎಂಬುದನ್ನು ಮುಂದಿನ ದಿನಗಳಲ್ಲಿ ನನ್ನ ಕೆಲಸದ ಮೂಲಕ ಮಾಡಿ ತೋರಿಸುತ್ತೇನೆ. ಆಧುನಿಕ ತಂತ್ರಜ್ಞಾನದ ಮೂಲಕ ಜನರೊಡನೆ ಸಂಪರ್ಕ ಸಾಧಿಸಲು ಬಹಳಷ್ಟು ಮಾರ್ಗಗಳಿವೆ. ಈ ಮೂಲಕ ಖುದ್ದಾಗಿ ಜನರೊಡನೆ ಒಡನಾಟ ಹೊಂದುತ್ತೇನೆ. ಸಮಸ್ಯೆಗಳನ್ನು ಹೊತ್ತು ಜನರು ಅರಮನೆಗೆ ಅಲೆಯಬೇಕಿಲ್ಲ. ನಾನೇ ಅರಮನೆಯಿಂದ ಹೊರಗೆ ಬರುತ್ತೇನೆ ಎಂದು ಜನರಲ್ಲಿ ವಿಶ್ವಾಸ ಮೂಡಿಸಿದರು. ಮೈಸೂರು ಅರಮನೆಗೆ ಒಂದು ದೊಡ್ಡ ಪರಂಪರೆ ಇದೆ. ದಸರಾ ಹಬ್ಬದ ಸಂದರ್ಭದಲ್ಲಿ ಅರಮನೆಯ ಸಾಂಪ್ರದಾಯಿಕ ಹಾಗೂ ಧಾರ್ಮಿಕ ಕಾರ್ಯಗಳಿಗೆ ಅಲ್ಲಿ ಸೀಮಿತನಾಗಿರುತ್ತೇನೆ. ಅದು ಮುಗಿದ ನಂತರ ಹೊರಗೆ ಬಂದು ನಾನು ಕೂಡ ಜನರೊಡನೆ ಸಾಮಾನ್ಯ ವ್ಯಕ್ತಿಯಾಗಿರುತ್ತೇನೆ ಎಂದು ಯದುವೀರ್ ಹೇಳಿದರು. ಮೈಸೂರು ರಾಜಮನೆತನ ಸಮಾಜಕ್ಕೆ ನೀಡಿರುವ ಕೊಡುಗೆಯನ್ನು ಸ್ಮರಿಸಿ, ಕಳೆದ 9 ವರ್ಷದಿಂದ ನನಗೆ ಮನೆ ಮಗ ಹಾಗೂ ಸಹೋದರನಾಗಿ ಜನರು ಪ್ರೀತಿ ತೋರಿದ್ದಾರೆ. ಇದೇ ರೀತಿಯ ಪ್ರೀತಿ–ವಿಶ್ವಾಸ ನನಗೆ ಮುಂದೆಯೂ ನೀಡಿ ಎಂದು ಮನವಿ ಮಾಡಿದರು. ನನ್ನ ವೈಯಕ್ತಿಕ ಸಿದ್ಧಾಂತ ಹಾಗೂ ನಂಬಿಕೆಗಳು ಬಿಜೆಪಿ ಪಕ್ಷಕ್ಕೆ ಹತ್ತಿರವಿದೆ.

● 9ನೇ ಪುಟಕ್ಕೆ



ಮೈಸೂರಿನ ಗ್ರೀನ್ ಹೆರಿಟೇಜ್ ಹೋಟೆಲ್‌ನಲ್ಲಿ ಸೋಮವಾರ ಬಿಜೆಪಿ ಆಯೋಜಿಸಿದ್ದ ಮಾಧ್ಯಮ ಸಂವಾದದಲ್ಲಿ ಮೈಸೂರು ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿದರು.

ನಮ್ಮ ತಾಯಿ ಪ್ರಚಾರಕ್ಕೆ ಬರುವ ಅವಶ್ಯಕತೆ ಇಲ್ಲ

ಸದ್ಯಕ್ಕೆ ನಮ್ಮ ತಾಯಿ ಪ್ರಮೋದಾದೇವಿ ಒಡೆಯರ್ ಅವರು ಪ್ರಚಾರಕ್ಕೆ ಬರುವ ಅವಶ್ಯಕತೆ ಇಲ್ಲ ಎಂದು ಯದುವೀರ್ ಸ್ಪಷ್ಟಪಡಿಸಿದರು. ನಾನು ಚುನಾವಣೆಯಲ್ಲಿ ಸ್ಪರ್ಧೆ ಮಾಡುವುದಕ್ಕೆ ನಮ್ಮ ತಾಯಿಯ ಸಂಪೂರ್ಣ ಆಶೀರ್ವಾದವಿದೆ. ಅವರ ಅನುಮತಿ ಪಡೆದೇ ಚುನಾವಣೆಯಲ್ಲಿ ಸ್ಪರ್ಧೆ ಮಾಡುತ್ತಿದ್ದೇನೆ. ನಮ್ಮ ತಾಯಿ ವಿರೋಧವಿದೆ ಎಂಬ ಹೇಳಿಕೆಗಳು ಶುದ್ಧ ಸುಳ್ಳು. ನಮ್ಮ ತಾಯಿಯ ಬೆಂಬಲವಿಲ್ಲದೆ ಇದನ್ನೆಲ್ಲಾ ಮಾಡಲು ಸಾಧ್ಯವಿಲ್ಲ ಎಂದು ಸ್ಪಷ್ಟನೆ ನೀಡಿದರು. ವಾಸ್ತವತೆ ತಿಳಿಯದೆ ಇಂತಹ ಮಾತುಗಳನ್ನು ಆಡಬಾರದು ಎಂದು ತಮ್ಮ ಕುಟುಂಬದ ಬಗೆಗಿನ ಗಾಳಿ ಸುದ್ದಿ ಹರಡುತ್ತಿರುವವರಿಗೆ ಯದುವೀರ್ ತಿರುಗೇಟು ಕೊಟ್ಟರು.

ಯದುವೀರ್, ಸಿಂಹ ಒಗ್ಗಟ್ಟಿನ ಮಂತ್ರ; ರಂಗೇರಿದ ಬಿಜೆಪಿ ಚುನಾವಣಾ ಕಣ

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಹಾಗೂ ಹಾಲಿ ಸಂಸದ ಪ್ರತಾಪ್ ಸಿಂಹರ ಒಗ್ಗಟ್ಟು ಪ್ರದರ್ಶನ ಹಾಗೂ ಮಂತ್ರ ಜಪಿಸುವುದರೊಂದಿಗೆ ಲೋಕಸಭಾ ಚುನಾವಣೆ ಕಣ ರಂಗೇರಿದೆ. ಇಂದು ನಡೆದ ಮಾಧ್ಯಮ ಗೋಷ್ಠಿಯಲ್ಲಿ ಅಕ್ಕಪಕ್ಕ ಕುಳಿತು ಇಬ್ಬರೂ ಒಗ್ಗಟ್ಟು ಸಂದೇಶ ಸಾರಿದರು. ಟಿಕೆಟ್ ದೊರೆಯದ ಸಂದರ್ಭದಲ್ಲಿ ಪ್ರತಾಪ್ ಸಿಂಹ ಸಹಜ ಕೋಪ, ಬೇಸರ ತಾಳಿದ್ದರು. ಟಿಕೆಟ್ ವಂಚಿತರಾದ ನಂತರ ಮೈಸೂರಲ್ಲಿ ಕಾಣಿಸಿಕೊಳ್ಳದ ಪ್ರತಾಪ್ ಸಿಂಹ ಇಂದು ಸಾರ್ವಜನಿಕವಾಗಿ ದಿಢೀರ್ ಪ್ರತ್ಯಕ್ಷರಾದರು. ಯದುವೀರ್ ಗೆಲ್ಲಿಸಲು ಚುನಾವಣಾ ಏಜೆಂಟ್ ಅಂತೆ ಕೆಲಸ ಮಾಡುತ್ತೇನೆ ಎಂದು ಸ್ಪಷ್ಟಪಡಿಸಿದರು.

ಈ ಬಗ್ಗೆ ಪ್ರತಿಕ್ರಿಯೆ ನೀಡಿದ ಯದುವೀರ್, ಪ್ರತಾಪ್ ಸಿಂಹ ಬಗ್ಗೆ ನನಗೆ ಅಪಾರ ನಂಬಿಕೆ ಇದೆ. ನನ್ನ ಪರವಾಗಿ ಚುನಾವಣಾ ಕಾರ್ಯಗಳಲ್ಲಿ ಸಕ್ರಿಯರಾಗುತ್ತಾರೆಂಬ ವಿಶ್ವಾಸವಿದೆ ಎಂದರು.

ಮೈಸೂರು ಮಿತ್ರ

ಮಂಗಳವಾರ 19 ಮಾರ್ಚ್ 2024

ಯುವ ಸಮುದಾಯದಲ್ಲಿ ಪ್ರಶ್ನಿಸುವ ಮನೋಭಾವ ಅಗತ್ಯ



ಮೈಸೂರು, ಮಾ. 18– ಯುವ ಸಮುದಾಯದಲ್ಲಿ ಸಾಮಾಜಿಕ ಕಾಳಜಿ ಮತ್ತು ಪ್ರಶ್ನಿಸುವ ಮನೋಭಾವ ಅಗತ್ಯವಿದೆ. ಇದರಿಂದ ವಿಚಾರಶೀಲತೆಯೂ ಇಮ್ಮಡಿಯಾಗುತ್ತದೆ ಎಂದು ಸ್ಪಂದನಾ ಸಾಂಸ್ಕೃತಿಕ ಪರಿಷತ್ತಿನ ಅಧ್ಯಕ್ಷ ಹಾಗೂ ಸಾಹಿತಿ ಟಿ. ಸತೀಶ್ ಜವರೇಗೌಡ ಅಭಿಪ್ರಾಯಪಟ್ಟರು.

ಮೈಸೂರು ವಿವಿ ರಾಷ್ಟ್ರೀಯ ಸೇವಾ ಯೋಜನೆ ಹಾಗೂ ವಿಶ್ವಕವಿ ಕುವೆಂಪು ಪ್ರಥಮ ದರ್ಜೆ ಕಾಲೇಜಿನ ವತಿಯಿಂದ ತಾಲೂಕಿನ ಬಡಗಲಹುಂಡಿಯಲ್ಲಿ ಆಯೋಜಿಸಿದ್ದ ವಾರ್ಷಿಕ ವಿಶೇಷ ಶಿಬಿರದಲ್ಲಿ ಭಾಗವಹಿಸಿ, ಯುವ ಸಮುದಾಯದಲ್ಲಿ ಸಾಮಾಜಿಕ ಜವಾಬ್ದಾರಿಗಳು' ಕುರಿತು ಉಪನ್ಯಾಸ ನೀಡಿ, ಮಾತನಾಡಿದರು.

ಯುವ ಸಮುದಾಯ ಆದಷ್ಟು ಹೃದಯ ವೈಶಾಲ್ಯತೆ ಹೊಂದಿರಬೇಕು. ವೈಯಕ್ತಿಕ ಮತ್ತು ಕೌಟುಂಬಿಕ ನೆಲೆಯ ಮೀರಿ ಸಾಮಾಜಿಕ ನೆಲೆಯಲ್ಲಿ ಬದುಕಬೇಕು. ಸಮಾಜದಲ್ಲಿನ ನೆರೆಹೊರೆಯವರ ಹಿತವನ್ನು ಕಾಯಬೇಕು. ಸ್ವಾರ್ಥ ಕೇಂದ್ರಿತವಾಗಿ ಆಲೋಚಿಸದೆ ಇತರರ ಅಭ್ಯುದಯಕ್ಕೂ ಶ್ರಮಿಸಬೇಕು. ಜಾತೀಯತೆ, ಧರ್ಮಾಂಧತೆ, ಸ್ವಜನ ಪಕ್ಷಪಾತ, ಭ್ರಷ್ಟಾಚಾರಗಳಿಂದ ದೂರವಿರಬೇಕೆಂದು ಕರೆ ನೀಡಿದರು.

ಅದಮ್ಯ ರಂಗಶಾಲೆಯ ಸಂಸ್ಥಾಪಕ ಕಾರ್ಯದರ್ಶಿ ಚಂದ್ರು ಮಂಡ್ಯ ಮಾತನಾಡಿ, ಇಂದಿನ ಯುವ ಜನರಲ್ಲಿ ಶಿಸ್ತು, ಏಕಾಗ್ರತೆ, ವಿಚಾರವಂತಿಕೆ, ಕುತೂಹಲ, ಉತ್ಸಾಹದ ಮನೋಭಾವದ ಕೊರತೆ ಅಗಾಧವಾಗಿದೆ. ಇದರಿಂದಾಗಿ ಯುವ ಜನರು ಒಂದೇ ಸೋಲಿಗೆ ಹತಾಶರಾಗುತ್ತಿದ್ದಾರೆ. ಮತ್ತೆ ಮತ್ತೆ ಪ್ರಯತ್ನ ಮಾಡುವ ಛಲ ಕಾಣುತ್ತಿಲ್ಲ ಎಂದು ವಿಷಾದಿಸಿದರು.

ತಾಲೂಕು ಪಂಚಾಯತಿಯ ಮಾಜಿ ಸದಸ್ಯ ಮುದ್ದುರಾಮೇಗೌಡ ಅಧ್ಯಕ್ಷತೆ ವಹಿಸಿದ್ದರು. ಹಾಲು ಉತ್ಪಾದಕರ ಸಹಕಾರ ಸಂಘದ ನಿರ್ದೇಶಕಿ ನೀಲಮ್ಮ, ವಿಶ್ವಕವಿ ಕುವೆಂಪು ಪ್ರಥಮ ದರ್ಜೆ ಕಾಲೇಜಿನ ಕನ್ನಡ ಸಹಾಯಕ ಪ್ರಾಧ್ಯಾಪಕ ಡಾ.ವೈ ನಾಗರಾಜು, ದೈಹಿಕ ಶಿಕ್ಷಣ ಉಪನ್ಯಾಸಕ ಕಿರಣ್, ಎನ್‌ಎಸ್‌ಎಸ್ ಶಿಬಿರದ ನಿರ್ದೇಶಕ ಎಸ್.ಆನಂದ್, ಸಹ ಶಿಬಿರಾಧಿಕಾರಿ ಸಿ.ಧರ್ಮೇಂದ್ರ ಉಪಸ್ಥಿತರಿದ್ದರು.

ಬಳಿಕ ಶಿಬಿರಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಕರ್ನಾಟಕದಲ್ಲಿ ಬರ; ಮನವಿ ಮಾಡಿದರೂ ಪರಿಹಾರ ಕಲ್ಪಿಸದೇ ಇರುವುದಕ್ಕೆ ಸಿಎಂ ಸಿದ್ದರಾಮಯ್ಯ ಪ್ರಧಾನಿ ಮೋದಿಗೆ ಬಹಿರಂಗ ಪ್ರಶ್ನೆ

ಬೆಂಗಳೂರು, ಮಾ. 18(ಕೆಎಂಶಿ)– ರಾಜ್ಯದಲ್ಲಿ ಬರ ಘೋಷಣೆ ಮಾಡಿ 6 ತಿಂಗಳು ಕಳೆದಿದ್ದು, 18,177 ಕೋಟಿ ರೂ. ಪರಿಹಾರ ಕೋರಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿರುವುದಲ್ಲದೆ, ಖುದ್ದಾಗಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಷಾ ಅವರನ್ನು ಭೇಟಿ ಮಾಡಿ ಮನವಿ ಮಾಡಿದ್ದರೂ, ಇದುವರೆಗೆ ನಯಾಪೈಸೆ ಪರಿಹಾರದ ಹಣ ಬಿಡುಗಡೆ ಆಗಿಲ್ಲ, ರಾಜ್ಯದ ರೈತರ ಮೇಲೆ ಯಾಕೆ ದ್ವೇಷ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಈ ಸಂಬಂಧ ಪ್ರಕಟಣೆ ಬಿಡುಗಡೆ ಮಾಡಿರುವ ಅವರು, ರೈತ ಚಳವಳಿಗಳ ತವರು ನೆಲ ಶಿವಮೊಗ್ಗಕ್ಕೆ ಆಗಮಿಸುತ್ತಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಸ್ವಾಗತ ಬಯಸುತ್ತೇನೆ ಎಂದು ಸಿದ್ದರಾಮಯ್ಯ ತಮ್ಮ ಪ್ರಶ್ನಾವಳಿಯನ್ನು ಮುಂದಿಟ್ಟಿದ್ದಾರೆ.



ಬರದಿಂದ ಜನರು ಗುಳೆ ಹೋಗುವುದನ್ನು ತಪ್ಪಿಸಲು ನರೇಗಾ ಯೋಜನೆಯಡಿ ಕೆಲಸದ ದಿನಗಳನ್ನು 100 ರಿಂದ 150ಕ್ಕೆ ಹೆಚ್ಚಳ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದರೂ ಇದುವರೆಗೆ ಯಾವುದೇ ಸ್ಪಂದನೆ ದೊರೆತಿಲ್ಲ. ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಸರ್ಕಾರ ಬಜೆಟ್‌ನಲ್ಲಿ 5,300 ಕೋಟಿ ರೂ. ಅನುದಾನ ಘೋಷಿಸಿ ವರ್ಷಗಳೇ ಕಳೆದರೂ ಇದುವರೆಗೆ ನಯಾಪೈಸೆ ರಾಜ್ಯಕ್ಕೆ ಬಂದಿಲ್ಲ, ಮಹದಾಯಿ ಮತ್ತು ಮೇಕೆದಾಟು ಯೋಜನೆಗಳಿಗೆ ಕೇಂದ್ರದ ಅನುಮತಿ ಸಿಗದೆ ನೆನೆಗುದಿಗೆ ಬಿದ್ದಿವೆ.

ಕಾವೇರಿ ನದಿ ನೀರು ಹಂಚಿಕೆ ವಿಷಯದಲ್ಲಿ ಸಂಕಷ್ಟ ಸೂತ್ರ ರಚನೆಗೆ ಮಧ್ಯಸ್ಥಿಕೆ ವಹಿಸದೆ ಕೇಂದ್ರ ಸರ್ಕಾರ ನಾಡಿನ ರೈತರನ್ನು ಕೈಬಿಟ್ಟಿತ್ತು, ರಾಜ್ಯದ ರೈತರಿಗೆ ಯಾಕೆ ಈ ಸಾಲು ಸಾಲು ಅನ್ಯಾಯಗಳು ಎಂದು ಪ್ರಶ್ನಿಸಿದ್ದಾರೆ. ಬಿ.ಎಸ್.ಯಡಿಯೂರಪ್ಪ ಅವರು ರೈತರ ಸಾಲ ಮನ್ನಾ ಭರವಸೆ ನೀಡಿ ಮುಖ್ಯಮಂತ್ರಿಯಾದ ನಂತರ ಸರ್ಕಾರದ ಬಳಿ ನೋಟ್ ಪ್ರಿಂಟ್ ಮಾಡುವ ಮೆಷಿನ್ ಇಲ್ಲ ಎಂದಿದ್ದರು, ರಸಗೊಬ್ಬರ ಕೇಳಿದ ರೈತರ ಮೇಲೆ ಹಾವೇರಿಯಲ್ಲಿ ಗೋಲಿಬಾರ್ ಮಾಡಿಸಿದ್ದರು, ಇಂತಹವರ ಮಗನ ಪರವಾಗಿ ಮತ ಕೇಳಲು ನಿಮ್ಮ ಆತ್ಮಸಾಕ್ಷಿ ಒಪ್ಪುವುದೇ ಎಂದಿದ್ದಾರೆ.

ಶ್ರೀನಿವಾಸಪ್ರಸಾದ್‌ರಿಗೆ ಅಭಿನಂದನೆ



ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಘಟಿಕೋತ್ಸವ ಸಭಾಂಗಣದಲ್ಲಿ ನಡೆದ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ ರಾಜಕೀಯ ಸುವರ್ಣ ಮಹೋತ್ಸವ ಅಭಿನಂದನಾ ಸಮಾರಂಭದಲ್ಲಿ ಜಿಲ್ಲಾ ಮೀನುಗಾರರ ಪ್ರಕೋಷ್ಠ ಸಂಚಾಲಕ ಡಿ.ಮಹೇಶ್ ನಾಯಕ ಇತರರು ಸಂಸದ ಶ್ರೀನಿವಾಸ್‌ಪ್ರಸಾದ್ ಅವರಿಗೆ ಹೂ ಗುಚ್ಛ ನೀಡಿ, ಅಭಿನಂದಿಸಿದರು. ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಚಿತ್ರದಲ್ಲಿದ್ದಾರೆ.

ಅನಂತಗೀತ ವಿದ್ಯಾಲಯದಲ್ಲಿ ಹತ್ತನೇ ತರಗತಿ ವಿದ್ಯಾರ್ಥಿಗಳಿಂದ ಗುರುವಂದನಾ ಕಾರ್ಯಕ್ರಮ



ಮೈಸೂರು, ಮಾ. 18– ಮೈಸೂರಿನ ವಿಜಯನಗರದಲ್ಲಿರುವ ಅನಂತಗೀತ ವಿದ್ಯಾಲಯದಲ್ಲಿ 2023–24ನೇ ಸಾಲಿನ ಹತ್ತನೇ ತರಗತಿ ವಿದ್ಯಾರ್ಥಿಗಳು ಗುರುವಂದನಾ ಕಾರ್ಯಕ್ರಮವನ್ನು ಬಹಳ ಅರ್ಥಗರ್ಭಿತವಾಗಿ ಆಚರಿಸಿದರು.

ಈ ವೇಳೆ ವಿದ್ಯಾರ್ಥಿ ನಾಯಕರಾದ ಚಿನ್ಮಯಿಗೌಡ, ಗುರು ಮತ್ತು ಶಿಷ್ಯ ಪರಂಪರೆಯ ಮಹತ್ವವನ್ನು ಕುರಿತು ಸಹಪಾಠಿಗಳಿಗೆ ಮನವರಿಕೆ ಮಾಡಿದರು. ಕುಶಾಲ್ ರಾಜ್, ಮೋನಿಕಾ, ಹರ್ಷಿತ ವಿದ್ಯಾರ್ಥಿಗಳು ತಾವು ಶಾಲೆಯಲ್ಲಿ ಕಲಿತ 12 ವರ್ಷಗಳ ಸುದೀರ್ಘ ಅನುಭವವನ್ನು ಬಿಚ್ಚಿಟ್ಟರು. ನಂತರ ವಿದ್ಯಾರ್ಥಿಗಳಿಂದ ಗೌರವ ಸ್ವೀಕರಿಸಿದ ಗುರು ವೃಂದದವರು, ವಿದ್ಯಾರ್ಥಿಗಳಿಗೆ ಮುಂಬರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆದು ತಂದೆ–ತಾಯಿಗಳಿಗೆ ಮತ್ತು ಸಂಸ್ಥೆಗೆ ಕೀರ್ತಿ ತರಬೇಕೆಂದು ಶುಭ ಹಾರೈಸಿದರು. ಸಂಸ್ಥೆಯ ಅಧ್ಯಕ್ಷ ವೇಣುಗೋಪಾಲ್ ಕಲ್ಲೂರು, ಕಾರ್ಯದರ್ಶಿ ಗೀತಾಅನಂತ ರಾಮಯ್ಯ, ನಿರ್ದೇಶಕರಾದ ಶ್ರೀಮತಿ ಮಂಜುಳ ಕಲ್ಲೂರು, ಪ್ರಾಂಶುಪಾಲರಾದ ಶ್ರೀಕಾಂತ್ ಮತ್ತು ಉಪ ಪ್ರಾಂಶುಪಾಲರಾದ ಹೆಚ್.ಪಿ.ಲೋಕೇಶ್ ಹಾಗೂ ವಿದ್ಯಾರ್ಥಿಗಳು ಮತ್ತು ಶಿಕ್ಷಕ ವೃಂದದವರು ಹಾಜರಿದ್ದರು.



ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಚಾಮರಾಜ ಕ್ಷೇತ್ರದ ದೇವರಾಜ ಬ್ಲಾಕ್ ನೂತನ ಅಧ್ಯಕ್ಷ ಯು.ಎಸ್.ರಮೇಶ್ ಅವರ ಪದಗ್ರಹಣ ಸಂದರ್ಭದಲ್ಲಿ ಮುಖಂಡರಾದ ರಾಜೀವ, ಆನಂದ್, ಮಂಜುಳಾ, ಪ್ರಚಾರ ಸಮಿತಿ ಅಧ್ಯಕ್ಷ ಶ್ರೀನಿವಾಸ್, ಮೈಸೂರು ಸಿಟಿ ಓಬಿಸಿ ಮಹಿಳಾ ಪ್ರಧಾನ ಕಾರ್ಯದರ್ಶಿ ಮಂಗಳಮ್ಮ, ಶಾಂತಮ್ಮ, ದೇವರಾಜ ಬ್ಲಾಕ್ ಕಾರ್ಯದರ್ಶಿ ಮಂಜುನಾಥ್, ಮುಖಂಡರಾದ ಜ್ಞಾನೇಶ್, ಕಾರ್ತಿಕ್, ಕಿರಣ್, ಲೋಕೇಶ್, ಯೂತ್ ಕಾಂಗ್ರೆಸ್ ಅಧ್ಯಕ್ಷ ಪವನ್ ಮತ್ತಿತರರು ಅಭಿನಂದಿಸಿದರು.

ಡಾ.ರವಿಶಂಕರ್ ಅವರಿಗೆ ಡಾ.ಪ್ರತಾಪ್ ಸಿ.ರೆಡ್ಡಿ ಪ್ರಶಸ್ತಿ



ಮೈಸೂರು, ಮಾ.18–ನಗರದ ಉಷಾ ಕಿರಣ ಕಣ್ಣಿನ ಆಸ್ಪತ್ರೆಯ ಹಿರಿಯ ನೇತ್ರ ಶಸ್ತ್ರಚಿಕಿತ್ಸಕರಾದ ಡಾ.ರವಿಶಂಕರ್ ಕೆ.ವಿ. ಅವರಿಗೆ ಮಾ.17ರಂದು ಉತ್ತರ ಪ್ರದೇಶದ ಲಕ್ನೋದಲ್ಲಿ ನಡೆದ ಗ್ಲೋಬಲ್ ಅಸೋಸಿಯೇಷನ್ ಆಫ್ ಫಿಜಿಷಿಯನ್ (ಜಿಎಪಿಐಒ) ಸಂಸ್ಥೆಯು ಕೊಡಮಾಡುವ ಪ್ರತಿಷ್ಠಿತ ಡಾ.ಪ್ರತಾಪ್ ಸಿ.ರೆಡ್ಡಿ ಲೋಕೋಪಯೋಗಿ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಈ ವೇಳೆ ಉತ್ತರಪ್ರದೇಶದ ಉಪಮುಖ್ಯಮಂತ್ರಿ ಬ್ರಿಜೇಶ್ ಪಾಠಕ್, ರಕ್ಷಣಾ ಸಚಿವ ರಾಜ್‌ನಾಥ್ ಸಿಂಗ್, ರಾಜ್ಯಸಭಾ ಸದಸ್ಯ ಸುಧಾಂಶು ತ್ರಿವೇದಿ ಉಪಸ್ಥಿತರಿದ್ದರು.

ಮಾ.24ರಂದು 36ನೇ ಅಂತರರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವ

ಮೈಸೂರು, ಮಾ. 18–ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರವು 36ನೇ ಅಂತರರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವ ಮತ್ತು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಕಲೆಮನೆ ಸಭಾಂಗಣದಲ್ಲಿ (ಹೆಬ್ಬಾಳು ಎರಡನೇ ಹಂತ ಮಂಚೇಗೌಡನಕೊಪ್ಪಲು) ಮಾ.24ರಂದು ಮಧ್ಯಾಹ್ನ 2.30ಕ್ಕೆ ಏರ್ಪಡಿಸಲಾಗಿದೆ.

ಮುಖ್ಯ ಅತಿಥಿಗಳಾಗಿ ನೃತ್ಯ ಗುರು ಡಾ.ಜಮುನಾರಾಣಿ. ವಿ.ಮಿರ್ಲೆ, ಶ್ರೀಮತಿ ಎಂ.ಎನ್. ಲತಾ ಮೋಹನ್, ಸಂಗೀತ ಶಿಕ್ಷಕರಾದ ಡಾ.ಎಲ್.ಆರ್.ರಾಮಾನುಜನ್ ಭಾಗವಹಿಸುವರು. ಇದೇ ವೇಳೆ ಲೇಖಕಿ ಸಿ.ಎಸ್.ಮಂಗಳಮ್ಮ, ಪ್ರಾಧ್ಯಾಪಕರಾದ ಡಾ.ಪ್ರತಿಭಾ ಪೆರೇರ, ಸಾಹಿತಿ ಶ್ರೀಮತಿ ಬಿ.ಆರ್.ನಾಗರತ್ನ ಅವರಿಗೆ '36ನೇ ಅಂತರರಾಷ್ಟ್ರೀಯ ನಿರಂತರ ಕಲೆಮನೆ ಕಲಾಶ್ರೀ' ಪ್ರಶಸ್ತಿ ಪ್ರದಾನ ಮಾಡಲಾಗುವುದು. ಕಾರ್ಯಕ್ರಮದ ನಂತರ ವಿದುಷಿ ಶ್ರೀಮತಿ ಧರಿತ್ರಿ ಆನಂದ ರಾವ್ ಮತ್ತು ಶಿಷ್ಯರಿಂದ ಹಳೆಯ ಚಲನಚಿತ್ರಗಳ ಭಕ್ತಿಯ ಹಾಡುಗಳ ಗಾಯನ, ಡಾ.ಕೃಪಾ ಫಡ್ಕೆ ಮತ್ತು ವಿದುಷಿ ಪೂಜಾ ಸುಗಮ್ ಅವರಿಂದ ಭರತನಾಟ್ಯ, ವಿದುಷಿ ಬನೀತಾ ನಾಗ್ ಮತ್ತು ಶಿಷ್ಯರಿಂದ ಕಥಕ್ ನೃತ್ಯ ಪ್ರದರ್ಶನ, ವಿದ್ವಾನ್ ಯೋಗೇಶ್ ಕುಮಾರ್ ಮತ್ತು ವಿದುಷಿ ಶ್ರೀಮತಿ ಸ್ನೇಹಾ ನಾರಾಯಣ್ ದಂಪತಿಗಳಿಂದ ಭರತನಾಟ್ಯ ಪ್ರದರ್ಶನ, ನಾಟ್ಯ ಗುರು ವಿದುಷಿ ಶ್ರೀಮತಿ ಆರತಿ ಅರುಣ್ ಅವರ ಹಿರಿಯ ಶಿಷ್ಯರಿಂದ ಭರತನಾಟ್ಯ ಪ್ರದರ್ಶನ ನಡೆಯಲಿದೆ.



ವರಕೋಡು ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಮೂಡಲಹುಂಡಿ ಬೀರಪ್ಪ ಬೀರೇಗೌಡ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಈ ವೇಳೆ ತಾಪಂ ಮಾಜಿ ಸದಸ್ಯ ಮುದ್ದರಾಮೇಗೌಡ, ಗ್ರಾಪಂ ಮಾಜಿ ಅಧ್ಯಕ್ಷ ವಿ.ಸಿ.ಬಸವರಾಜು, ಉಪಾಧ್ಯಕ್ಷೆ ಸುಮಿತ್ರ ಸುಬ್ಬಯ್ಯ, ಗ್ರಾಪಂ ಸದಸ್ಯರಾದ ಮೂಡಲಹುಂಡಿ ರಾಧಾಮಹದೇವ ಬಡಗಲಹುಂಡಿ, ಸದಸ್ಯರಾದ ಶಿವಣ್ಣ, ಮಹಾದೇವಮ್ಮ, ಶಂಕರ, ವರಕೂಡು ಸದಸ್ಯರಾದ ಶಿವರಾಜ್, ಸುಮಾರವಿ, ಕೆಂಪೇಗೌಡನಹುಂಡಿ ಸದಸ್ಯರಾದ ಪ್ರಕಾಶಕೃಷ್ಣ, ರಾಜಮ್ಮಸಿದ್ದೇಗೌಡ, ಸಹಕಾರ ಸಂಘ ಮಾಜಿ ಅಧ್ಯಕ್ಷ ಸಾಕಪ್ಪ, ವರಕೋಡು ರಮೇಶ್, ಮೂಡಲಹುಂಡಿ ಜಯರಾಮ್, ಮುದ್ದುಬಸವ, ಯುವ ಮುಖಂಡ ಹರೀಶ್, ಬೀರೇಗೌಡ, ವರಕೋಡು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಗ್ರಾಮದ ಮುಖಂಡರು ಇದ್ದರು.

ವಿಶ್ವವಚನ ರಸಪ್ರಶ್ನೆ: ಅನಿತಾ ಮಂಜುನಾಥ್ ವಿಜೇತೆ



ಮೈಸೂರು,ಮಾ.18–ಶರಣು ವಿಶ್ವವಚನ ಫೌಂಡೇಷನ್ ವತಿಯಿಂದ ಅಂತರ್ಜಾಲದ ಮೂಲಕ ನಡೆದ 83ನೇ ಥಟ್ ಅಂತ ಉತ್ತರಿಸಿ ವಿಶ್ವ ವಚನ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಕಡೂರಿನ ಅನಿತಾ ಮಂಜುನಾಥ್ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸುವುದರ ಮೂಲಕ ವಿಜೇತರಾಗಿದ್ದಾರೆ ಎಂದು ಫೌಂಡೇಷನ್ ಸಂಸ್ಥಾಪಕಿ ರೂಪ ಕುಮಾರಸ್ವಾಮಿ ತಿಳಿಸಿದ್ದಾರೆ.

ಇಂದು ಪಕ್ಷಿಗಳಿಗೆ ನೀರುಣಿಸುವ ಕಾರ್ಯಕ್ರಮ

ಮೈಸೂರು,ಮಾ.18–ಪವರ್ ಸ್ಟಾರ್ ಡಾ.ಪುನೀತ್ ರಾಜಕುಮಾರ್ ಅವರ 49ನೇ ಜನ್ಮದಿನದ ಪ್ರಯುಕ್ತ ಸಿದ್ಧಾರ್ಥ ಲೇಔಟ್‌ನಲ್ಲಿರುವ ಹೊಸ ಜಿಲ್ಲಾಧಿಕಾರಿ ಕಚೇರಿ ಎದುರು ಸಾಲುಮರಗಳಿಗೆ ಮಡಿಕೆಯಲ್ಲಿ ನೀರು ತುಂಬಿಸಿ ಪಕ್ಷಿಗಳಿಗೆ ದಾಹ ನೀಗಿಸುವ ಕಾರ್ಯಕ್ರಮವನ್ನು ನಾಳೆ (ಮಾ.19) ಬೆಳಗ್ಗೆ 11.30ಕ್ಕೆ ಹಮ್ಮಿಕೊಳ್ಳಲಾಗಿದೆ ಎಂದು ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಬಾಲಕೃಷ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಸೂರು ಡಿವಿಷನ್ ಕ್ಯಾಥೋಲಿಕ್ ಕ್ರಿಶ್ಚಿಯನ್ ಅಸೋಸಿಯೇಷನ್ ವತಿಯಿಂದ ಮಿಷನ್ ಆಸ್ಪತ್ರೆ ರೋಗಿಗಳಿಗೆ ಹಣ್ಣು ವಿತರಿಸುವ ಮೂಲಕ ಪವರ್ ಸ್ಟಾರ್ ಕರ್ನಾಟಕ ರತ್ನ ಡಾ.ಪುನೀತ್ ರಾಜಕುಮಾರ್ ಹುಟ್ಟುಹಬ್ಬ ಆಚರಿಸಲಾಯಿತು. ಎಂಡಿಸಿಸಿಎ ಅಧ್ಯಕ್ಷ ಜೆ.ಸ್ಟೀಫನ್ ಸುಜಿತ್, ಜಂಟಿ ಕಾರ್ಯದರ್ಶಿ ಮರಿಯಾ ಫ್ರಾನ್ಸಿಸ್, ಪಿ, ಖಜಾಂಚಿ ಜಾನ್ ಫರ್ನಾಂಡಿಸ್ ಬೆನ್ನ, ಸದಸ್ಯರಾದ ಜೋಸೆಫ್ ಮಾನ್ಯುವೇಲ್, ಲಿವಿಸ್ ಮತ್ತಿತರರು ಉಪಸ್ಥಿತರಿದ್ದರು.

ಹಿರಿಯ ಯೋಗಪಟು ಡಾ.ಗಣೇಶ್‌ಕುಮಾರ್ ದಂಪತಿಗೆ ಸನ್ಮಾನ

ಮೈಸೂರು, ಮಾ.18(ಎಸ್‌ಪಿಎನ್)– ಮೈಸೂರು ವಿಜಯನಗರದಲ್ಲಿರುವ ಜಿಲ್ಲಾ ಕಸಾಪ ಭವನದ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಹಿರಿಯ ಯೋಗಾಚಾರ್ಯ ಡಾ.ಪಿ.ಎನ್.ಗಣೇಶ್‌ಕುಮಾರ್ ಅವರಿಗೆ 60 ವರ್ಷ ತುಂಬಿದ ಹಿನ್ನೆಲೆಯಲ್ಲಿ ಜಿಲ್ಲಾ ಕಸಾಪ ಹಾಗೂ ಹಿಮಾಲಯ ಪ್ರತಿಷ್ಠಾನದ ವತಿಯಿಂದ ಸನ್ಮಾನಿಸಲಾಯಿತು.

ಬಳಿಕ ಮಾತನಾಡಿದ ಡಾ.ಕೆ.ಕೃಷ್ಣಮೂರ್ತಿ, ಸಂಶೋಧನಾ ಪ್ರತಿಷ್ಠಾನದ ನಿರ್ದೇಶಕಿ ಡಾ.ಕೆ.ಲೀಲಾ ಪ್ರಕಾಶ್, ಪಿ.ಎನ್.ಗಣೇಶ್ ಕುಮಾರ್ ಹಲವಾರು ವರ್ಷಗಳಿಂದ ಯೋಗ ಕ್ಷೇತ್ರದಲ್ಲಿ ತೊಡಗಿಸಿಕೊಂಡು, ಯುವ ಪೀಳಿಗೆಗೆ ಯೋಗ ಕಲಿಸಿ, ಭಾರತೀಯ ಪರಂಪರೆ ಹಾಗೂ ಸಂಸ್ಕೃತಿ ಪರಿಚಯಿಸುವಲ್ಲಿ ಇವರ ಪಾತ್ರ ಪ್ರಮುಖವಾಗಿದೆ ಎಂದರು.



ಹಿರಿಯ ಯೋಗಾಚಾರ್ಯ ಡಾ.ಪಿ.ಎನ್.ಗಣೇಶ್‌ಕುಮಾರ್ ಅವರನ್ನು ಜಿಲ್ಲಾ ಕಸಾಪ ಹಾಗೂ ಹಿಮಾಲಯ ಪ್ರತಿಷ್ಠಾನದ ವತಿಯಿಂದ ಸನ್ಮಾನಿಸಲಾಯಿತು.

ಮನುಷ್ಯನಿಗೆ 60 ವರ್ಷ ಪೂರೈಸಿದ ಸಂದರ್ಭದಲ್ಲಿ ಜೀವನದಲ್ಲಿ ಶಾಂತಿಯನ್ನು ಬಯಸುತ್ತೇವೆ. ನಮ್ಮ ಇಂದ್ರೀಯಗಳ ನಿಗ್ರಹದಿಂದ ಶಾಂತಿ ಉಂಟಾಗಬೇಕು. ಅರಿಷಡ್ವರ್ಗಗಳಿಂದ ದೂರಾಗಬೇಕು. ಪಿ.ಎನ್.ಗಣೇಶ್‌ಕುಮಾರ್ ಹಾಗೂ ಪತ್ನಿ ಡಾ.ವಿ.ಶಶಿರೇಖಾ ಅವರು ಜೀವನದಲ್ಲಿ ತಮ್ಮದೇ ಕ್ಷೇತ್ರದಲ್ಲಿ ಸಾಧನೆ ಮಾಡುತ್ತ, ಶಾಂತಿಯುತ ಜೀವನ ನಡೆಸುತ್ತಿದ್ದಾರೆ ಎಂದರು. ಯೋಗಕ್ಷೇತ್ರದಲ್ಲಿ ಪಿ.ಎನ್. ಗಣೇಶ್‌ಕುಮಾರ್ ಸಾಧನೆ ಮಾಡಿದರೆ, ಪತ್ನಿ ಡಾ.ವಿ.ಶಶಿರೇಖಾ ಮೈಸೂರು ಸರ್ಕಾರಿ ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆಯ ಆರ್‌ಎಂಓ ಆಗಿ ಕರ್ತವ್ಯ ನಿರ್ವಹಿಸಿ, ಆಯುರ್ವೇದ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ. ಸುಖಕರವಾಗಿರಲಿ ಎಂದು ಆಶಿಸಿದರು. ವೇದಿಕೆಯಲ್ಲಿ ಯೋಗಾಚಾರ್ಯ ಎಸ್.ವಿ.ವೆಂಕಟೇಶಯ್ಯ, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮೈಸೂರು ಯೋಗ ಅಸೋಸಿಯೇಷನ್ ಅಧ್ಯಕ್ಷ ಯೋಗಪ್ರಕಾಶ್, ಮೈಸೂರು ಯೋಗ ಒಕ್ಕೂಟದ ಅಧ್ಯಕ್ಷ ಟಿ.ಜಲೇಂದ್ರಕುಮಾರ್, ವಿಪ್ರ ಮುಖಂಡ ಕೆ.ರಘುರಾಂ ವಾಜಪೇಯಿ, ಸಮಾಜ ಸೇವಕಿ ವಿದ್ಯಾ, ಹಿಮಾಲಯ ಪ್ರತಿಷ್ಠಾನದ ಉಪಾಧ್ಯಕ್ಷ ಎನ್.ಅನಂತ್ ಉಪಸ್ಥಿತರಿದ್ದರು.

ಮಾ.22, ಗೌತಮ ಪಂಚಮಹಾರಥೋತ್ಸವ

ಮೈಸೂರು, ಮಾ.18– ನಂಜನಗೂಡು ಶ್ರೀ ಶ್ರೀಕಂಠೇಶ್ವರ ಸ್ವಾಮಿ ದೇವಾಲಯದಲ್ಲಿ 2024ನೇ ಸಾಲಿನ ದೊಡ್ಡ ಜಾತ್ರೆಯ ಪ್ರಯುಕ್ತ



ಧಾರ್ಮಿಕ ಕಾರ್ಯಕ್ರಮಗಳು ಮಾ.26 ರವರೆಗೆ ಜರುಗಲಿವೆ. ಮಾ.22ರಂದು ಬೆಳಗ್ಗೆ 6.30ರಿಂದ 6.50 ಗಂಟೆಯೊಳಗೆ ಗೌತಮ ಪಂಚಮಹಾರಥೋತ್ಸವ ಹಾಗೂ ಮಾ.24ರಂದು ಸಂಜೆ 7 ಗಂಟೆಗೆ ಕಪಿಲಾ ನದಿಯಲ್ಲಿ ತೆಪ್ಪೋತ್ಸವ ಜರುಗಲಿದೆ ಎಂದು ನಂಜನಗೂಡಿನ ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಶ್ವಕರ್ಮ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಜಯರಾಮಾಚಾರ್



ಮೈಸೂರು, ಮಾ.18– ಮೈಸೂರಿನ ಶ್ರೀ ವಿಶ್ವಕರ್ಮ ಪತ್ತಿನ ಸಹಕಾರ ಸಂಘದ ನೂತನ ಕಾರ್ಯಕಾರಿ ಮಂಡಳಿ ಅಧ್ಯಕ್ಷರಾಗಿ ಜಯರಾಮಾಚಾರ್ ಹಾಗೂ ಉಪಾಧ್ಯಕ್ಷರಾಗಿ ಭಾಗ್ಯಲಕ್ಷ್ಮಿ ಆಯ್ಕೆಯಾಗಿದ್ದಾರೆ. ಶ್ರೀಕಾಂತ್ ಆಚಾರ್, ಎಸ್. ವಿಜಯಕುಮಾರ್, ಡಾ. ಎಂ. ಮೊಗಣ್ಣಚಾರ್, ಆರ್. ಮಂಜುನಾಥ, ಎ.ಎನ್.ನರಸಿಂಹಚಾರ್, ಎನ್.ಕೆ.ದಿನೇಶ್, ಪಿ.ಬಸವರಾಜು, ಎಂ.ಲತಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಸಂಘದ ಕಾರ್ಯದರ್ಶಿ ವಿ.ಕೇಶವಮೂರ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಸೂರು ವಿಭಾಗ ಮಟ್ಟದ ರೋವರ್ಸ್ ಮತ್ತು ರೇಂಜರ್ಸ್ ಮೀಟ್–2024 ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳ ಕುರಿತ ಪ್ರಹಸನ ಸ್ಪರ್ಧೆಯನ್ನು ಕೆ.ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಸುಮಾರು 60 ಕಾಲೇಜುಗಳು ಭಾಗವಹಿಸಿದ್ದವು. ಪ್ರಹಸನ ಸ್ಪರ್ಧೆಯಲ್ಲಿ ಗೀತಾ ಶಿಶು ಶಿಕ್ಷಣ ಸಂಘ, ಸಿಂಹ ಸುಬ್ಬಮಹಾಲಕ್ಷ್ಮಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿ ಪ್ರಥಮ ಬಹುಮಾನವನ್ನು ಪಡೆದುಕೊಂಡಿದ್ದಾರೆ.

ನಿಧನ



ರೋ. ಆರ್. ವೆಂಕಟೇಶ್ವರರಾವ್

ಮೈಸೂರು, ಮಾ. 18–ಮೈಸೂರಿನ ರಾಮಕೃಷ್ಣನಗರ ನಿವಾಸಿ ಹಾಗೂ ರೋಟರಿ ಮೈಸೂರು ಸೌತ್ ಈಸ್ಟ್ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷರು ಮತ್ತು ರೋಟರಿ ಮೈಸೂರು ಸೌತ್ ಈಸ್ಟ್ ಮಾಜಿ ಅಧ್ಯಕ್ಷರಾದ ರೋ. ಆರ್.ವೆಂಕಟೇಶ್ವರರಾವ್ (75) ಸೋಮವಾರ ಬೆಳಗ್ಗೆ ನಿಧನರಾದರು. ಮೃತರು ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರ ಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

19.3.2024 ಮಂಗಳವಾರ, ಮಳೆ ನಕ್ಷತ್ರ: ಉತ್ತರಾಭಾದ್ರ 17.03.2024ರಿಂದ 30.03.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಪಾಲ್ಗುಣ ಮಾಸ, ಶುಕ್ಲ ಪಕ್ಷ,
ತಿಥಿ: ದಶಮಿ, ನಕ್ಷತ್ರ: ಪುನರ್ವಸು, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ರವರೆಗೆ.

■ **ಸುಯೋಗ್ ಆಸ್ಪತ್ರೆ :** ವಿಶ್ವ ಮಹಿಳಾ ದಿನಾಚರಣೆ ಸ್ತ್ರೀಯರಲ್ಲಿ ಮಂಡಿ ಮತ್ತಿತರ ಕೀಲು ನೋವುಗಳ ಬಗ್ಗೆ ಉಪನ್ಯಾಸ, ಮಹಿಳಾ ಸಾಧಕಿಯರಿಗೆ ಸನ್ಮಾನ, ಉದ್ಘಾಟನೆ : ಪೊಲೀಸ್ ಟ್ರೈನಿಂಗ್ ಅಕಾಡೆಮಿ ಪ್ರಾಂಶುಪಾಲೆ ಎಂ.ಎಸ್.ಗೀತಾಪ್ರಸನ್ನ, ಉಪಸ್ಥಿತರು : ಸುಯೋಗ್ ವುಮೇನ್ಸ್ ಹೆಲ್ತ್‌ಕ್ಲಬ್ ಅಧ್ಯಕ್ಷೆ ಶ್ರೀಮತಿ ಪನ್ನಗ ವಿಜಯಕುಮಾರ್, ಡಾ.ಜಯಲಕ್ಷ್ಮೀ ಸೀತಾಪುರ, ಕ್ಲಬ್ ಕಾರ್ಯದರ್ಶಿ ಗಾಯಿತ್ರಿ ಸುಂದರೇಶ್, ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಸ್ಥಳ: ಸುಯೋಗ್ ಆಸ್ಪತ್ರೆ ಆವರಣ, ಇ ಅಂಡ್ ಎಫ್ ಬ್ಲಾಕ್, ರಾಮಕೃಷ್ಣನಗರ, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ವಿಕಲಚೇತನರ ಪಾಲಿಟೆಕ್ನಿಕ್:** ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರ, ಬೆಳಗ್ಗೆ 6.30ಕ್ಕೆ ಧ್ವಜಾರೋಹಣ : ಮಹಾರಾಣಿ ಮಹಿಳಾ ಕಲಾ ಕಾಲೇಜು ಗ್ರಂಥಪಾಲಕ ಡಾ. ಎಸ್. ಮುತ್ತುರಾಜ್, ಮುಖ್ಯ ಅತಿಥಿಗಳು : ಅಗ್ನಿಶಾಮಕ ಠಾಣಾ ಅಧಿಕಾರಿ ಎಸ್. ನಾಗರಾಜ ಅರಸ್, ತರಬೇತಿ ಸಂಯೋಜನಾಧಿಕಾರಿ ಕು. ಮಹಾಲಕ್ಷ್ಮಿ ಅವರಿಂದ ಅಗ್ನಿ ಅವಘಡಗಳ ನಿವಾರಣೆ ಮತ್ತು ಪ್ರಾತ್ಯಕ್ಷಿಕೆ ಕಾರ್ಯಕ್ರಮ, ಸ್ಥಳ: ಪಾಲಿಟೆಕ್ನಿಕ್ ಆವರಣ, ಸಂಜೆ 4ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಶ್ರದ್ಧೆಯ ಶಿಲ್ಪ, ಲೇಖನ ಮತ್ತು ಪ್ರಸ್ತುತಿ– ಟಿ.ಎಸ್. ಗೋಪಾಲ್, 6.40 ಪದಸಂಸ್ಕೃತಿ, ಪ್ರಸ್ತುತಿ– ಪರಮೇಶ್ವರ ವಿ. ಭಟ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ – ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ– ಉಮೇಶ್ ಎಸ್.ಎಸ್., 8.30 ಪರಾಗ–ಬೇಸಾಯದ ಬದುಕು ಸರಾಗ, ಬಾನುಲಿ ಸರಣಿ, ಪ್ರಸ್ತುತಿ–ಎನ್.ಕೇಶವಮೂರ್ತಿ, 8.45 ಕರೆಗೊಂದು ಗೀತೆ, 10.00 ಡಾ. ಎಂ. ಬಾಲಮುರಳೀಕೃಷ್ಣ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ–ಕೆ.ಎಸ್. ಸುರೇಖ, ಮಂಜುಳಾ ಗುರುರಾಜ್, 12.45 ಶಬ್ದ ಸಂಪತ್ತನ್ನು ಬೆಳೆಸುವ ಆಟಗಳು–ಮಾತನಾಡುತ್ತಾರೆ ಅನಂತ್ ಎಮ್.ಧಾಮನ್‌ಕರ್, 1.20 ಭಾವ ಗೀತೆಗಳು–ಆರ್. ಮಹೇಶ್, 3.00 ಡಾ.ಎನ್. ರಮಣಿ – ವೇಣುವಾದನ, 4.00 ಕಥಾ ಕಾಲಕ್ಷೇಪ– ಭಕ್ತ ಕುಂಬಾರ, ಪ್ರಸ್ತುತಿ– ವಿದ್ವಾನ್ ಆರ್.ಗುರುರಾಜುಲು ನಾಯ್ಡು, 6.50 ಕೃಷಿರಂಗ–ರೇಷ್ಮೆ ಸಿರಿ ಬಾನುಲಿ ಸರಣಿ, ರೇಷ್ಮೆ ಕೃಷಿ ಕುರಿತು ಸಂವಾದ. ಭಾಗವಹಿಸುವವರು ಡಾ. ಡಿ. ಜಾಯ್ಸಿರಾಣಿ ಮತ್ತು ಎನ್. ಶರತ್, 9.30 ಎಂ.ಎಸ್. ಸುಬ್ಬುಲಕ್ಷ್ಮಿ – ಹಾಡುಗಾರಿಕೆ, 10.00 ಗಮಕ ವ್ಯಾಖ್ಯಾನ, ವಾಚನ– ಕೆ.ವಿ. ವಸಂತಲಕ್ಷ್ಮಿ, ವ್ಯಾಖ್ಯಾನ– ಹೆಚ್.ವಿ.ನಾಗರಾಜರಾವ್, 10.30 ಸವಿನೆನಪು

■ **ಶ್ರೀ ದಂಡಿನ ಮಾರಮ್ಮನವರ ಪೂಜಾ ಮಹೋತ್ಸವ ಸಮಿತಿ :** ಶ್ರೀ ದಂಡಿನ ಮಾರಮ್ಮ ಮತ್ತು ಬಿಸಿಲು ಮಾರಮ್ಮನವರ ಪೂಜಾ ಕಾರ್ಯಕ್ರಮ, ಬೆಳಗ್ಗೆ 12ಕ್ಕೆ ಅನ್ನಸಂತರ್ಪಣೆ, ಸಂಜೆ 6ಕ್ಕೆ ಶ್ರೀ ದಂಡಿನ ಮಾರಮ್ಮನವರ ಉತ್ಸವ, ಸ್ಥಳ: ಶ್ರೀ ದಂಡಿನಮಾರಮ್ಮನವರ ದೇವಸ್ಥಾನ, ಮೈಸೂರು–ಬೆಂಗಳೂರು ರಸ್ತೆ

■ **ಕರ್ನಾಟಕ ರಾಜ್ಯ ಡಾ. ಬಿ.ಆರ್. ಅಂಬೇಡ್ಕರ್ ಆದಿದ್ರಾವಿಡ ಯುವಕರ ಅಭಿವೃದ್ಧಿ ಮಹಾಸಂಘ :** ಶ್ರೀದೇವಿ ಪಟ್ಟಲದಮ್ಮನವರ ಜಾತ್ರಾ ಮಹೋತ್ಸವ, ಕತ್ತಿ ಮುನೇಶ್ವರ ಪೂಜಾ ಕಾರ್ಯಕ್ರಮ, ಸ್ಥಳ: ಹೆಬ್ಬಾಳು ಕಾಲೋನಿ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಪುಣ್ಯಕೋಟಿ ಸೇವಾ ಟ್ರಸ್ಟ್ :** ನಿವೃತ್ತ ಐಎಎಸ್ ಅಧಿಕಾರಿ ಕೆ. ಶಿವರಾಮ್ ನುಡಿನಮನ ಕಾರ್ಯಕ್ರಮ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಧಾನ ಭಾಷಣ : ಸುಯೋಗ್ ಆಸ್ಪತ್ರೆ ಸಂಸ್ಥಾಪಕ ಡಾ. ಎಸ್.ಪಿ. ಯೋಗಣ್ಣ, ಮುಖ್ಯ ಅತಿಥಿಗಳು : ವಿಶ್ವಮಾನವ ಮೈಸೂರು ವಿವಿ ನೌಕರರ ವೇದಿಕೆ ಅಧ್ಯಕ್ಷ ಆರ್. ವಾಸುದೇವ್, ಪುಣ್ಯಕೋಟಿ ಸೇವಾ ಟ್ರಸ್ಟ್ ಅಧ್ಯಕ್ಷ ಹನುಮಂತೇಶ್, ಎಸ್.ಡಿ. ಶಿವಣ್ಣ, ಹಿನಕಲ್ ಮಲ್ಲೇಶ್, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನ, ವಿಜಯನಗರ 1ನೇ ಹಂತ, ಸಂಜೆ 4.30ಕ್ಕೆ.

ಎಂಆರ್‌ಸಿಗೆ ಆರು ಮಂದಿ ನೂತನ ಸದಸ್ಯರ ಆಯ್ಕೆ



ನಕುಲ್ ಕಿರಣ್ | ಅನುತಮ್ ಶಂಕರ್ ಅರಸ್ | ಭರತ್ ಎಂ.ಆರ್ | ಡಾ.ಅಕ್ಷಯ್ ಬಿ.ಕುಶಾವರ್ | ಡಾ.ಅಯ್ಯಪ್ಪ ಎಂ.ಆರ್

ಮೈಸೂರು, ಮಾ.18– ಮೈಸೂರು ರೇಸ್ ಕ್ಲಬ್‌ನ (ಎಂಆರ್‌ಸಿ) ನೂತನ ಸದಸ್ಯರಾಗಿ ನಕುಲ್ ಕಿರಣ್ (144 ಮತ), ಅನುತಮ್ ಶಂಕರ್ ಅರಸ್ (133 ಮತ), ಕುಮಾರಿ ವಜ್ರ ಜಿ.(131 ಮತ), ಭರತ್ ಎಂ.ಆರ್ (125 ಮತ), ಡಾ.ಅಕ್ಷಯ್ ಬಿ.ಕುಶಾವರ್ (124 ಮತ), ಡಾ.ಅಯ್ಯಪ್ಪ ಎಂ.ಆರ್ (111 ಮತ) ಆಯ್ಕೆಯಾಗಿದ್ದಾರೆ. ಆರು ಸದಸ್ಯ ಸ್ಥಾನಕ್ಕೆ 11 ಮಂದಿ ಸ್ಪರ್ಧಿಸಿದ್ದರು.

ಇಂದು ಎಂಆರ್‌ಸಿಯಲ್ಲಿ ಕ್ಲಬ್‌ನ ಆರು ಸದಸ್ಯತ್ವಕ್ಕಾಗಿ ನಡೆದ ಚುನಾವಣೆಯಲ್ಲಿ ಒಟ್ಟು 1218 ಮತದಾರರಲ್ಲಿ 205 ಮತಗಳು ಚಲಾವಣೆಯಾದವು. ಅವುಗಳಲ್ಲಿ 2 ಅನೂರ್ಜಿತವಾದವು. ಉಳಿದಂತೆ 203 ಮತಗಳು ಕ್ರಮಬದ್ಧವಾಗಿದ್ದವು. ಮತದಾನದ ನಂತರ ಎಣಿಕೆ ಕಾರ್ಯ ನಡೆದು ಫಲಿತಾಂಶ ಪ್ರಕಟಿಸಲಾಯಿತು.

ಎಂಆರ್‌ಸಿಯಲ್ಲಿ ಇತಿಹಾಸ ನಿರ್ಮಾಣ
ಪ್ರಪ್ರಥಮ ಬಾರಿಗೆ ಮಹಿಳಾ ಸದಸ್ಯರ ಆಯ್ಕೆ



ಕುಮಾರಿ ವಜ್ರ ಜಿ.

ಮೈಸೂರು, ಮಾ.18– ಮೈಸೂರು ರೇಸ್ ಕ್ಲಬ್ (ಎಂಆರ್‌ಸಿ) ಇತಿಹಾಸದಲ್ಲೇ ಇದೇ ಪ್ರಪ್ರಥಮ ಬಾರಿಗೆ ಮಹಿಳೆಯೊಬ್ಬರು ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಕುಮಾರಿ ವಜ್ರ ಜಿ. ಅವರು ಇಂದು ನಡೆದ ಎಂಆರ್‌ಸಿ ಚುನಾವಣೆಯಲ್ಲಿ 131 ಮತಗಳನ್ನು ಪಡೆದು ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಈ ಮೊದಲು ಸಹ ಇವರು ಸ್ಪರ್ಧಿಸಿ 15 ಮತಗಳಿಂದ ಸೋತಿದ್ದರು. ಆದರೆ ಎರಡನೇ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದಾರೆ. ಇವರು ಎಂಆರ್‌ಸಿ ಮಾಜಿ ಅಧ್ಯಕ್ಷರಾದ ವೈ.ಬಿ. ಗಣೇಶ್ ಅವರ ಪುತ್ರಿ. ಸಾಫ್ಟ್‌ವೇರ್ ಇಂಜಿನಿಯರ್ ಆಗಿರುವ ವಜ್ರ ಅವರು ತಮ್ಮ ಆಯ್ಕೆಗೆ ಸಹಕರಿಸಿದ ಎಲ್ಲರಿಗೂ ಧನ್ಯವಾದ ಹೇಳಿದ್ದಾರೆ. ಸರ್ವೆ ಸಾಮಾನ್ಯವಾಗಿ ಹೇಳುವ ಮಾತು; 'ಯಶಸ್ವಿ ಗಂಡಸಿನ ಹಿಂದೆ ಹೆಣ್ಣಿದ್ದಾಳೆ' ಎಂಬುದಾಗಿದೆ. ನನ್ನ ಪ್ರಕಾರ 'ಯಶಸ್ವಿ ಹೆಣ್ಣಿನ ಹಿಂದೆಯೂ ಗಂಡಸು ಇರುತ್ತಾನೆ' ಇದಕ್ಕೆ ನನ್ನ ಸಾಧನೆಯೇ ಸಾಕ್ಷಿ. ನನ್ನ ಗೆಲುವಿನಲ್ಲಿ ಪುರುಷ ಸದಸ್ಯರ ಪಾತ್ರವೇ ಹೆಚ್ಚಿದೆ ಎಂದು 'ಮೈಸೂರು ಮಿತ್ರ'ನಲ್ಲಿ ಅತೀವ ಹರ್ಷ ವ್ಯಕ್ತಪಡಿಸಿದರು ವಜ್ರ.

ಮಾ.25ರವರೆಗೆ ಮತದಾರರ ಪಟ್ಟಿ ಪರಿಷ್ಕರಣೆ; ಹೆಸರು ಸೇರಿಸಲು ತ್ವರೆ ಮಾಡಿ!

ಮತದಾನವೆಂಬ ಪ್ರಬಲ ಅಸ್ತ್ರ ಪ್ರಯೋಗಿಸಲು ಇನ್ನೂ ಇದೆ ಕಾಲಾವಕಾಶ



ಮೈಸೂರು,ಮಾ.18(ಪಿಎಂ)– ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯು ಮಾ.25ರವರೆಗೂ ನಡೆಯಲಿದ್ದು, ಮುಂಬರುವ ಏ.1ರೊಳಗೆ 18 ವರ್ಷ ತುಂಬುವ ಯುವ ಮತದಾರರ ನೋಂದಣಿ ಸೇರಿದಂತೆ ಇನ್ನಿತರ ಮತದಾರರು ತಿದ್ದುಪಡಿ, ವರ್ಗಾವಣೆ ಮಾಡಿಕೊಳ್ಳಲು ಅವಕಾಶವಿದೆ. ಈ ಹಿನ್ನೆಲೆಯಲ್ಲಿ ಮತದಾನವೆಂಬ ಪ್ರಬಲ ಅಸ್ತ್ರ ಪ್ರಯೋಗಿಸಲು ಇನ್ನೂ ಕಾಲಾವಕಾಶ ಕಲ್ಪಿಸಲಾಗಿದೆ.

ದೇಶದಲ್ಲಿ ಲೋಕಸಭಾ ಚುನಾವಣೆ ಘೋಷಣೆಯಾಗಿದೆ. ಈ ಹಿನ್ನೆಲೆಯಲ್ಲಿ ಇನ್ನು ಹೊಸ ಸೇರ್ಪಡೆ ಸೇರಿದಂತೆ ಇನ್ನಾವುದೇ ಪ್ರಕ್ರಿಯೆಗೆ ಅವಕಾಶವಿಲ್ಲ ಎಂದು ಕೈಕಟ್ಟಿ ಕೂರಬೇಕಿಲ್ಲ. ಪರಿಷ್ಕರಣೆಗೆ ಕಾಲಾವಕಾಶವಿರುವ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಮತ್ತಷ್ಟು ಮತದಾರರನ್ನು ಸೇರ್ಪಡೆಗೊಳಿಸಲು ಸಜ್ಜಾಗಿದ್ದು, ಮತದಾರರು ಇದರ ಪ್ರಯೋಜನ ಪಡೆಯಬಹುದಾಗಿದೆ. ಮತದಾರರ ಪಟ್ಟಿಗೆ ಹೆಸರು ಸೇರ್ಪಡೆಗೊಳಿಸಲು ವಾರ ಕಾಲ ಅವಕಾಶವಿದ್ದು, ನವ ಮತದಾರರು ಇದರ ಪ್ರಯೋಜನ ಪಡೆದು ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿಯೇ ತಮ್ಮ ಚೊಚ್ಚಲ ಮತದಾನ ಮಾಡಬಹುದು. ಲೋಕಸಭಾ ಚುನಾವಣೆಗೆ ಈಗಾಗಲೇ ಮಾದರಿ ನೀತಿ ಸಂಹಿತೆ ಜಾರಿಯಾಗಿದೆ. ಮಾ.28ರಂದು ಚುನಾವಣಾ ಅಧಿಸೂಚನೆ ಹೊರಬೀಳಲಿದ್ದು, ಏ.4 ನಾಮಪತ್ರಗಳನ್ನು ಸಲ್ಲಿಸಲು ಕೊನೆ ದಿನವಾಗಿದೆ. ಏ.5ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ನಾಮಪತ್ರ ಹಿಂತೆಗೆದುಕೊಳ್ಳ ಏ.8 ಕೊನೆ ದಿನವಾಗಿದೆ. ಏ.26ರಂದು ಮತದಾನ ನಡೆಯಲಿದೆ.

ಮತದಾರರ ಪಟ್ಟಿ ಪರಿಷ್ಕರಣೆಯ ಕೊನೆ ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳಬೇಕೆಂದು ಜಿಲ್ಲಾಡಳಿತ ಮನವಿ ಮಾಡಿದೆ. ಜ.21ರಂದು ಜಿಲ್ಲೆಯಲ್ಲಿನ ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಿದ್ದು, ಅದರಂತೆ ಜಿಲ್ಲೆಯಲ್ಲಿ 26,99,835 ಮತದಾರರು ಇದ್ದರು. ನಂತರವೂ ಮತದಾರರ ಪಟ್ಟಿಗೆ ಸೇರ್ಪಡೆ, ತಿದ್ದುಪಡಿ ಮತ್ತು ವರ್ಗಾವಣೆಗೆ ಅವಕಾಶ ಕಲ್ಪಿಸಿದ್ದರಿಂದ ಮಾ.16ರವರೆಗೆ 20,900 ಮತದಾರರು ಹೆಚ್ಚುವರಿಯಾಗಿ ಸೇರ್ಪಡೆಯಾಗಿದ್ದಾರೆ. ಆ ಮೂಲಕ ಪ್ರಸ್ತುತ ಜಿಲ್ಲೆಯಲ್ಲಿ ಮತದಾರರ ಸಂಖ್ಯೆ 27,20,735 ಇದೆ.

ಈಗ ಲೋಕಸಭಾ ಚುನಾವಣೆ ಅಧಿಸೂಚನೆ ಬಳಿಕವೂ ಮತದಾರರ ಪಟ್ಟಿ ಪರಿಷ್ಕರಣೆಗೆ ಅವಕಾಶವಿರುವ ಹಿನ್ನೆಲೆಯಲ್ಲಿ ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಮತದಾರರು ಸೇರ್ಪಡೆಯಾಗುವ ನಿರೀಕ್ಷೆ ಇದೆ. ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಇರುವ ಬಗ್ಗೆ ಆ್ಯಪ್ ಮೂಲಕ ಖಚಿತ ಪಡಿಸಿಕೊಳ್ಳಬಹುದು. ಅಥವಾ ತಮ್ಮ ವ್ಯಾಪ್ತಿಯ ಮತಗಟ್ಟೆ ಅಧಿಕಾರಿಗಳನ್ನು ಭೇಟಿ ಮಾಡಿ ಮತದಾರರ ಪಟ್ಟಿಯಲ್ಲಿ ಹೆಸರು ಇರುವ ಬಗ್ಗೆ ಖಾತ್ರಿ ಮಾಡಿಕೊಳ್ಳಬಹುದು.

ವೋಟರ್ ಹೆಲ್ಪ್‌ಲೈನ್ ಆ್ಯಪ್: ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಗೊಳಿಸಲು ಆನ್‌ಲೈನ್ ಮೂಲಕವೂ ಚುನಾವಣಾ ಆಯೋಗ ಅವಕಾಶ ಕಲ್ಪಿಸಿದೆ. 'ವೋಟರ್ ಹೆಲ್ಪ್‌ಲೈನ್ ಆ್ಯಪ್' ಮೂಲಕ ಯುವ ಮತದಾರರು ಹೆಸರು ಸೇರ್ಪಡೆ ಮಾಡಿಕೊಳ್ಳಬಹುದು. ಜೊತೆಗೆ ಎಲ್ಲಾ ಮತದಾರರು ತಿದ್ದುಪಡಿ, ವರ್ಗಾವಣೆ ಮಾಡಿಕೊಳ್ಳಲು ಈ ಆ್ಯಪ್‌ನಲ್ಲಿ ಅವಕಾಶವಿದೆ. ಆಯಾಯ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮತದಾರರ ನೋಂದಣಾಧಿಕಾರಿಗಳನ್ನು ಭೇಟಿ ಮಾಡಿಯೂ ಪರಿಷ್ಕರಣೆಗೆ ಅರ್ಜಿ ಸಲ್ಲಿಸಬಹುದು ಎಂದು ಜಿಲ್ಲಾಧಿಕಾರಿ ಕಚೇರಿಯ ಚುನಾವಣಾ ತಹಸೀಲ್ದಾರ್ ಡಾ.ಅಶೋಕ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.



ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿದ್ದಾರೆ 41,145 ಯುವ ಮತದಾರರು ಸೇರಿ ಒಟ್ಟು 20,72,337 ಮತದಾರರು



ಮೈಸೂರು ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳಲ್ಲಿ 2024ರ ಜ.22ರ ಅಂತಿಮ ಪರಿಷ್ಕರಣೆ ಪಟ್ಟಿಯಲ್ಲಿ 18ರಿಂದ 19 ವರ್ಷ ವಯೋಮಾನದ ಯುವ ಮತದಾರರು 50,969 ಇದ್ದರು. ಈ ಪೈಕಿ ಯುವಕರು 27,195 ಹಾಗೂ ಯುವತಿಯರು 23,770 ಇದ್ದರೆ, ನಾಲ್ವರು ತೃತೀಯಲಿಂಗಿಗಳಾಗಿದ್ದರು (ಟಿಜಿ).

ಪರಿಷ್ಕರಣೆ ಮುಂದುವರೆದ ಹಿನ್ನೆಲೆಯಲ್ಲಿ ಮಾ.15ಕ್ಕೆ 3901 ಯುವ ಮತದಾರರು ಹೆಚ್ಚುವರಿಯಾಗಿ ಸೇರ್ಪಡೆಯಾದರು. ಅಂತೆಯೇ ಇದೀಗ 29,291 ಯುವಕರು, 25,576 ಯುವತಿಯರು ಇದ್ದಾರೆ. ಒಟ್ಟು 54,870 ಯುವ ಮತದಾರರು ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳ (ಪಿರಿಯಾಪಟ್ಟಣ, ಕೆಆರ್ ನಗರ, ಹುಣಸೂರು, ಹೆಚ್.ಡಿ.ಕೋಟೆ, ನಂಜನಗೂಡು, ಚಾಮುಂಡೇಶ್ವರಿ, ಕೃಷ್ಣರಾಜ, ಚಾಮರಾಜ, ನರಸಿಂಹರಾಜ, ವರುಣ ಮತ್ತು ಟಿ.ನರಸೀಪುರ ಕ್ಷೇತ್ರಗಳು) ವ್ಯಾಪ್ತಿಯಲ್ಲಿ ಇದ್ದಾರೆ. ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ ವ್ಯಾಪ್ತಿಯ ವಿಧಾನಸಭಾ ಕ್ಷೇತ್ರಗಳಲ್ಲಿ (ಮಡಿಕೇರಿ, ವಿರಾಜಪೇಟೆ, ಪಿರಿಯಾಪಟ್ಟಣ, ಹುಣಸೂರು, ಚಾಮುಂಡೇಶ್ವರಿ, ಕೃಷ್ಣರಾಜ, ಚಾಮರಾಜ ಮತ್ತು ನರಸಿಂಹರಾಜ ಕ್ಷೇತ್ರಗಳು) 41,145 ಯುವ ಮತದಾರರು ಇದ್ದಾರೆ.

ಮೈಸೂರು ಜಿಲ್ಲಾ ವ್ಯಾಪ್ತಿಯ ವಿಧಾನಸಭಾ ಕ್ಷೇತ್ರಗಳಲ್ಲಿ ಒಟ್ಟಾರೆ 27,20,735 ಮತದಾರರು ಪ್ರಸ್ತುತ (ಮಾ.16) ಇದ್ದಾರೆ. ಈ ಪೈಕಿ ಪುರುಷರು 13,40,959 ಮತ್ತು ಮಹಿಳೆಯರು 13,79,554 ಇದ್ದು, ಇತರೆ 223 ಮಂದಿ ಸೇರಿದ್ದಾರೆ. ಅಂತೆಯೇ ಮೈಸೂರು ಲೋಕಸಭಾ ಕ್ಷೇತ್ರ ವ್ಯಾಪ್ತಿಯ ವಿಧಾನಸಭಾ ಕ್ಷೇತ್ರಗಳಲ್ಲಿ 20,72,337 ಮತದಾರರು ಒಟ್ಟು (ಮಾ.16ಕ್ಕೆ) ಇದ್ದು, ಈ ಪೈಕಿ ಪುರುಷರು 10,17,120 ಮತ್ತು ಮಹಿಳೆಯರು 10,55,035 ಇದ್ದು, ಇತರೆ 182 ಮಂದಿ ಇದ್ದಾರೆ.

ಎರಡ್ಮೂರು ದಿನದಲ್ಲಿ ದಕ್ಷಿಣ ಒಳನಾಡು, ಮಲೆನಾಡಿನಲ್ಲಿ ಮಳೆ ಸಾಧ್ಯತೆ



ಬೆಂಗಳೂರು: ಮುಂದಿನ ಎರಡ್ಮೂರು ದಿನಗಳಲ್ಲಿ ರಾಜ್ಯದ ಹಲವು ಭಾಗಗಳಲ್ಲಿ ಮಳೆಯಾಗುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ಕೊಟ್ಟಿದೆ.

ಬೀದರ್ ಮತ್ತು ಕಲಬುರಗಿಯಲ್ಲಿ ಭಾನುವಾರ ತುಂತುರು ಮಳೆಯಾಗಿದ್ದು, ಇನ್ನೆರಡು ಮೂರು ದಿನಗಳಲ್ಲಿ ದಕ್ಷಿಣ ಒಳನಾಡು ಮತ್ತು ಮಲೆನಾಡು ಪ್ರದೇಶಗಳಲ್ಲಿ ಹಗುರದಿಂದ ಸಾಧಾರಣ ಮಳೆಯಾಗುವ ನಿರೀಕ್ಷೆಯಿದೆ ಎಂದು ಹೇಳಿದೆ.

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮಾಜಿ ನಿರ್ದೇಶಕ ಶ್ರೀನಿವಾಸ್ ರೆಡ್ಡಿ ಮಾತನಾಡಿ, ದಕ್ಷಿಣ ಒಳನಾಡು ಮತ್ತು ಮಲೆನಾಡು ಪ್ರದೇಶಗಳಲ್ಲಿ ಮೋಡ ಕವಿದ ವಾತಾವರಣವಿದೆ. ಅಲ್ಲದೆ, ತಮಿಳುನಾಡಿನ ಬಳಿ ಕಾಣಿಸಿಕೊಂಡಿರುವ ಟ್ರಫ್ (ವಾತಾವರಣದಲ್ಲಿ ಗಾಳಿಯ ಚಲನೆಯಿಂದ ಉಂಟಾಗುವ ಪರಿಣಾಮ) ಪರಿಣಾಮ ಕರ್ನಾಟಕದ ಮೇಲೂ ಬೀರಲಿದೆ ಎಂದು ಹೇಳಿದ್ದಾರೆ. ಮಾರ್ಚ್ 20 ಅಥವಾ 21ರಿಂದ, ಎರಡರಿಂದ ಮೂರು ದಿನಗಳ ವರೆಗೆ ತುಂತುರು ಮಳೆ ಇರಲಿದೆ. ಆದರೆ, ಈ ಮಳೆ ಅಣೆಕಟ್ಟುಗಳನ್ನು ತುಂಬಲು ಅಥವಾ ಅಂತರ್ಜಲ ಮಟ್ಟವನ್ನು ಹೆಚ್ಚಿಸಲು ಸಹಾಯ ಮಾಡುವುದಿಲ್ಲ. ಅಲ್ಪಸ್ವಲ್ಪ ಮಳೆ ಸ್ವಲ್ಪ ಸಮಯದವರೆಗೆ ತಾಪಮಾನವನ್ನು ತಗ್ಗಿಸಲು ಸಹಾಯ ಮಾಡುತ್ತದೆ. ಜನರು ಈ ನೀರನ್ನು ಮಳೆನೀರು ಕೊಯ್ಲು ಮಾಡಬೇಕು. ಇದರಿಂದ ಕುಡಿಯುವ ನೀರಿನ ಹೊರೆ ಕಡಿಮೆಯಾಗಲಿದೆ ಎಂದು ತಿಳಿಸಿದರು. ಏಪ್ರಿಲ್‌ನಲ್ಲಿ 36–40 ಮಿ.ಮೀ ಮತ್ತು ಮೇನಲ್ಲಿ 86 ಮಿ.ಮೀ ಮಳೆಯಾಗುವ ನಿರೀಕ್ಷೆಯಿದ್ದು, ಈ ವರ್ಷ ಉತ್ತಮ ಮುಂಗಾರು ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಜುಲೈನಿಂದ ಉತ್ತಮ ಮಳೆಯಾಗುವ ನಿರೀಕ್ಷೆಯಲ್ಲಿದ್ದೇವೆ ಎಂದು ರೆಡ್ಡಿ ಮಾಹಿತಿ ನೀಡಿದ್ದಾರೆ.

KSNDMC ಮಾಹಿತಿಯ ಪ್ರಕಾರ, ರಾಜ್ಯದ ಕೆಲವು ಭಾಗಗಳಲ್ಲಿ ತಾಪಮಾನವು ಸಾಮಾನ್ಯಕ್ಕಿಂತ 1 ರಿಂದ 3 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಿದೆ. ರಾಜ್ಯ ಸರಕಾರ ಈಗಾಗಲೇ 223 ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಿದೆ.

ಏತನ್ಮಧ್ಯೆ, ರಾಜ್ಯದ ಪ್ರಮುಖ ಜಲಾಶಯಗಳಲ್ಲಿ ನೀರಿನ ಮಟ್ಟದಲ್ಲಿ ಕುಸಿತ ಕಾಣುತ್ತಲೇ ಇದೆ. 123 ಪ್ರಮುಖ ಜಲಾಶಯಗಳಲ್ಲಿ ಒಟ್ಟು 895.62 ಟಿಎಂಸಿ ಅಡಿ ಸಾಮರ್ಥ್ಯದ ಪೈಕಿ 284 ಟಿಎಂಸಿ ಅಡಿಗೆ ತಲುಪಿದೆ. ಕಳೆದ ವರ್ಷ ಇದೇ ಸಮಯದಲ್ಲಿ ಜಲಾಯಶಗಳ ಮಟ್ಟ 386 ಟಿಎಂಸಿ ಅಡಿಯಷ್ಟಿತ್ತು.

ಶಂಕಿತ ನಕ್ಸಲರ ಚಲನವಲನ ವರದಿ

ದಕ್ಷಿಣ ಕನ್ನಡ–ಕೊಡಗು ಗಡಿಯಲ್ಲಿ ANF ಕೂಂಬಿಂಗ್ ಕಾರ್ಯಾಚರಣೆ ಆರಂಭ

ಮಂಗಳೂರು: ಶಂಕಿತ ನಕ್ಸಲರ ಚಲನವಲನದ ವರದಿಗಳ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ–ಕೊಡಗು ಗಡಿ ಪ್ರದೇಶಗಳಲ್ಲಿ ನಕ್ಸಲ್ ನಿಗ್ರಹ ಪಡೆ(ಎಎನ್‌ಎಫ್) ಸಿಬ್ಬಂದಿ ಕೂಂಬಿಂಗ್ ಕಾರ್ಯಾಚರಣೆ ಆರಂಭಿಸಿದೆ. ಮಡಿಕೇರಿ ಪೊಲೀಸ್ ಠಾಣಾ ವ್ಯಾಪ್ತಿಯ ಸುಬ್ರಹ್ಮಣ್ಯ ಸಮೀಪದ ಕೂಜಮಲೈ ರಬ್ಬರ್ ಎಸ್ಟೇಟ್ ಬಳಿಯ ಅಂಗಡಿಯೊಂದರಲ್ಲಿ ಶನಿವಾರ ಸಂಜೆ 8 ಮಂದಿ ಶಂಕಿತ ನಕ್ಸಲರ ತಂಡ, ಶಸ್ತ್ರಾಸ್ತ್ರಗಳೊಂದಿಗೆ ದಿನಸಿ ವಸ್ತುಗಳನ್ನು ಖರೀದಿಸಿದ ವರದಿಗಳಿವೆ. ಕೂಜಮಲೈ ರಬ್ಬರ್ ಎಸ್ಟೇಟ್ ಸುಳ್ಯ ತಾಲೂಕಿನ ಗುತ್ತಿಗಾರ್, ಕೊಲ್ಲಮೊಗ್ರು ಮತ್ತು ಕಲ್ಮಕಾರುಗಳಲ್ಲಿ ಹರಡಿಕೊಂಡಿದೆ.

ಸೋಮವಾರ ಬೆಳಗ್ಗೆ ಕೂಂಬಿಂಗ್ ಕಾರ್ಯಾಚರಣೆ ಆರಂಭವಾಗಿದೆ ಎಂದು ಸುಬ್ರಹ್ಮಣ್ಯ ಠಾಣೆಯ ಪೊಲೀಸ್ ಅಧಿಕಾರಿಯೊಬ್ಬರು ಖಚಿತಪಡಿಸಿದ್ದಾರೆ.

ನಾವು ಕೊಡಗಿನ ಗಡಿಯನ್ನು ಹಂಚಿಕೊಳ್ಳುವ ಹಳ್ಳಿಗಳ ಹಾದಿಯಲ್ಲಿದ್ದೇವೆ. ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಸಂಪಾಜೆ ಬಳಿಯ ಪ್ರದೇಶಗಳಲ್ಲಿ ನಕ್ಸಲ್ ನಿಗ್ರಹ ಪಡೆ ಸಿಬ್ಬಂದಿ ಕಾರ್ಯಾಚರಣೆ ಆರಂಭಿಸಿದ್ದಾರೆ. ನಾವು ಅಂಗಡಿ ಮಾಲೀಕರನ್ನು ವಿಚಾರಿಸಿದೆವು. ಅವರು ಶಂಕಿತ ನಕ್ಸಲರೇ ಎಂಬುದು ಖಚಿತವಾಗಿಲ್ಲ. ಅವರು (ಶಂಕಿತ ನಕ್ಸಲರು) ಹಿಂದಿಯಲ್ಲಿ ಸಂಭಾಷಣೆ ನಡೆಸುತ್ತಿದ್ದರು ಎಂದು ಅಂಗಡಿಯವರು ಹೇಳಿದ್ದಾರೆ ಎಂದು ಅಧಿಕಾರಿ ತಿಳಿಸಿದ್ದಾರೆ.

ನಿಮಗೆ ಅನುಕೂಲವಾದ ಕ್ಷೇತ್ರದಿಂದಲೇ ಲೋಕಸಭೆಗೆ ಸ್ಪರ್ಧಿಸಿ

- ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಗೆ ಬಿಜೆಪಿ ವರಿಷ್ಠರ ಒತ್ತಾಯ
- ಹೃದಯ ಶಸ್ತ್ರಚಿಕಿತ್ಸೆಯ ನಂತರ ಮಾ.25ಕ್ಕೆ ಮಂಡ್ಯದಲ್ಲಿ ನಿರ್ಧಾರ ಪ್ರಕಟ



ಬೆಂಗಳೂರು, ಮಾ. 18(ಕೆಎಂಶಿ)– ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಲೋಕಸಭಾ ಚುನಾವಣೆಗೆ ಸ್ಪರ್ಧಿಸುವಂತೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರಿಂದ ಮತ್ತೆ ತೀವ್ರ ಒತ್ತಡ ಬಂದಿದೆ.

ರಾಜ್ಯದ ಮಿತಿಯೊಳಗೇ ರಾಜಕೀಯ ಮಾಡಿಕೊಂಡು ಇರಬೇಡಿ, ಯಾವುದಕ್ಕೂ ಹೆದರದೆ ಮಂಡ್ಯ ಸೇರಿದಂತೆ ಯಾವ ಕ್ಷೇತ್ರ ಅನುಕೂಲವೋ ಅಲ್ಲಿಂದಲೇ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿ ಎಂದು ಕುಮಾರಸ್ವಾಮಿ ಅವರ ಮೇಲೆ ಪ್ರಧಾನಿ ಅವರು ಒತ್ತಡ ತಂದಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು, ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಎಂದು ಕುಮಾರಸ್ವಾಮಿ ಅವರ ಮೇಲೆ ಒತ್ತಡ ತರುತ್ತಿದ್ದಾರೆ.

ಇಬ್ಬರು ದಿಗ್ಗಜ ನಾಯಕರ ಸಲಹೆಯನ್ನು ನಯವಾಗಿ ತಳ್ಳಿ ಹಾಕಿರುವ ಕುಮಾರಸ್ವಾಮಿ, ಸದ್ಯದಲ್ಲೇ ತಾವು ಹೃದಯ ಶಸ್ತ್ರಚಿಕಿತ್ಸೆಗೆ ಒಳಗಾಗುತ್ತಿದ್ದು, ಚುನಾವಣಾ ಹೋರಾಟ ನಡೆಸಲು ಸಾಧ್ಯವಾಗುವುದಿಲ್ಲ, ಚುನಾವಣೆಯಲ್ಲಿ ಸ್ಪರ್ಧಿಸದಿರಲು ತಮಗೆ ಬೇರೆ ಯಾವುದೇ ಉದ್ದೇಶ ಇಲ್ಲ ಎಂದಿದ್ದಾರೆ.

ಈ ಬೆಳವಣಿಗೆಯ ನಂತರ ಕುಮಾರಸ್ವಾಮಿ ಅವರನ್ನು ಸಂಪರ್ಕಿಸಿದ ಪ್ರಧಾನಿ ಅವರು, ನೀವು ಲೇಸರ್ ಚಿಕಿತ್ಸೆಗೆ ಒಳಗಾಗುತ್ತಿದ್ದೀರಿ, ಯಾವುದೇ ತೊಂದರೆ ಆಗುವುದಿಲ್ಲ, ಮಾರ್ಚ್ 25ಕ್ಕೆ ಆಸ್ಪತ್ರೆಯಿಂದ ಮರಳಿದ ನಂತರ ಮಂಡ್ಯದಲ್ಲೇ ನಿರ್ಧಾರ ಪ್ರಕಟಿಸಿ ಎಂಬ ಸಲಹೆ ನೀಡಿದ್ದಾರೆ.

ಹೃದಯ ತಜ್ಞ ಡಾ.ಸಿ.ಎನ್.ಮಂಜುನಾಥ್ ಅವರು ಬಿಜೆಪಿಯಿಂದ ಸ್ಪರ್ಧಿಸಲು ಸಮ್ಮತಿಸಿರುವುದಕ್ಕೆ ಪ್ರಧಾನಿ ಅವರು ಸಂತಸ ವ್ಯಕ್ತಪಡಿಸಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ. ಪ್ರಧಾನಿ ಅವರ ಮಾತನ್ನು ತಳ್ಳಿ ಹಾಕಲಾಗದ ಕುಮಾರಸ್ವಾಮಿ ಅವರು, ಶಸ್ತ್ರಚಿಕಿತ್ಸೆ ನಂತರ ಮಾರ್ಚ್ 25ರಂದು ಮಂಡ್ಯದಲ್ಲಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರ ಸಭೆ ಕರೆದು ನಿರ್ಧಾರ ಪ್ರಕಟಿಸುವ ತೀರ್ಮಾನ ಕೈಗೊಂಡಿದ್ದಾರೆ. ಮಾಜಿ ಸಂಸದ ಸಿ.ಎಸ್.ಪುಟ್ಟರಾಜು ಅವರ ಸ್ಪರ್ಧೆಗೆ ಕುಮಾರಸ್ವಾಮಿ ಅವರು, ಈಗಾಗಲೇ ಹಸಿರು ನಿಶಾನೆ ತೋರಿದ್ದರಾದರೂ, ಪ್ರಧಾನಿ ಅವರ ಒತ್ತಡದಿಂದ ಇಕ್ಕಟ್ಟಿಗೆ ಸಿಲುಕಿದ್ದಾರೆ. ಶಸ್ತ್ರಚಿಕಿತ್ಸೆ ನಂತರ ತಮ್ಮ ಆರೋಗ್ಯ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಪ್ರಧಾನಿ ಅವರ ಮಾತಿಗೆ ಮನ್ನಣೆ ನೀಡಬೇಕೋ ಅಥವಾ ರಾಜ್ಯ ರಾಜಕಾರಣದಲ್ಲಿ ಮುಂದುವರೆಯಬೇಕೋ ಎಂಬ ಬಗ್ಗೆ ತೀರ್ಮಾನ ಕೈಗೊಳ್ಳಲಿದ್ದಾರೆ. ಈ ಮಧ್ಯೆ ಕಗ್ಗಂಟಾಗಿರುವ ಕೋಲಾರ ಲೋಕಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಅಮಿತ್ ಷಾ ಅವರೊಂದಿಗೆ ಚರ್ಚಿಸಿದ್ದಾರೆ. ಕ್ಷೇತ್ರದ ಬಗ್ಗೆ ಸದ್ಯದಲ್ಲೇ ಅಂತಿಮ ತೀರ್ಮಾನವಾಗಲಿದ್ದು, ಈ ಮಧ್ಯೆ ಕ್ಷೇತ್ರದ ಅಭ್ಯರ್ಥಿ ಆಯ್ಕೆಗೆ ಸಂಬಂಧಿಸಿದಂತೆ ಕುಮಾರಸ್ವಾಮಿ ಮುಖಂಡರ ಸಭೆ ಕರೆದಿದ್ದಾರೆ.

ಕರ್ನಾಟಕದ ಆಯ್ದ ನಗರಗಳಲ್ಲಿ ಭಾನುವಾರದಂದೂ ತೆರೆದಿರಲಿವೆ ಅಂಚೆ ಕಚೇರಿಗಳು!



ಬೆಂಗಳೂರು: ಕಚೇರಿಗೆ ತೆರಳುವವರ ಬೇಡಿಕೆಗೆ ಮಣಿದ ಕರ್ನಾಟಕ ಅಂಚೆ ಇಲಾಖೆಯು ಭಾನುವಾರದಂದು ರಾಜ್ಯಾದ್ಯಂತ ಆಯ್ದ ಕೆಲವು ಅಂಚೆ ಕಚೇರಿಗಳನ್ನು ತೆರೆಯಲು ಚಿಂತನೆ ನಡೆಸಿದೆ. ವಾರದ ಯಾವುದೇ ಕೆಲಸದ ದಿನದಂದು ಅವುಗಳನ್ನು ಮುಚ್ಚಲಾಗುತ್ತದೆ. ಇದರಿಂದ ಸಾರ್ವಜನಿಕರು ವಾರದ ಎಲ್ಲಾ ದಿನಗಳಲ್ಲಿ ಕನಿಷ್ಠ ತಮ್ಮ ನಗರಗಳಲ್ಲಿ ಯಾವುದಾದರೂ ಸ್ಥಳದಲ್ಲಿ ಅಂಚೆ ಸೇವೆಗಳನ್ನು ಪಡೆಯಬಹುದು.

ಹಿರಿಯ ಅಂಚೆ ಅಧಿಕಾರಿಯೊಬ್ಬರು ಟಿಎನ್‌ಐಇ ಜೊತೆಗೆ ಮಾತನಾಡಿ, ಅಂತಹ ಕ್ರಮವನ್ನು ಪರಿಚಯಿಸಲು ನಾವು ಸಾರ್ವಜನಿಕರಿಂದ ಸಲಹೆಗಳನ್ನು ಸ್ವೀಕರಿಸುತ್ತಿದ್ದೇವೆ. ಬೆಂಗಳೂರಿನ ಜಿಪಿಒನಲ್ಲಿ ಭಾನುವಾರ ಆರ್ಟಿಕಲ್‌ಗಳನ್ನು ಬುಕ್ ಮಾಡುವ ಸೌಲಭ್ಯವಿದೆ. ಆದಾಗ್ಯೂ, ನಗದು ಠೇವಣಿ ಅಥವಾ ಉಳಿತಾಯ ಖಾತೆಗಳಿಂದ ಹಿಂತೆಗೆದುಕೊಳ್ಳುವಿಕೆ ಅಥವಾ ಮನಿ ಆರ್ಡರ್‌ಗಳ ಬುಕಿಂಗ್‌ನಂತಹ ಹಣಕಾಸಿನ ವಹಿವಾಟುಗಳನ್ನು ನೀಡಲಾಗುವುದಿಲ್ಲ ಎಂದರು.

ಭಾನುವಾರ ಕಾರ್ಯನಿರ್ವಹಿಸುವ ಅಂಚೆ ಕಚೇರಿಗಳಲ್ಲಿ ಹಣಕಾಸಿನ ಸೇವೆಗಳ ಅಗತ್ಯತೆಯನ್ನು ಸಾರ್ವಜನಿಕರು ಬಯಸುತ್ತಿದ್ದಾರೆ. ಆದ್ದರಿಂದ ನಾವು ಈಗ ಈ ಕ್ರಮದ ಕುರಿತು ಆಲೋಚಿಸುತ್ತಿದ್ದೇವೆ. ಈಗಾಗಲೇ ಬೆಂಗಳೂರು, ಮೈಸೂರು, ಮಂಗಳೂರು ಮತ್ತು ಹುಬ್ಬಳ್ಳಿಯಂತಹ ಬಹು ಅಂಚೆ ಕಚೇರಿಗಳನ್ನು ಹೊಂದಿರುವ ಪ್ರಮುಖ ನಗರಗಳಲ್ಲಿ ಈ ವ್ಯವಸ್ಥೆಯನ್ನು ಮಾಡಲಾಗುತ್ತದೆ. ಬೆಂಗಳೂರಿನಲ್ಲಿ, ನಾವು ಭಾನುವಾರ ಐದು ಅಂಚೆ ಕಚೇರಿಗಳ ಬಾಗಿಲು ತೆರೆಯಲು ಯೋಜಿಸಿದ್ದೇವೆ. ನಗರದ ಉತ್ತರ, ದಕ್ಷಿಣ, ಪೂರ್ವ ಮತ್ತು ಪಶ್ಚಿಮದಲ್ಲಿ ತಲಾ ಒಂದು ಮತ್ತು ಕೇಂದ್ರ ವ್ಯಾಪಾರ ಜಿಲ್ಲೆಯಲ್ಲಿ ಒಂದನ್ನು ತೆರೆಯುವುದು ಸದ್ಯದ ನಮ್ಮ ಯೋಜನೆಯಾಗಿದೆ. ಇದಲ್ಲದೆ, ಈ ಅಂಚೆ ಕಚೇರಿಗಳನ್ನು ಬುಧವಾರದಂದು ಮುಚ್ಚಲು ನಾವು ಯೋಜಿಸಿದ್ದೇವೆ ಎಂದು ಅಧಿಕಾರಿ ಹೇಳಿದರು.

ನಾಟಿ ಕೋಳಿ ಸಾಕಾಣಿಕೆ ಮಾಡುವ ಮೂಲಕ ಕೃಷಿಯಲ್ಲಿ ಆದಾಯ ದ್ವಿಗುಣಗೊಳಿಸಲು ಸಾಧ್ಯ



ಮೈಸೂರು, ಮಾ.18– ರೈತರು ಉಪಕಸುಬಾಗಿ ಹಿತ್ತಲ ನಾಟಿ ಕೋಳಿ ಸಾಕಾಣಿಕೆ ಮಾಡುವ ಮಾಲಕ ಕೃಷಿಯಲ್ಲಿ ಆದಾಯ ದ್ವಿಗುಣಗೊಳಿಸಲು ಸಾಧ್ಯ ಎಂದು ಉಪ ಕೃಷಿ ನಿರ್ದೇಶಕರಾದ ಡಾ.ಜಿ.ಹೆಚ್. ಯೋಗೇಶ್ ಅವರು ಹೇಳಿದರು.

ನಾಗನಹಳ್ಳಿ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ 'ಗ್ರಾಮೀಣ ಉಪ ಆದಾಯಕ್ಕೆ ನಾಟಿ ಕೋಳಿ ಸಾಕಾಣಿಕೆ ಮತ್ತು ಉತ್ಪಾದನೆಗಿರುವ ಅವಕಾಶಗಳು' ವಿಷಯದ ಕುರಿತು ನಡೆದ ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಬಳಕೆದಾರರಲ್ಲಿ ನಾಟಿ ಕೋಳಿ ಮೊಟ್ಟೆ ಮತ್ತು ಮಾಂಸದ ಬಳಕೆ ಬಗ್ಗೆ ಬೇಡಿಕೆ ಸೃಷ್ಟಿಯಾಗುತ್ತಿದೆ. ರೈತರು ಉತ್ಪಾದನೆ ಜೊತೆಗೆ ವ್ಯವಸ್ಥಿತವಾಗಿ ಮಾರುಕಟ್ಟೆ ಸೃಷ್ಟಿಸಿಕೊಂಡು ಹೆಚ್ಚಿನ ಲಾಭಗಳಿಸಲು ಮುಂದಾಗಬೇಕು ಎಂದರು.

ಮುದ್ದೇಬಿಹಾಳ ದಾಸೋಹಿ ರೈತ ಉತ್ಪಾದಕ ಕಂಪನಿಯ ಅಧ್ಯಕ್ಷರಾದ ಅರವಿಂದ ಹುಕ್ಕಾರಾಜ್ ಕೊಪ್ಪ ಅವರು ಮಾತನಾಡಿ, ಸುಧಾರಿತ ತಳಿಗಳಾದ ಸ್ವರ್ಣಧಾರ, ಗಿರಿರಾಜ ಮತ್ತು ಸ್ಥಳೀಯವಾಗಿ ಹೆಚ್ಚು ಬೇಡಿಕೆ ಇರುವ ತಳಿಗಳನ್ನು ಆಯ್ಕೆಮಾಡಿಕೊಂಡು ಗುಣಮಟ್ಟದ ಆಹಾರ ಮತ್ತು ಸ್ವಚ್ಛತೆ ನಿರ್ವಹಣೆ ಮೂಲಕ ಮೊಟ್ಟೆ, ಮಾಂಸ ಮತ್ತು ಮರಿಗಳ ಉತ್ಪಾದನೆ ಮಾಡಿ ಮಾರಾಟ ಮಾಡುವ ಮೂಲಕ ಹೆಚ್ಚಿನ ಆದಾಯಗಳಿಸಬಹುದು. ಗುಂಪಾಗಿ ಹಿತ್ತಲ ಕೋಳಿ ಸಾಕಾಣಿಕೆ ಮಾಡಲು ಓಐಒ ಯೋಜನೆಯಡಿ ಶೇ.50 ಸಹಾಯಧನ ಪಡೆದು ಮೊಟ್ಟೆ, ಮಾಂಸ ಮತ್ತು ಮರಿ ಉತ್ಪಾದನೆ ಮಾಡಿ ಮಾರಾಟ ಮಾಡುವ ಮೂಲಕ ಹೆಚ್ಚಿನ ಆದಾಯಗಳಿಸಬಹುದು ಎಂದು ಕಿವಿಮಾತು ಹೇಳಿದರು.



ನಂಜನಗೂಡು ತಾಲೂಕಿನ ಸರಗೂರು ಗ್ರಾಮದ ಯುವ ಉದ್ಯಮಿ ಸಾಗರ್ ಅರಸ್ ಅವರು ಮಾತನಾಡಿ, ನಾಟಿ ಕೋಳಿಗಳನ್ನು ದೊಡ್ಡ ಪ್ರಮಾಣದಲ್ಲಿ ಉತ್ಪಾದಿಸುವ, ನಿರ್ವಹಿಸುವ, ಆರೋಗ್ಯ ರಕ್ಷಣೆ ಮತ್ತು ಮಾರಾಟ ಮಾಡುವ ಕುರಿತು ಅನುಭವ ಹಂಚಿಕೊಳ್ಳುತ್ತಾ ರೈತರೊಂದಿಗೆ ಸಂವಾದ ನಡೆಸಿದರು.

ನಂಜನಗೂಡು ತಾಲೂಕಿನ ಕೂಡ್ಲಾಪುರ ಪಶುಚಿಕಿತ್ಸಾಲಯದ ಹಿರಿಯ ಪಶುವೈದ್ಯಾಧಿಕಾರಿಯಾದ ಡಾ. ಸವಿತ ಅವರು ಮಾತನಾಡಿ, ಸುಧಾರಿತ ನಾಟಿ ಕೋಳಿ ತಳಿಗಳು, ಉತ್ತಮ ಕೋಳಿ ಆಹಾರದ ನಿರ್ವಹಣೆ, ಕಂಡುಬರುವ ರೋಗಗಳು, ನಿರ್ವಹಣಾ ಕ್ರಮಗಳ ಬಗ್ಗೆ ಮಾಹಿತಿ ತಿಳಿಸಿದರು. ನಂತರ ಕೋಳಿ ಸಾಕಾಣಿಕೆಗೆ ಪಶುಸಂಗೋಪನೆ ಇಲಾಖೆಯಲ್ಲಿ ದೊರೆಯುವ ಸೌಲಭ್ಯಗಳ ಬಗ್ಗೆ ತಿಳಿಸಿಕೊಟ್ಟರು.

ಕಾರ್ಯಕ್ರಮದಲ್ಲಿ ಸಹಾಯಕ ಕೃಷಿ ನಿರ್ದೇಶಕರಾದ ಮಧುಲತಾ ಹೆಚ್.ಬಿ, ಮಮತಾ ಎಸ್.ಬಿ ಮತ್ತು ವಜ್ರೇಶ್ವರಿ ಎಸ್. ಕುಲಕರ್ಣಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಸಂಗ್ಯಾ : ಪಿಡಬ್ಲ್ಯೂಡಿ ಆಫೀಸರ್ ಆಗಿದ್ದ ನೀನು ಅದ್ಯಾಕೆ ಲೋಕಾಯುಕ್ತರ ಕೈಗೆ ಸಿಕ್ಕಿ ಬಿದ್ದೆ?

ಪುಂಗ್ಯಾ : ರೋಡ್ ರೋಲರ್ ಪಂಕ್ಚರ್ ಆಗಿತ್ತೆಂದು ಬಿಲ್ ಬರೆದಿದ್ದೆ!

ಮೈಸೂರು ಮಿತ್ರ

ಮಂಗಳವಾರ, 19 ಮಾರ್ಚ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ತನಗೆ ತೋರಿದ್ದೇ ಸರಿಯಾದ ದಾರಿ ಇರಬಹುದು. ಆದರೆ ಅದು ತನ್ನ ಹೊರತು ಇನ್ನೂ ಹತ್ತು ಜನಕ್ಕೆ ಸರಿಯಾಗಿ ಕಂಡಿರಬೇಕು.–ವಿ.ಎಂ. ಇನಾಂದಾರ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ದುಡ್ಡೇ ದೊಡ್ಡಪ್ಪ, ವಿದ್ಯೆ ಅದರಪ್ಪ

ನಿಮ್ಮ ಪತ್ರಗಳು

■ ಅಭಿಮಾನಿಗಳ ಕನಸು ನನಸು ಮಾಡಿದ ಮಹಿಳಾ ಆರ್‌ಸಿಬಿ ತಂಡ

ಮಾನ್ಯರೆ,



ಕೋಟ್ಯಾಂತರ ಅಭಿಮಾನಿಗಳ ಕನಸು ಪುರುಷ ಆರ್‌ಸಿಬಿ ತಂಡ ಚಾಂಪಿಯನ್ ಆಗಬೇಕು ಎಂಬುದಾಗಿತ್ತು. ಹಾಗೆಯೇ ಈ ಕನಸಿಗಾಗಿ ಸುಮಾರು 16 ವರ್ಷಗಳಿಂದ ಕೋಟ್ಯಾಂತರ ಅಭಿಮಾನಿಗಳು ಕಾಯುತ್ತಿದದಾರೆ. ಆ ಸುಂದರ ಕ್ಷಣವನ್ನು ಮಹಿಳಾ ಆರ್‌ಸಿಬಿ ತಂಡ ಈ ವರ್ಷದ ಚಾಂಪಿಯನ್ ಆಗುವುದರೊಂದಿಗೆ ನನಸು ಮಾಡಿದೆ. ಹಾಗೆಯೇ ಕರ್ನಾಟಕ ರತ್ನ ಪುನೀತ್ ರಾಜಕುಮಾರ್ ಅವರ ಹುಟ್ಟುಹಬ್ಬದ ದಿನದಂದು ನಮ್ಮ ಮಹಿಳಾ ಆರ್‌ಸಿಬಿ ತಂಡ ಚಾಂಪಿಯನ್ ಆಗಿದ್ದು ಮತ್ತೊಂದು ವಿಶೇಷ ಹಾಗೂ ಸಂತೋಷದ ಕ್ಷಣವಾಗಿದೆ.

–ಕೆ.ಎಸ್.ಸುರೇಶ್, ಶಿಕ್ಷಕರು, ಕೆ.ಜಿ. ಹಳ್ಳಿ, ಹೆಚ್.ಡಿ.ಕೋಟೆ.

■ ಪ್ರಜಾಪ್ರಭುತ್ವದ ಹಬ್ಬ

ಮಾನ್ಯರೆ,

ಪ್ರಜಾಪ್ರಭುತ್ವದ ಹಬ್ಬ ಎಂದೇ ಕರೆಯಲ್ಪಡುವ ಲೋಕಸಭಾ ಚುನಾವಣೆಯ ವೇಳಾಪಟ್ಟಿಯನ್ನು ಕೇಂದ್ರ ಚುನಾವಣಾ ಆಯೋಗ ಅಧಿಕೃತವಾಗಿ ಪ್ರಕಟಿಸುವುದರೊಂದಿಗೆ ಲೋಕಸಭಾ ಚುನಾವಣಾ ಸಮರಕ್ಕೆ ದೇಶಾದ್ಯಂತ ವೇದಿಕೆ ಸಿದ್ದವಾಗಿದೆ. ಒಟ್ಟು ಏಳು ಹಂತಗಳಲ್ಲಿ ನಡೆಯುವ ಚುನಾವಣೆಯಲ್ಲಿ, ದೇಶದ ಸುಮಾರು 97 ಕೋಟಿ ಮತದಾರರು ತಮ್ಮ ಹಕ್ಕನ್ನು ಚಲಾಯಿಸಲಿದ್ದಾರೆ. ರಾಜ್ಯದಲ್ಲಿ ಒಟ್ಟು 5,37,85,815 ಮಂದಿ ಮತದಾರರಿದ್ದು, ಇವರ ಪೈಕಿ 2,69,33,750 ಪುರುಷರು, 2,68,47,145 ಮಹಿಳೆಯರು ಹಾಗೂ 4,920 ಇತರ ಮತದಾರರು ಇದ್ದಾರೆಂದು ಚುನಾವಣಾ ಆಯೋಗದ ಮೂಲಗಳು ತಿಳಿಸಿವೆ. ಕೇಂದ್ರ ಚುನಾವಣಾ ಆಯೋಗ, ಎಲ್ಲಾ ರಾಜ್ಯಗಳ ಜಿಲ್ಲಾಧಿಕಾರಿಗಳಿಗೂ ಕಟ್ಟುನಿಟ್ಟಿನ ಸೂಚನೆಗಳನ್ನು ರವಾನಿಸಿ, ಚುನಾವಣೆಯನ್ನು ಶಾಂತಿಯುತವಾಗಿ ಹಾಗೂ ಕಾನೂನುಬದ್ಧವಾಗಿ ನಡೆಸಬೇಕೆಂಬ ಆದೇಶ ನೀಡಿದೆ.

ದೇಶಾದ್ಯಂತ ಮಾದರಿ ನೀತಿ ಸಂಹಿತೆ ಜಾರಿಗೆ ಬಂದಿದ್ದು, ಚುನಾವಣಾ ಅಕ್ರಮಗಳನ್ನು ತಡೆಯಲು ಎಲ್ಲಾ ರಾಜ್ಯಗಳಲ್ಲೂ ವ್ಯಾಪಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಕರ್ನಾಟಕದಲ್ಲಿ ಎರಡು ಹಂತಗಳಲ್ಲಿ ಚುನಾವಣೆ ನಡೆಯಲಿದ್ದು, ಏಪ್ರಿಲ್ 26 ರಂದು ಮೊದಲ ಹಾಗೂ ಮೇ 7 ರಂದು ಎರಡನೇ ಹಂತದ ಚುನಾವಣೆ ನಡೆಯಲಿದ್ದು, ಜೂನ್ 4 ರಂದು ಮತಗಳ ಎಣಿಕೆ ನಡೆಯಲಿದ್ದು, ಅಂದೇ ಫಲಿತಾಂಶ ಕೂಡ ಪ್ರಕಟವಾಗಲಿದೆ. ದೇಶದ ಪ್ರಮುಖ ರಾಜಕೀಯ ಪಕ್ಷಗಳು ಈಗಾಗಲೇ ತಮ್ಮ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಲು ಪ್ರಾರಂಭಿಸಿದ್ದು, ಇನ್ನು ಕೆಲವೇ ದಿನಗಳಲ್ಲಿ ಇವುಗಳ ಬಗ್ಗೆ ಸ್ಪಷ್ಟ ಚಿತ್ರಣ ದೊರಕಲಿದೆ.

ಬಹಳಷ್ಟು ನಿರೀಕ್ಷೆಗಳನ್ನು ಹುಟ್ಟಿಸಿರುವ ಈ ಮಹಾ ಚುನಾವಣೆಯಲ್ಲಿ ಪ್ರತಿಯೊಬ್ಬ ಅರ್ಹ ಮತದಾರ ಪಾಲ್ಗೊಂಡು ತಮ್ಮ ಪವಿತ್ರವಾದ ಹಕ್ಕು ಅಥವಾ ಕರ್ತವ್ಯವನ್ನು ಚಲಾಯಿಸುವುದರ ಮೂಲಕ ಪ್ರಜಾಪ್ರಭುತ್ವದ ಆಶಯಗಳನ್ನು ಎತ್ತಿ ಹಿಡಿಯಬೇಕಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ,ಮೈಸೂರು, 9341731661

■ ಅಧಿಕಾರಿಗಳು ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸಲಿ

ಮಾನ್ಯರೆ,

ದೇಶದಾದ್ಯಂತ ಪ್ರಜಾತಂತ್ರ ಹಬ್ಬಕ್ಕೆ ಮುಹೂರ್ತ ಫಿಕ್ಸ್ ಆಗಿದೆ. ಚುನಾವಣೆ ಆಯೋಗ ಸಕಲ ಸಿದ್ಧತೆ ಮಾಡಿಕೊಂಡಿದೆ. ಚುನಾವಣೆ ಏಳು ಹಂತಗಳಲ್ಲಿ ನಡೆಯುತ್ತಿದ್ದು, ದೀರ್ಘಾವಧಿಯ ಚುನಾವಣೆ ಎಂದರು ತಪ್ಪಿಲ್ಲ. ಚುನಾವಣೆಯಲ್ಲಿ ಯಾವುದೇ ವಿವಾದಾತ್ಮಕ ವಿಷಯಗಳಿಗಾಗಲೀ, ಜಾತಿ, ಧರ್ಮಕ್ಕೆ ಸಂಬಂಧಿಸಿದ ವಿಷಯವಾಗಲೀ, ಯಾರೇ ತಪ್ಪು ಮಾಡಿದರೂ ಅಧಿಕಾರಿಗಳು ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕು. ಚುನಾವಣಾ ಅಕ್ರಮ ನಡೆದಾಗ ತಮಗೆ ಬೇಕಾದವರನ್ನು ರಕ್ಷಿಸುವುದು, ವಿರೋಧಿಗಳನ್ನು ವಿನಾಕಾರಣ ಅಕ್ರಮದಲ್ಲಿ ಸಿಲುಕಿಸುವುದು ನಡೆಯಬಾರದು. ಚುನಾವಣಾ ಆಯೋಗ ಮೊದಲು ಇಂತಹ ಅಧಿಕಾರಿಗಳ ಮೇಲೆ ನಿಗಾ ವಹಿಸಬೇಕು. ಮತದಾರ ತನಗೆ ಇಷ್ಟವಾದ ಅಭ್ಯರ್ಥಿ ಆಯ್ಕೆ ಮಾಡುವ ಅಧಿಕಾರ ಹೊಂದಿದ್ದು, ಅವನಿಗೆ ಮತ ಚಲಾಯಿಸಲು ನಿರ್ಭೀತಿ ವಾತಾವರಣ ಕಲ್ಪಿಸಬೇಕು. ಅಧಿಕಾರಿಗಳು ಪ್ರಾಮಾಣಿಕತೆಯಿಂದ ಚುನಾವಣಾ ಕರ್ತವ್ಯ ನಿರ್ವಹಿಸಲಿ.

–ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ ಜಿಲ್ಲೆ.

■ 'ಪೂರ್ವೋತ್ತರ'!

ಮಾನ್ಯರೆ,

ಒಂದು ಕಡೆ ವಿಜ್ಞಾನ ವಿಕಾಸ, ಮತ್ತೊಂದು ಕಡೆ ಮೌಢ್ಯ ವಿಲಾಸ–ಇಂಥ ದ್ವಂದ್ವ ಪರಿಸ್ಥಿತಿಯಲ್ಲಿದೆ ನಮ್ಮ ಸಮಾಜ. ರಾಷ್ಟ್ರಕವಿ ಕುವೆಂಪು ಅವರ ಪ್ರಕಾರ, ಮೌಢ್ಯದಲ್ಲಿ ಎರಡು ಪ್ರಕಾರಗಳು : ಜ್ಞಾನಪೂರ್ವ ಮೌಢ್ಯ ಮತ್ತು ಜ್ಞಾನೋತ್ತರ ಮೌಢ್ಯ. ಮೊದಲನೆಯದು ಅನಕ್ಷರಸ್ಥರಲ್ಲಿ, ಅವಿದ್ಯಾವಂತರಲ್ಲಿ ಕಂಡು ಬರುವಂಥದು; ಎರಡನೆಯದು, ವಿದ್ಯಾವಂತರು, ವಿದ್ವಾಂಸರು ಎನಿಸಿಕೊಂಡವರಲ್ಲಿ ವಿಜೃಂಭಿಸುವಂಥದು –ಅಪಾಯಕಾರಿ.

'ಜ್ಞಾನೋತ್ತರ'ವನ್ನು 'ಸ್ನಾತಕೋತ್ತರ (ಪಿಜಿ) ಎಂದೂ ಕರೆಯಬಹುದೇನೋ!! (ಎಷ್ಟೋ ಮಂದಿ ವಿಜ್ಞಾನ ಪ್ರಾಧ್ಯಾಪಕರು ತರಗತಿಗಳಲ್ಲಿ ವಿಜ್ಞಾನವನ್ನು ಬೋಧಿಸುತ್ತಾರೆ. ಆದರೆ ಮನೆಗೆ ಹೋಗಿ ರಾಹುಕಾಲ, ಗುಳಿಕಕಾಲ ನೋಡುತ್ತಾರೆ ಎಂಬುದು ಕುವೆಂಪು ಟೀಕೆ!)

ಜಟಾ

ಒಂದು ಕಡೆ, ರಾಷ್ಟ್ರ ರಾಜಧಾನಿಯಲ್ಲಿ
ಜಟಾಯು ಪ್ರತಿಮೆ;
ಇನ್ನೊಂದು ಕಡೆ (ಎಲ್ಲೆಡೆ)
ಜಟಾಪಟಿ ಪರಂಪರೆ!

ಗಟ್ಟಿ : ಸಾಹಿತಿ ಕೆ.ಟಿ. ಗಟ್ಟಿ ನಿಧನ. ಅಂಥ (ಚಿನ್ನದ) 'ಗಟ್ಟಿ'ಗಳೆಷ್ಟೋ ಮರೆಯಾದುದು ವಿಷಾದಕರ.

ಪತನ

ಕೆಟ್ಟಿಲ್ಲ ಕಾಲ;
ಮೇಲಾಗಿದೆ !
ಕೆಟ್ಟಿದ್ದಾರೆ ಜನ
(ಎಲ್ಲರೂ ಅಲ್ಲ)

–ಸಿಪಿಕೆ, ಹಿರಿಯ ಮೈಸೂರು.



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು,
ರಾಮಕೃಷ್ಣ ವಿದ್ಯಾಶಾಲೆ,
ಮೈಸೂರು. ಮೊ.: 9036389640

ಈ ಜೀವನ...

ಮೂಕನಾಗಬೇಕು...! ಜಗದೊಳು ಜ್ವಾಕ್ಯಾಗಿರಬೇಕು...!!

ನೀತಿಯು ಹಂದರದಲ್ಲಿ ಬಾಳಿಗೆ ತಂಪಾದ ನೆರಳನ್ನು ನೀಡುವ ಸದುದ್ದೇಶದಿಂದ ರಚಿತವಾದ ಸಾಹಿತ್ಯ ಪ್ರಕಾರಗಳು ಹತ್ತು ಹಲವು. ಪರಂಪರೆಯ, ಅವುಗಳಲ್ಲಿ ವಚನ, ಕೀರ್ತನೆಗಳ ತರುವಾಯ ಜನರನ್ನು ಆಕರ್ಷಿಸಿ ಮನಕ್ಕೆ ಮುದ ನೀಡಿ ಹೃದಯವನ್ನು ತಟ್ಟಿದ ಸಾಹಿತ್ಯ ಪ್ರಕಾರ ಎಂದರೆ ಅದು ತತ್ವಪದಕಾರರ ತತ್ವಪದಗಳು. ಹಾಗೇ ಅವಲೋಕನ ಮಾಡುತ್ತಾ ಹೋದರೆ ಸಾಹಿತ್ಯದ ಮೂಲ ಉದ್ದೇಶ ಅಂಧಕಾರವನ್ನು ನಿವಾರಿಸಿ ತಪ್ಪುತ್ತಿರುವ ಸಮಾಜವನ್ನು ಪರಿವರ್ತಿಸಿ, ನೇತ್ಯಾತ್ಮಕವಾಗಿ ಬದಲಾವಣೆ ತರುವುದು. ತತ್ವಪದವೆನ್ನುವುದೇ ಒಂದು ಸಿದ್ಧಾಂತದ ಎಳೆಯಿಂದ ಎದೆಯಲ್ಲಿ ಮೊಳೆಯುತ್ತಿರುವ ಅಹಂಕಾರದ ಅಲೆಗಳನ್ನು ಇಲ್ಲವಾಗಿಸಿ ಸಿಹಿಗಾಳಿಯ ಸವಿನೀರನ್ನು ಕುಡಿಸಲು ಅನುವು ಮಾಡಿಕೊಡುವುದು. ತತ್ವಗಳನ್ನು ಹಾಡಿನ ಮೂಲಕ ಜನರಿಗೆ ತಲುಪಿಸುವ ಕೆಲಸವನ್ನು ತತ್ವಪದಕಾರರು ಮಾಡಿದರು. ತತ್ವಪದಕಾರರಲ್ಲಿ ವಿವಿಧ ಮತಗಳಿಗೆ ಸೇರಿದವರು ತಮ್ಮ ಅನುಭವಗಳನ್ನು ಜನರಾಡುವ ಆಡುಭಾಷೆಯಲ್ಲಿಯೇ ಹಾಡಿ ಜನರಿಗೆ ಸಂದೇಶವನ್ನು ತಲುಪಿಸುವ ಪ್ರಯತ್ನವನ್ನು ಮಾಡುತ್ತಿದ್ದರು. ಶಿಶುನಾಳ ಶರೀಫರು ತತ್ವಪದಕಾರರಲ್ಲಿ ಅತ್ಯಂತ ಪ್ರಸಿದ್ಧರಾದವರು. ನಂತರ ಅನೇಕ ತತ್ವಪದಕಾರರು ತಮ್ಮ ವಿಶಿಷ್ಟ ರಚನೆಗಳ ಮೂಲಕ ಜನಮಾನಸದಲ್ಲಿ ಇಂದಿಗೂ ಅಮರರಾಗಿ ಉಳಿಯುವಂತವರು ಇದ್ದಾರೆ. ಅಂತಹ ತತ್ವಪದಕಾರರಲ್ಲಿ ಕಡಕೋಳ ಮಡಿವಾಳಪ್ಪ ಕೂಡ ಒಬ್ಬರು. ಕಲಬುರ್ಗಿ ಜಿಲ್ಲೆಯ ಅಫಜಲಪುರ ತಾಲೂಕಿನ ಬಿದನೂರು ಗ್ರಾಮದಲ್ಲಿ ಜನಿಸಿದರು ಎಂದು ನಂಬಲಾಗಿರುವ ಇವರು **ಮಹಾಂತೇಶ** ಎಂಬ ಅಂಕಿತದಲ್ಲಿ ಹಲವಾರು ತತ್ವಪದಗಳನ್ನು ರಚಿಸಿದ್ದಾರೆ. ಅವರ ತತ್ವಪದಗಳಲ್ಲಿ ಮೂಕನಾಗಬೇಕು ಎಂಬ ತತ್ವಪದವು ಅತ್ಯಂತ ಪ್ರಸಿದ್ಧವಾದ ತತ್ವಪದಗಳಲ್ಲಿ ಒಂದಾಗಿದೆ.

**ಮೂಕನಾಗಬೇಕು..
ಜಗದೊಳು ಜ್ವಾಕ್ಯಾಗಿರಬೇಕು..
ಮೂಕನಾಗಬೇಕು..
ಜಗದೊಳು ಜ್ವಾಕ್ಯಾ..ಗಿರಬೇಕು.
ಕಾಕಬುದ್ಧಿ ಕಡೇ ಛಾಯಿಸಲಾರದೆ
ಕಾಕಬುದ್ಧಿ ಕಡೇ ಛಾಯಿಸಲಾರದೆ
ಲೋಕದ ಗೊಡವೀ
ನಿನ್ಯಾಕ ಬೇಕು**


ಕೆಲವೊಮ್ಮೆ ಸಮಾಜದಲ್ಲಿ ನಡೆಯುವಂತಹ ವಿಚಾರಗಳನ್ನು ನೋಡಿ ನೋಡದಂತೆ, ಕೇಳಿಯೂ, ಕೇಳದಂತೆ ಇರಬೇಕು ಎಂದು ತಿಳಿದವರು ಹೇಳುತ್ತಾರೆ. ಇಲ್ಲಿಯೂ ಕೂಡ ತತ್ವಪದಕಾರರು ಅದನ್ನೇ ಹೇಳಿದಂತಿದೆ. ಮೂಕನಾಗಿ ನಾವು ಇರಬೇಕು ಈ ಜಗತ್ತಿನಲ್ಲಿ. ಜ್ವಾಕ್ಯಾಗಿ ಅಂದರೆ ಜೋಪಾನವಾಗಿ ಇರಬೇಕು ಎಂದು ಮುನ್ಸೂಚನೆಯನ್ನು ನೀಡುತ್ತಿದ್ದಾರೆ. ಮುಂದುವರೆದು ಮತ್ತೊಬ್ಬರಿಗೆ ಕೇಡನ್ನು ಬಯಸುವಂತಹ ಬುದ್ಧಿಯನ್ನು ಅಥವಾ ಕೋಡನ್ನು ಉಂಟು ಮಾಡುವ ಬುದ್ಧಿಯನ್ನು ಸಾಧ್ಯವಾದಷ್ಟು ನಿಯಂತ್ರಿಸಬೇಕೆಂದು, ಲೋಕದ ಜಂಜಾಟಗಳಿಗೆ ಒಳಗಾಗಬಾರದು, ಅದರಿಂದ ನಿನಗೇನು ಉಪಯೋಗವಿಲ್ಲ ಎಂದು ತಿಳಿಸಿದ್ದಾರೆ.

ಅನವಶ್ಯಕವಾದ, ಅನಗತ್ಯವಾದ ವಿಚಾರಗಳ ಬಗ್ಗೆ ಮಾತನಾಡದೆ ಮೌನವಾಗಿ ಇರಬೇಕೆಂಬುದನ್ನೇ ಇಲ್ಲಿ ಸೂಚ್ಯವಾಗಿ ಮೂಕನಾಗಿ ಇರಬೇಕೆಂದು ತಿಳಿಸಿದ್ದಾರೆ. ಇಲ್ಲಿ ಮೂಕ ಎಂದರೆ ಮಾತನಾಡಲು ಬಾರದೇ ಇರುವವನು ಎಂದರ್ಥವಲ್ಲ. ಮಾತನಾಡಲು ಬಲ್ಲವನು ಕೂಡ ಕೆಲವೊಮ್ಮೆ ಮಾತನಾಡದೆ ಇರಲೇಬೇಕಾದ ಸಂದರ್ಭ ಒದಗುತ್ತದೆ ಎಂಬುದನ್ನು ತಿಳಿಸುತ್ತದೆ. ಮನುಷ್ಯರಲ್ಲಿ ಗೊತ್ತಿದ್ದೋ ಗೊತ್ತಿಲ್ಲದೆಯೋ ಮನಸಿನೊಳಗೆ ಮತ್ತೊಬ್ಬರ ಬಗ್ಗೆ ಅಸೂಯೆ–ಈರ್ಷೆ ಭಾವನೆ ಬೆಳೆದಿರುತ್ತದೆ. ಅದನ್ನು ಮುಂದುವರಿಸಿಕೊಂಡು ಹೋಗಬಾರದು ಎಂಬುದನ್ನು ಇಲ್ಲಿ ಪರೋಕ್ಷವಾಗಿ ತಿಳಿಸಿದ್ದಾರೆ. ಎಲ್ಲೋ ಒಂದು ಕಡೆ ಓದಿದ ನೆನಪು – ಒಳ್ಳೆಯ ಕೆಲಸಗಳನ್ನು ಮಾಡಬೇಕಾದರೆ ತಕ್ಷಣವೇ ಮಾಡಬೇಕಂತೆ, ಆದರೆ ಕೆಟ್ಟ ಕೆಲಸಗಳನ್ನು ಮಾಡಬೇಕಾದರೆ ಸ್ವಲ್ಪ ತಡೆದು ಯೋಚಿಸಿ, ನಂತರ ಅಗತ್ಯವಿದ್ದರೆ ಮಾಡಬೇಕಂತೆ. ಇಲ್ಲಿ ಮತ್ತೊಬ್ಬರಿಗೆ ಕೆಡುಕನ್ನು ಉಂಟುಮಾಡುವ ಮತ್ಸರದ ಬುದ್ಧಿಯನ್ನು ಬಿಟ್ಟು ಬದುಕಬೇಕು ಎಂಬುದನ್ನು ತಿಳಿಸಿದ್ದಾರೆ. ತಮ್ಮ ಕೆಲಸವನ್ನು ಬಿಟ್ಟು ಉಳಿದವರ ಬಗ್ಗೆಯೇ ಚಿಂತಿಸುವ ಜನರಿಗೆ ಕೂರಿಸಿಕೊಂಡು ಬುದ್ಧಿ ಹೇಳಿದಂತೆ ಲೋಕದ ಗೊಡವೀ ನಿನಗೆ ಯಾಕೆ ಬೇಕು ಎಂಬ ಮಾತಿನ ಮೂಲಕ ನನಗೆ ಅವರು ನೋವನ್ನುಂಟು ಮಾಡಿದ್ದಾರೆ, ಅವರಿಗೂ ನಾನು ನೋವುಂಟು ಮಾಡುವೆ ಎಂದು ಚಡಪಡಿಸುವ ಅಥವಾ ಯಾವಾಗಲೂ ಬೇರೊಬ್ಬರ ಬಗ್ಗೆ ಚಿಂತಿಸುವ ಜನರಿಗಾಗಿಯೇ ರಚಿತವಾದುದು ತತ್ವಪದ. ಈ ತತ್ವಪದದ ವಿಶೇಷ ಏನೆಂದರೆ ಎಲ್ಲವನ್ನು ಸೂಚ್ಯವಾಗಿ ಹೇಳುವ ಮೂಲಕ ಒಳಾರ್ಥವನ್ನು ನಾವೇ ಗ್ರಹಿಸಿಕೊಳ್ಳಬೇಕೆಂಬ ಕಾಳಜಿ ಇದರೊಳಗೆ ಅಡಗಿಸಿ ಇಡಲಾಗಿದೆ ಎನ್ನಬಹುದು.

**ಮೂಕನಾಗಬೇಕು ಮಾತು ಕಲಿಯ ಬೇಕೊ...
ಮಾತಿನ.. ಮರ್ಮ ತಿಳೀ..ಬೇಕು
ಮಾತು ಕಲಿಯ ಬೇಕೂ.... ಮಾತಿನ..
ಮರ್ಮ ತಿಳೀಬೇಕು..**

ಮಾತನ್ನಾಡುವುದನ್ನು ಕಲಿಯಬೇಕು, ಮಾತಿನ ಮರ್ಮವನ್ನು ತಿಳಿಯಬೇಕು ಎನ್ನುವ ಮೂಲಕ ಮಾತಿಗಿರುವ ಮಹತ್ವವನ್ನು ತಿಳಿಸಿದ್ದಾರೆ. ನಮ್ಮಲ್ಲಿ ಕೆಲವರಿಗೆ ಎಲ್ಲಿ ಹೇಗೆ ಮಾತನಾಡಬೇಕೆಂಬುದೇ ತಿಳಿದಿರುವುದಿಲ್ಲ. ಕೆಲವರಿಗೆ ತಿಳಿದಿದ್ದರೂ ಕೂಡ ಬೇಕೆಂದೇ ಇಲ್ಲಸಲ್ಲದ ಮಾತನ್ನಾಡುತ್ತಾರೆ.ಈ ಮಾತಿಗೆ ನಿದರ್ಶನವಾಗಿ ಡಾ.ಗುರುರಾಜ ಕರ್ಜಗಿ ಅವರು ಒಂದು ಕಥೆಯನ್ನು ಹೇಳುವಾಗ ಹೇಳಿದ ಮಾತೊಂದು ನೆನಪಿಗೆ ಬರುತ್ತದೆ. ಮನುಷ್ಯ ಮಾತನಾಡುವುದನ್ನು ನಾಲ್ಕೈದು ವರ್ಷಗಳಲ್ಲಿ ಕಲಿಯುತ್ತಾನೆ (ಮಗು ಮಾತನ್ನು ಕಲಿಯುವುದು) ಆದರೆ ಅದೇ ಮಾತನ್ನು ಎಲ್ಲಿ ,ಹೇಗೆ ಆಡಬೇಕೆಂಬುದನ್ನು ಜೀವನ ಪೂರ್ತಿ ಕಲಿಯುತ್ತಲೇ ಇರುತ್ತಾನೆ.

ಮಾತನಾಡುವುದು ಹೇಗೆ ಎಂಬುದನ್ನು ಮೊದಲು ನಾವು ತಿಳಿದುಕೊಳ್ಳಬೇಕು. ಅದಕ್ಕಾಗಿಯೇ ಹಿರಿಯರು ಊಟ ಬಲ್ಲವನಿಗೆ ರೋಗವಿಲ್ಲ ಮಾತು ಬಲ್ಲವನಿಗೆ ಜಗಳವಿಲ್ಲ ಎಂಬ ಗಾದೆಯನ್ನೇ ಹೇಳಿದ್ದಾರೆ. ಸಂದರ್ಭ ಸನ್ನಿವೇಶ ಇವುಗಳನ್ನು ಅರಿತುಕೊಂಡು ತಕ್ಕಂತಹ ಮಾತನ್ನಾಡುವುದು ಒಳಿತು. ಅನವಶ್ಯಕ ಅಥವಾ ಮತ್ತೊಬ್ಬರಿಗೆ ನೋವನ್ನುಂಟು ಮಾಡುವ ಮಾತುಗಳನ್ನು ನುಡಿಯುವುದರಿಂದ ಯಾವುದೇ ಸಾಧನೆ ಮಾಡಿದಂತಾಗುವುದಿಲ್ಲ. ಅದನ್ನೇ ಇಲ್ಲಿ ತತ್ವಪದಕಾರರು ಮಾತನಾಡುವುದನ್ನು ಕಲಿಯಬೇಕು ಎಂದು ಗಂಭೀರವಾಗಿ ಹೇಳುತ್ತಿದ್ದಾರೆ. ಮುಂದುವರೆದು ಮಾತಿನ ಮರ್ಮವನ್ನು ತಿಳಿಯಬೇಕು ಎನ್ನುವ ಮೂಲಕ ನಮ್ಮ ಜೊತೆ ಮಾತನಾಡುವವರು ಯಾವ ಹಿನ್ನೆಲೆಯಲ್ಲಿ ಮಾತನಾಡುತ್ತಿದ್ದಾರೆ. ಅವರ ಉದ್ದೇಶವೇನೆಂದು ತಿಳಿಯಬೇಕು ಎಂದು ಸೂಚಿಸಿದ್ದಾರೆ. ಕೆಲವೊಮ್ಮೆ ಆತ್ಮೀಯರು ನಿಮ್ಮ ಬಗ್ಗೆ ಈ ರೀತಿ ಮಾತನಾಡುತ್ತಿದ್ದರು ಎನ್ನುವ ಮೂಲಕ ಪರಸ್ಪರ ತಂದಿಡುವ ಕೆಲಸವನ್ನು ಮಾಡುತ್ತಾರೆ. ಇಂಥವರನ್ನು ಚಾಡಿಕೋರರು ಎಂದು ಕರೆಯುವುದು ಲೋಕ ರೂಢಿ. ಚಾಡಿಕೋರರು ಎಲ್ಲ ಕಾಲದಲ್ಲಿಯೂ ತಮ್ಮ



ಕಡಕೋಳ ಮಡಿವಾಳಪ್ಪ

ಬೇಳೆಯನ್ನು ಬೇಯಿಸಿಕೊಳ್ಳಲು ಇದ್ದೇ ಇರುತ್ತಾರೆ. ಆದರೆ ಇಂಥವರ ಮಾತುಗಳನ್ನು ಆಲಿಸಿ ಹಿತ್ತಾಳೆ ಕಿವಿಗಳಾಗಬಾರದು. ಮತ್ತೊಬ್ಬರ ಬಗ್ಗೆ ನಮಗೆ ಹೇಳುವವರು ಯಾವ ಹಿನ್ನೆಲೆಯಲ್ಲಿ ಹೇಳುತ್ತಿದ್ದಾರೆ. ಅದರಿಂದ ಅವರಿಗೆ ಆಗುವ ಉಪಯೋಗವೇನು ಎಂಬ ಒಳಮರ್ಮವನ್ನು ಅರಿತುಕೊಂಡರೆ ಸತ್ಯ ದರ್ಶನವಾಗುತ್ತದೆ.

ನಮ್ಮ ಜೊತೆ ಮಾತನಾಡುವವರೆಲ್ಲ ನಮ್ಮ ಹಿತಕ್ಕಾಗಿ, ಒಳ್ಳೆಯದಕ್ಕಾಗಿಯೇ ಹೇಳುತ್ತಿದ್ದಾರೆ ಎಂಬ ಭ್ರಮೆಯನ್ನು ಬಿಟ್ಟು ಯಾವ ಉದ್ದೇಶದಿಂದ ಮಾತನಾಡುತ್ತಿದ್ದಾರೆ ಎಂಬುದನ್ನು ಅರಿತುಕೊಂಡರೆ ಮಾತಿನ ಹಿಂದಿನ ಮರ್ಮ ನಮಗೆ ತಿಳಿಯುತ್ತದೆ. ಅದನ್ನೇ ಇಲ್ಲಿ ಕಡಕೋಳ ಮಡಿವಾಳಪ್ಪ ಅವರು ಮಾತಿನ ಮರ್ಮವನ್ನು ತಿಳಿಯಬೇಕು ಎಂದು ಸೂಚಿಸುತ್ತಾ ಎಚ್ಚರಿಕೆಯಿಂದ ಇರಬೇಕೆಂಬ ತಿಳುವಳಿಕೆಯನ್ನು ನೀಡಿದ್ದಾರೆ.

**ಮಾತು ಬಲ್ಲ.. ಮಹಾ ಜ್ಞಾನಿಯ ಕೂಡ
ಮಾತು ಬಲ್ಲ.. ಮಹಾ ಜ್ಞಾನಿಯ ಕೂಡ
ಕೋತಿ ಹಾಂಗ.. ಬೆನ್ ಹತ್ತಿರಬೇಕು**

ಹೂವಿನೊಂದಿಗೆ ನಾರು ಸ್ವರ್ಗ ಸೇರಿತು ಎಂಬ ನಾಣ್ನುಡಿಯಂತೆ, ಒಳ್ಳೆಯವರ ಸಹವಾಸದಿಂದ ನಾವು ಒಳ್ಳೆಯವರಾಗಬಹುದು ಎಂಬಂತೆ ಮಾತನಾಡಬಲ್ಲ ಮಹಾ ಜ್ಞಾನಿಯ ಜೊತೆಗಿದ್ದು ಕೋತಿಯಂತೆ ಬೆನ್ನತ್ತಬೇಕು ಅಂದರೆ ಅವರ ಸಹವಾಸವನ್ನು ಬಿಡಬಾರದು ಎಂದು ತಿಳಿ ಹೇಳಿದ್ದಾರೆ. ಸಂದರ್ಭವನ್ನು ಅರಿತು ಮಾತನಾಡಬಲ್ಲ ಜ್ಞಾನಿ, ಸಮಸ್ಯೆಗಳಿಗೆ ಹೇಗೆ ಪ್ರತಿಕ್ರಿಯಿಸಬೇಕೆಂಬ ಮಹಾ ಜ್ಞಾನಿ, ಏನೇ ಅಡೆತಡೆಗಳು ಬಂದರೂ ಎದುರಿಸಿ ನಿಲ್ಲಬಲ್ಲವನಾಗಿರುತ್ತಾನೆ. ಇಂತಹ ಮಹಾಜ್ಞಾನಿಗಳ ಜೊತೆ ನಮ್ಮ ಒಡನಾಟವನ್ನು ಇಟ್ಟುಕೊಳ್ಳಬೇಕು. ಇಲ್ಲಿ ಕೋತಿ ಅಂತೆ ಬೆನ್ನತ್ತಬೇಕು ಎಂಬ ಮಾತು ಜ್ಞಾನಿಗಳ ಜೊತೆಗಿದ್ದು ಮಾತನ್ನು ಕಲಿಯಬೇಕು ಎಂಬುದಾಗಿದೆ.

**ಮೂಕನಾಗಬೇಕು ಜಗದೊಳು ಜ್ವಾಕ್ಯಾ..ಗಿರಬೇಕು
ತತ್ವ ಕಲೀಬೇಕೂ... ತತ್ವದಾ.. ಅರ್ಥಾ ತಿಳೀಬೇಕು..
ತತ್ವ ಕಲೀಬೇಕೂ... ತತ್ವದಾ... ಅರ್ಥಾ ತಿಳೀಬೇಕು..
ತತ್ವ ಬಲ್ಲ.. ಮಹಾ ಜ್ಞಾನಿಯ ಕೂಡ ಕತ್ತಿ
ಹಂಗ ಬೆನ್ನತ್ತಿರಬೇಕು**

ಬದುಕಿನ ತತ್ವವನ್ನು ಅರ್ಥಮಾಡಿಕೊಂಡವರಿಗೆ ಜೀವನ ಬಲು ಸುಲಭವಾಗಿ ಕಾಣುತ್ತದೆ. ಯಾವುದಕ್ಕೆ ಹೇಗೆ ಪ್ರತಿಕ್ರಿಯಿಸಬೇಕು, ಯಾವುದು ಮುಖ್ಯ, ಅಮುಖ್ಯ ಎಂಬ ತತ್ವದ ಜ್ಞಾನವನ್ನು ಅರಿತವನಿಗೆ ಏನೇ ಸಮಸ್ಯೆಗಳು ಎದುರಾದರೂ ಅದಕ್ಕೆ ತಲೆ ಕೆಡಿಸಿಕೊಳ್ಳದೇ ಇರಬಲ್ಲ.ಹಾಗಾಗಿ ತತ್ವವನ್ನು, ತತ್ವದ ಅರ್ಥವನ್ನು ತಿಳಿದುಕೊಳ್ಳಬೇಕು. ಇಲ್ಲಿ ತಿಳಿದುಕೊಳ್ಳಬೇಕು ಎಂದರೆ ಅದು ಎಲ್ಲೊ ಪುಸ್ತಕದಲ್ಲಿ ಅಥವಾ ಗ್ರಂಥಾಲಯದಲ್ಲಿ ಓದಿ ತಿಳಿಯುವುದಂತಲ್ಲ, ಅದು ಸ್ವಯಂ ಅನುಭವ, ತರ್ಕಮೂಸೆಯಿಂದ ಕಲಿಯುವಂತದ್ದು. ಅದನ್ನು ತಿಳಿಯಬೇಕೆಂದು ಹೇಳಿದ್ದಾರೆ. ತತ್ವವನ್ನು ಬಲ್ಲಂತಹ ಮಹಾ ಜ್ಞಾನಿಯ ಜೊತೆ ಕತ್ತಿ ಹಂಗ ಬೆನ್ನತ್ತಿರಬೇಕು ಅಂದರೆ ಮಹಾಜ್ಞಾನಿಯೊಂದಿಗಿನ ಒಡನಾಟ ನಮ್ಮಲ್ಲಿನ ದುರ್ಗುಣಗಳು ಹೋಗುವಂತಾಗಿ ಸದ್ಗುಣಗಳು ಬೆಳೆಯುವಂತಾಗಲು ಸಹಾಯ ಮಾಡುತ್ತದೆ. ಆದ್ದರಿಂದ ಅಂತಹ ಜ್ಞಾನಿಗಳ ಸಹವಾಸವನ್ನು ಬಿಡಬೇಡಿ ಎಂಬ ಸಲಹೆಯನ್ನು ನೀಡಿದ್ದಾರೆ.

**ಮೂಕನಾಗಬೇಕು.. ಜಗದೊಳು
ಜ್ವಾಕ್ಯಾ..ಗಿರಬೇಕು
ಆಸೆಯನಳೀಬೇಕೂ...
ಮನಸಿನಾ.. ಹೇಸಿಕಿ ತೊಳೀಬೇಕು..**

ತತ್ವಪದದ ಕೊನೆಯ ಈ ಎರಡು ಸಾಲುಗಳು ಇಡೀ ಪದಕ್ಕೆ ಕಳಶಪ್ರಾಯವಿದ್ದಂತೆ. ಆಸೆಯನ್ನು ಬಿಡಬೇಕು. ಮನುಷ್ಯನ ಅನೇಕ ಸಮಸ್ಯೆಗಳ ಮೂಲ ಕಾರಣವೇ ಆಸೆ. ಆಸೆಯೇ ದುಃಖಕ್ಕೆ ಮೂಲ ಎಂಬ ಗೌತಮ ಬುದ್ಧನ ಮಾತು ಕೂಡ ಆಸೆಯಿಂದ ಉಂಟಾಗುವ ಪರಿಣಾಮವನ್ನು ತಿಳಿಸುತ್ತದೆ. ಇಂತಹ ಆಸೆಯನ್ನು ಅಳಿಯಬೇಕು ಎಂದು ತತ್ವಪದಕಾರರು ಹೇಳಿದ್ದಾರೆ. ವಾಸ್ತವದಲ್ಲಿ ಆಸೆಗಳಿಲ್ಲದೇ ಮನುಷ್ಯ ಬದುಕಲು ಸಾಧ್ಯವೇ ಎಂಬ ಪ್ರಶ್ನೆ ಉದ್ಭವಿಸಿದರೆ ಖಂಡಿತವಾಗಿಯೂ ಸಾಧ್ಯ ಎಂದು ತೋರಿಸಿದ ಸಾಧಕರು ಇದ್ದಾರೆ. ಆಸೆ ಮನುಷ್ಯನ ದೌರ್ಬಲ್ಯ. ಅಂತಹ ಆಸೆಯನ್ನು ಅಳಿಸಿದಾಗಲೇ ಬದುಕು ಬೇರೆ ಬಗೆಯಲ್ಲಿ ಗೋಚರವಾಗಬಲ್ಲದು ಎಂದು ತಿಳಿಸಿದ್ದಾರೆ.

ಕೊನೆಯ ಸಾಲು ಹೆಚ್ಚು ಆಪ್ತವಾಗುವಂತದ್ದು. ನಮ್ಮ ಮನಸ್ಸಿನಲ್ಲಿರುವ ಹೇಸಕಿ ಅಂದರೆ ಅಸಹ್ಯ / ಬೇಡದ ಕಲ್ಮಶಗಳನ್ನು ಮೊದಲು ತೊಳೆಯಬೇಕು. ಕಣ್ಣಿಗೆ ಕಾಣದ ಆದರೆ ಮನಸ್ಸಿನೊಳಗೆ ಮನೆ ಮಾಡಿಕೊಂಡು ಬೀಡುಬಿಟ್ಟ ಉಪಯೋಗವಲ್ಲದ ವಿಚಾರಗಳ ಹೇಸಿಕೆಗಳನ್ನು ತೊಳೆದುಕೊಂಡರೆ ಮನಸ್ಸು ಶುದ್ಧಿಯಾಗುವುದಲ್ಲದೇ ವಿವೇಕವು ಶುದ್ಧಿಯಾಗಿ ವಿಚಾರಗಳು ಶುದ್ಧಿಯಾಗಬಲ್ಲದು ಎಂಬುದು ಇಲ್ಲಿನ ತಾತ್ಪರ್ಯವಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ ಮಾತು ಮಾಡದಿದ್ದ ಅನೇಕ ಕೆಲಸಗಳನ್ನು ಮೌನ ಮಾಡಬಲ್ಲದು. ಅಂತಹ ಮೌನದ ಕಲೆಯನ್ನು ನಾವು ರೂಢಿಸಿಕೊಳ್ಳಬೇಕೆಂದು, ಸಮಾಜದಲ್ಲಿ ಏನೇ ಸಮಸ್ಯೆಗಳು ಬಂದರೂ ಅದನ್ನು ಎದುರಿಸಿ ನಿಂತು ಜೋಪಾನವಾಗಿರಬೇಕೆಂದು ಎಚ್ಚರಿಕೆಯನ್ನು ನೀಡುವುದರ ಜೊತೆಗೆ ಮಾತಿಗೂ, ಮೌನಕ್ಕೂ ಇರುವ ಪರಸ್ಪರ ಕೊಡುಕೊಳ್ಳುವಿಕೆಯ ವಿಚಾರಧಾರೆಗಳನ್ನು ಈ ತತ್ವಪದದ ಮೂಲಕ ವ್ಯಕ್ತಪಡಿಸಿದ್ದಾರೆಂದು ಹೇಳಬಹುದು. ಇಂತಹ ತತ್ವಪದವನ್ನು ಪಂಡಿತ ರವೀಂದ್ರ ಹಂದಿಗನೂರು ತಮ್ಮ ಅದ್ಭುತ ಗಾಯನದಿಂದ ಮತ್ತೆ ಮತ್ತೆ ಗುನುಗುವಂತೆ ಮಾಡಿದ್ದಾರೆ. ಯುಟ್ಯೂಬ್ ಅಲ್ಲಿ ಲಕ್ಷಕ್ಕಿಂತ ಹೆಚ್ಚು ಕೇಳುಗರ ಮನಸೂರೆಗೊಳಿಸಿದೆ. ಅಲ್ಲದೇ ಇತ್ತೀಚೆಗೆ ಬಂದ ಒಂದ ಸರಳ/ ವಿರಳ ಪ್ರೇಮಕಥೆ ಸಿನಿಮಾದಲ್ಲಿಯೂ ಈ ತತ್ವಪದವನ್ನು ಸಮರ್ಪಕವಾಗಿ ಬಳಸಿಕೊಳ್ಳಲಾಗಿದೆ. ಈ ದೃಷ್ಟಿಯಿಂದ ಕಣ್ಣು ಹಾಯಿಸುವುದಾದರೆ ಹೇಳುವುದು ಸಾಕಷ್ಟಿದೆ, ಅರಿಯುವುದು ಇನ್ನೂ ಅಧಿಕವಾಗಿದೆ. ಈ ಬಗೆಯ ಕಲಿಕೆಗೆ ಕೊನೆಯಿಲ್ಲ–ಮೊದಲಿಲ್ಲ, ಮನುಷ್ಯತ್ವದ ಮೂಲಬೇರುಗಳು ಅಲುಗಾಡಿದಾಗಲೆಲ್ಲ ಪದ ಲಾಲಿತ್ಯದಿಂದ ಕೂಡಿದ ಭಾವದ ಬಳ್ಳಿಯ ಗಿಡದಿಂದ ಮೌಲ್ಯದ ಪರಿಮಳ ಚೆಲ್ಲುವ ಹೂವಾಗಿ ಅರಳಿ ಮನವನ್ನು–ಹೃದಯವನ್ನು ತಣಿಸುವುದು ಸಹಜ. ಇದ ಅರಿತು ಬಾಳಬೇಕಿದೆ ಮನುಜ.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಶಿಥಿಲಾವಸ್ಥೆಯಲ್ಲಿದ್ದ ನೀರಿನ ಟ್ಯಾಂಕ್ ನೆಲಸಮ



ಮೈಸೂರು ವಿವಿಯ ಮಹಾರಾಜ ಕಾಲೇಜು ಮೈದಾನದಲ್ಲಿದ್ದ ಶಿಥಿಲಾವಸ್ಥೆಯ ನೀರಿನ ಟ್ಯಾಂಕ್ ನೆಲಸಮಗೊಳಿಸಿರುವುದು.



ಮೈಸೂರು,ಮಾ.18(ಎಂಟಿವೈ)– ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜು ಮೈದಾನದಲ್ಲಿದ್ದು, ಶಿಥಿಲಾವಸ್ಥೆ ತಲುಪಿದ್ದ ನೀರಿನ ಟ್ಯಾಂಕ್ ಅನ್ನು ಸುರಕ್ಷಿತ ಕ್ರಮದೊಂದಿಗೆ ನೆಲಸಮಗೊಳಿಸಲಾಯಿತು.

ಮೈಸೂರು ವಿಶ್ವವಿದ್ಯಾನಿಲಯದ ಸ್ಪೋರ್ಟ್ಸ್ ಪೆವಿಲಿಯನ್ ಮೈದಾನ ಹಾಗೂ ಮಹಾರಾಜ ಕಾಲೇಜು ಮೈದಾನದ ನಡುವೆ ಇರುವ ರಸ್ತೆ ಪಕ್ಕದಲ್ಲಿಯೇ ಹಲವು ವರ್ಷಗಳ ಹಿಂದೆ ಕಟ್ಟಿದ್ದ ನೀರಿನ ಟ್ಯಾಂಕ್ ಶಿಥಿಲಾವಸ್ಥೆ ತಲುಪಿತ್ತು. ಅಲ್ಲದೆ ಕ್ರಿಕೆಟ್ ಮೈದಾನದ ಬಳಿ ಕಳೆದ 10 ವರ್ಷದ ಹಿಂದೆ ನರ್ಮ್ ಯೋಜನೆಯಡಿ ಹೊಸ ಟ್ಯಾಂಕ್‌ವೊಂದನ್ನು ಕಟ್ಟಿದ್ದು, ಹಳೆ ಟ್ಯಾಂಕ್‌ಗೆ ನೀರಿನ ಸಂಪರ್ಕ ಕಡಿತಗೊಳಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಶಿಥಿಲಾವಸ್ಥೆ ತಲುಪಿದ್ದ ಟ್ಯಾಂಕ್ ಪಿಲ್ಲರ್‌ಗಳು ಹಾಗೂ ಟ್ಯಾಂಕ್‌ನ ಮೇಲ್ಭಾಗ ಬಿರುಕು ಬಿಟ್ಟಿತ್ತು.

ಕುಸಿಯುವ ಹಂತಕ್ಕೆ ತಲುಪಿದ್ದ ನೀರಿನ ಟ್ಯಾಂಕ್ ಅನ್ನು ತೆರವುಗೊಳಿಸುವಂತೆ ಸಾರ್ವಜನಿಕರು ಮನವಿ ಮಾಡಿದ್ದರು. ಸಂಭವಿಸಬಹುದಾದ ಅನಾಹುತ ತಡೆಗಟ್ಟುವ ನಿಟ್ಟಿನಲ್ಲಿ ಕಳೆದ ವರ್ಷ ನೀರಿನ ಟ್ಯಾಂಕ್ ತೆರವಿಗೆ ನಿರ್ಧರಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಟೆಂಡರ್ ಕರೆದು ನೀರಿನ ಟ್ಯಾಂಕ್ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗಿತ್ತು. ಭಾನುವಾರ ಸಂಜೆ ಜೆಸಿಬಿ ಬಳಸಿ ಪಿಲ್ಲರ್‌ಗಳನ್ನು ತುಂಡರಿಸಿ, ಟ್ಯಾಂಕ್ ಅನ್ನು ಧರೆಗುರುಳಿಸಲಾಯಿತು. ಇಂದು ಬೆಳಗ್ಗೆ ಟ್ಯಾಂಕ್ ಅವಶೇಷದಿಂದ ಕಬ್ಬಿಣವನ್ನು ಬೇರ್ಪಡಿಸುವ ಕಾರ್ಯ ನಡೆಸಲಾಗಿದ್ದು, ಅವಶೇಷವನ್ನು ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗಿದೆ.

ಟ್ಯಾಂಕ್ ತೆರವುಗೊಳಿಸಿದ್ದರಿಂದ ಅಭ್ಯಾಸ ಮಾಡಲು ಬರುವ ಕ್ರೀಡಾಪಟುಗಳು, ವಾಯುವಿಹಾರಿಗಳು, ದ್ವಿಚಕ್ರ ಹಾಗೂ ನಾಲ್ಕು ಚಕ್ರ ವಾಹನದ ಚಾಲನೆ ಕಲಿಯಲು ಬರುವವರು, ವಿದ್ಯಾರ್ಥಿನಿಲಯಕ್ಕೆ ತೆರಳುವ ಮಹಾರಾಜ, ಯುವರಾಜ ಕಾಲೇಜಿನ ವಿದ್ಯಾರ್ಥಿಗಳಲ್ಲಿ ಮನೆ ಮಾಡಿದ್ದ ಆತಂಕ ನಿವಾರಣೆಯಾದಂತಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಲೋಕಸಭಾ ಚುನಾವಣೆ ನೀತಿ ಸಂಹಿತೆ ಜಾರಿ: ಅಕ್ರಮಗಳ ಮೇಲೆ ಅಧಿಕಾರಿಗಳ ಹದ್ದಿನಕಣ್ಣು

ಸಾರ್ವಜನಿಕ ಸ್ಥಳದಲ್ಲಿರುವ ರಾಜಕಾರಣಿಗಳ ನಾಮಫಲಕ ತೆರವು ಕಾರ್ಯ ಆರಂಭ







ಮೈಸೂರಿನ ಶಾಲಿವಾಹನ ರಸ್ತೆಯಲ್ಲಿ ಸರ್ಕಾರದ ಜಾಹೀರಾತು ಫಲಕ ತೆರವುಗೊಳಿಸುತ್ತಿರುವುದು. ಮೈಸೂರು ನಜರ್‌ಬಾದ್‌ನಲ್ಲಿರುವ ಬಸ್ ತಂಗುದಾಣದಲ್ಲಿ ಅಳವಡಿಸಿದ್ದ ಜಾಹೀರಾತು ಫಲಕ ತೆರವುಗೊಳಿಸುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಮಾ.18(ಎಂಟಿವೈ)– ಲೋಕಸಭಾ ಚುನಾವಣೆಯ ನೀತಿ ಸಂಹಿತೆ ಜಾರಿಯಲ್ಲಿರುವ ಹಿನ್ನೆಲೆಯಲ್ಲಿ ಮೈಸೂರಲ್ಲಿ ಸಾರ್ವಜನಿಕ ಸ್ಥಳದಲ್ಲಿರುವ ಜನಪ್ರತಿನಿಧಿಗಳ ಭಾವಚಿತ್ರವಿರುವ ಪೋಸ್ಟರ್, ಫಲಕ, ಜಾಹೀರಾತು ಫ್ಲೆಕ್ಸ್, ಸರ್ಕಾರಿ ಕಚೇರಿಗಳಲ್ಲಿರುವ ರಾಜಕೀಯ ನಾಯಕರ ಭಾವಚಿತ್ರ ತೆರವು ಕಾರ್ಯಾಚರಣೆ ಆರಂಭಿಸಲಾಗಿದ್ದು, 72 ಗಂಟೆಯೊಳಗೆ ಕಾರ್ಯಾಚರಣೆ ಪೂರ್ಣಗೊಳಿಸಲು ನಿರ್ಧರಿಸಲಾಗಿದೆ

ಚುನಾವಣಾ ಆಯೋಗ ಮಾ.16ರಂದು ಲೋಕಸಭಾ ಚುನಾವಣೆಯ ದಿನಾಂಕ ಪ್ರಕಟಿಸಿದ್ದು, ದೇಶದಾದ್ಯಂತ ಚುನಾವಣಾ ನೀತಿ ಸಂಹಿತೆ ಜಾರಿಗೊಳಿಸಿದೆ. ನೀತಿ ಸಂಹಿತೆ ಜಾರಿಯಾದ 24 ಗಂಟೆಯಲ್ಲಿ ಸರ್ಕಾರಿ ಕಟ್ಟಡ, ಕಚೇರಿ ಒಳ ಹಾಗೂ ಹೊರಗೆ ರಾಜಕೀಯ ಮುಖಂಡರ ಭಾವಚಿತ್ರ, ಪೋಸ್ಟರ್, ಬ್ಯಾನರ್, ಕಟೌಟ್, ಹೋರ್ಡಿಂಗ್ಸ್ ತೆರವುಗೊಳಿಸುವಂತೆ ಸೂಚಿಸಲಾಗಿತ್ತು ಅದರಂತೆ ಮೈಸೂರು ಪಾಲಿಕೆ ವ್ಯಾಪ್ತಿಗೆ ಬರುವ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಭಾವಚಿತ್ರ, ಪೋಸ್ಟರ್ ಸೇರಿದಂತೆ ಚುನಾವಣಾ ಆಯೋಗ ಸೂಚನೆ ನೀಡಿರುವಂತೆ ತೆರವು ಪ್ರಕ್ರಿಯೆ ಪೂರ್ಣಗೊಳಿಸಲಾಗಿದೆ.

ವೇಳಾಪಟ್ಟಿ ಪ್ರಕಟಗೊಂಡ 48 ಗಂಟೆಯೊಳಗೆ ಸಾರ್ವಜನಿಕ ಸ್ಥಳ, ರಸ್ತೆ ಬದಿ, ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ, ವಿಮಾನ ನಿಲ್ದಾಣ, ಸೇತುವೆ, ಸಾರಿಗೆ ಬಸ್, ರೈಲುಗಳ ಮೇಲಿನ ಜಾಹೀರಾತು ಇನ್ನಿತರ ಸ್ಥಳಗಳಲ್ಲಿ ರಾಜಕೀಯ ಮುಖಂಡರ ಭಾವಚಿತ್ರ, ಸರ್ಕಾರದ ಘೋಷಣೆಗಳು, ಯೋಜನೆಗಳ ಮಾಹಿತಿಯುಳ್ಳ ಫಲಕ, ಜಾಹೀರಾತು ಫಲಕವನ್ನು ತೆರವುಗೊಳಿಸಬೇಕೆಂದು ಚುನಾವಣಾ ಆಯೋಗ ಸೂಚನೆ ನೀಡಿತ್ತು. ಈ ಹಿನ್ನೆಲೆಯಲ್ಲಿ ಮೈಸೂರು ಮಹಾನಗರ ಪಾಲಿಕೆ ಅಭಯ ತಂಡದ ಸಿಬ್ಬಂದಿ ಸಾರ್ವಜನಿಕ ಸ್ಥಳದಲ್ಲಿರುವ ಜಾಹೀರಾತು ಫಲಕಗಳನ್ನು ತೆರವುಗೊಳಿಸುವ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಪಾಲಿಕೆಯ 9 ವಲಯಗಳಲ್ಲೂ ಕಾರ್ಯಾಚರಣೆ ಚುರುಕಿನಿಂದ ನಡೆಸಲಾಗುತ್ತಿದೆ.

ಪಾಲಿಕೆ ವ್ಯಾಪ್ತಿಯ ಎಲ್ಲಾ 65 ವಾರ್ಡ್‌ಗಳಲ್ಲಿರುವ ರಸ್ತೆ, ಅಡ್ಡ ರಸ್ತೆ ಸೇರಿದಂತೆ ವಿವಿಧೆಡೆ ಅಳವಡಿಸಿರುವ ಫಲಕಗಳಲ್ಲಿ ಶಾಸಕ, ಪಾಲಿಕೆ ಸದಸ್ಯರ ಹೆಸರುಗಳಿಗೆ ಕೆಲವೆಡೆ ಬಣ್ಣ ಬಳಿಯುತ್ತಿದ್ದರೆ, ಮತ್ತೆ ಕೆಲವೆಡೆ ಪೇಪರ್ ಅಂಟಿಸಿ, ಹೆಸರನ್ನು ಮರೆಮಾಚಲಾಗುತ್ತಿದೆ. ಮೈಸೂರಿನ ವಿವಿಧೆಡೆಯಿರುವ ಬಸ್ ನಿಲ್ದಾಣ, ತಂಗುದಾಣಗಳಲ್ಲಿ ಹಾಕಿದ್ದ ಸರ್ಕಾರಿ ಜಾಹೀರಾತುಗಳ ಫಲಕವನ್ನು ತೆರವುಗೊಳಿಸಲಾಗಿದೆ. ಇದರೊಂದಿಗೆ ಇಂದಿರಾ ಕ್ಯಾಂಟೀನ್‌ನಲ್ಲಿರುವ ಇಂದಿರಾಗಾಂಧಿ ಅವರ ಭಾವಚಿತ್ರಕ್ಕೂ ಪೇಪರ್ ಅಂಟಿಸಲಾಗಿದೆ. ರಾಜಕೀಯ ಪಕ್ಷಗಳು ವಿವಿಧೆಡೆ ಬರೆಸಿದ್ದ ಗೋಡೆ ಬರಹಗಳಿಗೆ ಬಣ್ಣ ಬಳಿಯುವ ಕಾರ್ಯ ಆರಂಭಿಸಲಾಗಿದೆ. ನೀತಿ ಸಂಹಿತೆ ಜಾರಿಗೊಂಡ 72 ಗಂಟೆಯೊಳಗೆ ಖಾಸಗಿ ಸ್ವತ್ತುಗಳ ಮೇಲೆ ಹಾಕಿರುವ ರಾಜಕೀಯ ಪಕ್ಷಗಳ ಮುಖಂಡರ ಭಾವಚಿತ್ರವುಳ್ಳ ಜಾಹೀರಾತು ಫಲಕಗಳನ್ನು ತೆರವುಗೊಳಿಸುವುದಕ್ಕೆ ಸಮಯಾವಕಾಶ ನೀಡಿರುವುದರಿಂದ ಮಂಗಳವಾರ ಸಂಜೆಯೊಳಗೆ ಖಾಸಗಿ ಸ್ವತ್ತುಗಳ ಮೇಲೆ ಬರೆದಿರುವ ಗೋಡೆ ಬರಹ, ಜಾಹೀರಾತು ಫಲಕ ತೆರವಿಗೆ ಕ್ರಮ ಕೈಗೊಳ್ಳಲಾಗಿದೆ.

ನಿಗಮ ಮಂಡಳಿಗಳ ಅಧ್ಯಕ್ಷರಿಂದ ವಾಹನ ಹಿಂಪಡೆದ ಜಿಲ್ಲಾಡಳಿತ: ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಸರ್ಕಾರ ವಿವಿಧ ನಿಗಮ ಮಂಡಳಿಗಳ ಅಧ್ಯಕ್ಷರಿಗೆ ನೀಡಿದ್ದ ವಾಹನಗಳನ್ನು ಜಿಲ್ಲಾಡಳಿತ ವಶಕ್ಕೆ ಪಡೆದಿದೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ.ಮರೀ ಗೌಡ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್, ಜೆಎಲ್‌ಆರ್ ಅಧ್ಯಕ್ಷ ಶಾಸಕ ಅನಿಲ್ ಚಿಕ್ಕಮಾದು, ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ ಅವರಿಗೆ ನೀಡಿದ್ದ ವಾಹನವನ್ನು ಹಿಂಪಡೆಯಲಾಗಿದೆ.

ನಿಗಮ ಮಂಡಳಿ ಅಧ್ಯಕ್ಷರ ಅಧಿಕೃತ ವಾಹನ ಹಿಂದಕ್ಕೆ



ಮೈಸೂರಿನ ದಿವಾನ್ಸ್ ರಸ್ತೆಯಲ್ಲಿ ಶಾಸಕ ಹಾಗೂ ಪಾಲಿಕೆ ಸದಸ್ಯರ ಹೆಸರಿನ ನಾಮಫಲಕಕ್ಕೆ ಬಣ್ಣ ಬಳಿಯುತ್ತಿರುವುದು.

ಮೈಸೂರು ಜಿಲ್ಲೆಯಲ್ಲಿ 7 ಕೋಟಿ ಮೌಲ್ಯದ ಮದ್ಯ ವಶ

ಮೈಸೂರು,ಮಾ.18(ಆರ್‌ಕೆ)–2024ರ ಲೋಕಸಭಾ ಸಾರ್ವತ್ರಿಕ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವ ಹಿನ್ನೆಲೆಯಲ್ಲಿ ಕಾರ್ಯಪ್ರವೃತ್ತರಾಗಿರುವ ಪೊಲೀಸ್ ಹಾಗೂ ಅಬಕಾರಿ ಇಲಾಖೆ ಅಧಿಕಾರಿಗಳು ಮೊದಲ ದಿನದ ಕಾರ್ಯಾಚರಣೆಯಲ್ಲೇ 7,83,72,484 ರೂ. ಮೌಲ್ಯದ 3,35,879 ಲೀಟರ್ ಮದ್ಯವನ್ನು ಮೈಸೂರು ನಗರ ಹಾಗೂ ಜಿಲ್ಲೆಯಾದ್ಯಂತ ವಶಪಡಿಸಿಕೊಂಡಿದ್ದಾರೆ.

ಭಾನುವಾರ ಬೇರೆ ಬೇರೆ ಕಡೆಗೆ ಸಾಗಿಸುದ್ದಾಗ ಹಾಗೂ ಅನಧಿಕೃತವಾಗಿ ದಾಸ್ತಾನಿಟ್ಟುಕೊಂಡು ಮಾರುತ್ತಿದ್ದವರ ವಿರುದ್ಧ ಪ್ರಕರಣ ದಾಖಲಿಸಿ ಕೊಂಡಿರುವ ಅಧಿಕಾರಿಗಳು, ಮಾರ್ಚ್ 17ರ ಬೆಳಗ್ಗೆ 9ರಿಂದ ಮಾರ್ಚ್ 18ರ ಬೆಳಗ್ಗೆ 9 ಗಂಟೆಯವರೆಗೆ ಅಬಕಾರಿ ಇಲಾಖೆಯಿಂದ 7,83,71,684 ರೂ. ಬೆಲೆ ಬಾಳುವ 3,35,877.79 ಲೀಟರ್ ಮದ್ಯ ಹಾಗೂ ಪೊಲೀಸ್ ಇಲಾಖೆಯಿಂದ 800 ರೂ. ಬೆಲೆಯ 1.26 ಲೀಟರ್ ಮದ್ಯ ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ.



ಫೈಲ್ ಚಿತ್ರ

ವಶಪಡಿಸಿಕೊಂಡಿರುವ ಮದ್ಯವನ್ನು ಎಂಆರ್‌ಪಿ ದರದಲ್ಲಿ ಲೆಕ್ಕ ಹಾಕಿದಾಗ 3,35, 879.05 ಲೀಟರ್ ಇದ್ದು, ಇದರ ಬೆಲೆ 7,83,72,484 ರೂ.ಗಳಾಗಿದೆ ಎಂದು ಅಬಕಾರಿ ಇಲಾಖೆ ಅಧಿಕಾರಿಗಳು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ಅದರ ಜೊತೆಗೆ ಎಸ್‌ಎಸ್‌ಟಿ (Static Surveillance Team) ತಂಡದ ಅಧಿಕಾರಿಗಳು, 50,000 ಮಿತಿ ಮೀರಿ ಕೊಂಡೊಯ್ಯುತ್ತಿದ್ದ 1,25,000 ರೂ. ನಗದನ್ನು ವಶಪಡಿಸಿಕೊಂಡಿದ್ದಾರೆ. ಅದಕ್ಕೆ ಪೂರಕ ದಾಖಲೆಗಳನ್ನು ಒದಗಿಸಿದಲ್ಲಿ ಮಾತ್ರ ನಿಯಮಾನುಸಾರ ನಡಾವಳಿ ಮಾಡಿದ ಬಳಿಕವಷ್ಟೇ ಹಿಂದಿರುಗಿಸಲಾಗುವುದು.

ಮುಕ್ತ ಹಾಗೂ ನ್ಯಾಯಸಮ್ಮತ ಮತದಾನ ನಡೆಸಲು ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮೈಸೂರು ಜಿಲ್ಲೆಯಲ್ಲಿ ದಿನದ ಮೂರೂ ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಲು 150 ಫ್ಲೈಯಿಂಗ್ ಸ್ಕ್ವಾಡ್ ಮತ್ತು 126 ಸ್ಟ್ಯಾಟಿಕ್ ಸರ್ವೇಲೆನ್ಸ್ ಟೀಂಗಳನ್ನು ರಚಿಸಿದ್ದು, ತಂಡದ ಅಧಿಕಾರಿಗಳು ಈಗಾಗಲೇ ಕಾರ್ಯನಿರ್ವಹಿಸುತ್ತಿದ್ದಾರೆ. ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ತಂಡದ ಅಧಿಕಾರಿಗಳು ಗಸ್ತು ತಿರುಗುತ್ತಿದ್ದು, ನೀತಿ ಸಂಹಿತೆ ಉಲ್ಲಂಘಿಸಿ ಬಾರ್ ಅಂಡ್ ರೆಸ್ಟೋರೆಂಟ್, ವೈನ್ ಸ್ಟೋರ್, ಎಂಆರ್‌ಪಿ, ಎಂಎಸ್‌ಪಿಎಲ್ ಔಟ್‌ಲೆಟ್‌ಗಳು ನಡೆಯುತ್ತಿದ್ದರೆ, ಅಂತ ಹವರ ವಿರುದ್ಧ ಕಾನೂನು ರೀತಿಯ ಕ್ರಮ ಕೈಗೊಳ್ಳಲಾಗುವುದು ಎಂದು ಡಾ.ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ.

ಏ.3ರಿಂದ ಬೇಸಿಗೆ ಚಿತ್ರಕಲಾ ಶಿಬಿರ

ಮೈಸೂರು, ಮಾ. 18– ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ಏಪ್ರಿಲ್ 3ರಿಂದ 22ರವರೆಗೆ ಮೈಸೂರಿನ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತದಲ್ಲಿರುವ ಜೆಎಸ್‌ಎಸ್ ಬಾಲಜಗತ್ ಶಾಲಾ ಆವರಣದಲ್ಲಿ ಬೇಸಿಗೆ ಚಿತ್ರಕಲಾ ಶಿಬಿರ ನಡೆಯಲಿದೆ. ಶಿಬಿರವು ಮೂರು ವಿಭಾಗಗಳಲ್ಲಿ ನಡೆಯಲಿದ್ದು 1ರಿಂದ 4ನೇ ತರಗತಿ, 5ರಿಂದ 7ನೇ ತರಗತಿ, 8ರ ನಂತರದ ತರಗತಿಗಳ ಮಕ್ಕಳು ಹಾಗೂ ಹಿಂದೆ ಶಿಬಿರದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳಿಗೆ ನುರಿತ ಕಲಾವಿದರಿಂದ ವಿಶೇಷ ತರಬೇತಿ ನೀಡಲಾಗುವುದು. ಶಿಬಿರದ ಅವಧಿ ಬೆಳಗ್ಗೆ 9ರಿಂದ ಮಧ್ಯಾಹ್ನ 1 ಗಂಟೆಯವರೆಗೆ. ಶಿಬಿರದಲ್ಲಿ ನಿಸರ್ಗ ಚಿತ್ರ ಬಿಡಿಸುವ ಸಲುವಾಗಿ ಒಂದು ದಿನದ ಪ್ರವಾಸವನ್ನು ಏರ್ಪಡಿಸಲಾಗುವುದು. ಶಿಬಿರದ ಕೊನೆಯಲ್ಲಿ ಪ್ರದರ್ಶನ ನಡೆಸಿ ಉತ್ತಮ ಚಿತ್ರಗಳಿಗೆ ಬಹುಮಾನ ಹಾಗೂ ಪ್ರಮಾಣ ಪತ್ರವನ್ನು ನೀಡಲಾಗುವುದು. ಅರ್ಜಿಗಳನ್ನು ಮಾ.20ರಿಂದ ವಿತರಿಸಲಾಗುವುದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಏ.2. ಹೆಚ್ಚಿನ ವಿವರಗಳಿಗೆ ಜೆಎಸ್‌ಎಸ್ ಬಾಲಜಗತ್ ಶಾಲೆ ಮುಖ್ಯೋಪಾಧ್ಯಾಯಿನಿ (ದೂರವಾಣಿ : 2441370/ 9686577503) ಮತ್ತು ಸಂಚಾಲಕ ಎಸ್.ಎಂ. ಜಂಬುಕೇಶ್ವರ (9886623490) ಅಥವಾ ಚಿತ್ರಕಲಾ ಶಿಕ್ಷಕ ಸಲಬಣ್ಣನವರ್ (8095440122) ಅವರನ್ನು ಸಂಪರ್ಕಿಸಬಹುದು.



ನಾಳೆ ಕೈವಲ್ಯಾದೇವಿ ಮಡೆ ಉತ್ಸವ

ಮೈಸೂರು,ಮಾ.18–ನಂಜನಗೂಡು ತಾಲೂಕು ಕಳಲೆ ಗ್ರಾಮದಲ್ಲಿ ಮಾ.20ರಂದು ಶ್ರೀ ಕಳಲೆ ಕೈವಲ್ಯಾದೇವಿ ಅಮ್ಮನವರ ಮಡೆ ಉತ್ಸವ ನಡೆಯಲಿದೆ. ಅಂದು ಸಂಜೆ 5.30ರ ನಂತರ ಅಭಿಷೇಕ, ಮೈಸೂರಿನ ವಿದ್ವಾನ್ ವಿ.ಪ್ರಕಾಶ್ ಮತ್ತು ವೃಂದದವರಿಂದ ಸಂಗೀತೋತ್ಸವ, ಅಮ್ಮನವರ ಉತ್ಸವ, ಮಡೆ ಸೇವೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಭೂಮಿಪುತ್ರ ಸಿ. ಚಂದನ್ ಗೌಡರಿಗೆ ಶ್ರೀ ಮಂತ್ರಾಲಯಂ ಪರಿಮಳ ಪ್ರಶಸ್ತಿ ಪ್ರದಾನ



ಮೈಸೂರು: ಈ ಸಾಲಿನ ಶ್ರೀ ಮಂತ್ರಾಲಯಂ ಪರಿಮಳ ಪ್ರಶಸ್ತಿಗೆ ಭಾಜನರಾದ ರಾಜ್ಯ ರೈತ ಕಲ್ಯಾಣ ಸಂಘದ ಸಂಸ್ಥಾಪಕ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ. ಚಂದನ್‌ಗೌಡ ಅವರಿಗೆ ಶ್ರೀ ಕ್ಷೇತ್ರದಲ್ಲಿ ಸ್ಪೇಸ್ ಮೀಡಿಯಾದ ಸಹಯೋಗದೊಂದಿಗೆ ಮರಳಿ ಸಂಸ್ಕೃತಿಗೆ ಶೀರ್ಷಿಕೆಯೊಂದಿಗೆ ನಡೆದ ಸಮಾರಂಭದಲ್ಲಿ ಶ್ರೀ ಕ್ಷೇತ್ರದ ಪೀಠಾಧಿಪತಿ ಶ್ರೀ ಪರಮಪೂಜ್ಯ ಡಾ. ಶ್ರೀಮತ್ಸುಬುಧೇಂದ್ರತೀರ್ಥ ಶ್ರೀಪಾದಂಗಳವರು ಪ್ರಶಸ್ತಿ ಪ್ರದಾನ ಮಾಡಿದರು.

ಈ ಸಂದರ್ಭದಲ್ಲಿ ಚಿತ್ರನಟ ರಮೇಶ್ ಅರವಿಂದ್, ತಿಪಟೂರು ಶಾಸಕ ಷಡಕ್ಷರಿ, ಪ್ರತಾಪ್ ಸಿಂಹ ನಾಯಕ್, ಅಪ್ಪಾಜಿ ಸಿ.ಎಸ್.ನಾಡನಗೌಡ, ಅದಾನಿ ಗ್ರೂಪ್ ಅಧ್ಯಕ್ಷ ಕಿಶೋರ್ ಆಳ್ವಾ, ಇನ್ನಿತರರು ಉಪಸ್ಥಿತರಿದ್ದರು.

ಇನ್ಫೋಸಿಸ್‌ನ ಡಾ.ಸುಧಾಮೂರ್ತಿ, ಮೇರುನಟರಾದ ಡಾ.ರಾಜ್‌ಕುಮಾರ್, ರಜನಿಕಾಂತ್, ಶಿವರಾಜ್‌ಕುಮಾರ್, ಪುನೀತ್ ರಾಜ್‌ಕುಮಾರ್, ದರ್ಶನ್ ನಂತರ ಈ ಸಾಲಿನಲ್ಲಿ ನಟ ರಮೇಶ್ ಅರವಿಂದ್, ಚಂದನ್‌ಗೌಡ ಸೇರಿದಂತೆ ಹಲವು ಸಾಧಕರು ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಚುನಾವಣಾ ಬಾಂಡ್‌ನಲ್ಲಿ ಪ್ರಧಾನಿ ನಿಜ ಬಣ್ಣ ಬಯಲು!

ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಟೀಕೆ


ಬೆಂಗಳೂರು, ಮಾ. 18(ಕೆಎಂಶಿ)– ಚುನಾವಣಾ ಬಾಂಡ್ ವಿಷಯದಲ್ಲಿ ಸುಪ್ರೀಂಕೋರ್ಟ್ ತೆಗೆದುಕೊಂಡ ನಿರ್ಣಯದಿಂದ ಪ್ರಧಾನಿ ನರೇಂದ್ರ ಮೋದಿ ಅವರ ನೈತಿಕತೆಯ ಮುಖವಾಡ ಕಳಚಿಬಿದ್ದಿದೆ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಇಂದಿಲ್ಲಿ ಟೀಕಿಸಿದ್ದಾರೆ.



ಸುದ್ದಿಗಾರರ ಜತೆ ಮಾತನಾಡಿದ ಅವರು, 'ನಾ ಖಾವೂಂಗಾ.., ನಾ ಖಾನೆ ದೂಂಗಾ..,' ಎಂಬ ಮಾತು ಸುಳ್ಳಾಗಿದೆ, ಭ್ರಷ್ಟಾಚಾರ ನಿಗ್ರಹ ದಾಳಿಗೆ ಒಳಗಾದವರು, ಗುತ್ತಿಗೆ ಪಡೆದವರು ಬಿಜೆಪಿ ಹೆಸರಲ್ಲಿ ಚುನಾವಣಾ ಬಾಂಡ್ ಖರೀದಿಸಿರುವುದು ಬಹಿರಂಗವಾಗಿದೆ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನಿಜ ಬಣ್ಣ ಬಯಲಾಗಿದೆ ಎಂದು ಎಂ.ಬಿ.ಪಾಟೀಲ್ ಹೇಳಿದರು.

ಚುನಾವಣಾ ಬಾಂಡ್ ರೂಪದಲ್ಲಿ ಕಾಂಗ್ರೆಸ್ ಪಕ್ಷಕ್ಕೂ ಸಹಜವಾಗಿ ಒಂದಷ್ಟು ಹಣ ಬಂದಿದೆ, ಯಾವುದೇ ಇಡಿ, ಸಿಬಿಐ ಇನ್ನಿತರ ತನಿಖಾ ಸಂಸ್ಥೆಗಳನ್ನು ಬಳಸಿಕೊಂಡು ಬೆದರಿಕೆ ಹಾಕಿ ವಸೂಲಿ ಮಾಡಿರುವಂತದ್ದಲ್ಲ. ಚುನಾವಣಾ ಬಾಂಡ್ ಆಳ ಬಹಳ ಇದೆ, ಎಲ್ಲಾ ರಾಜಕೀಯ ಪಕ್ಷಗಳ ದೇಣಿಗೆಯನ್ನೂ ತನಿಖೆಗೆ ಒಳಪಡಿಸಲಿ, ಬಾಂಡ್ ವ್ಯವಸ್ಥೆಯಿಂದ ದುರುಪಯೋಗವೇ ಜಾಸ್ತಿಯಾಗಿದೆ. ಪ್ರವಾಹ, ಬರ ಸೇರಿದಂತೆ ಯಾವುದೇ ನೈಸರ್ಗಿಕ ವಿಪತ್ತಿಗೆ ಪ್ರಧಾನಿ ಅವರ ನಿಜವಾದ ಕಾಳಜಿ ಇಲ್ಲ, ರಾಜ್ಯದಲ್ಲಿ ಬರ ಇದ್ದಾಗ ಈ ಕಡೆ ಸುಳಿಯಲಿಲ್ಲ, ಚುನಾವಣೆಗಾಗಿ ಆಗಾಗ್ಗೆ ಭೇಟಿ ನೀಡುತ್ತಿದ್ದಾರೆ ಎಂದರು.

ಆಕಸ್ಮಿಕ ಬೆಂಕಿ; ಲಕ್ಷಾಂತರ ಮೌಲ್ಯದ ಮರ-ಮುಟ್ಟು ನಾಶ



ಮೈಸೂರು,ಮಾ.18(ಆರ್‌ಕೆ)–ಗೋದಾಮಿಗೆ ಆಕಸ್ಮಿಕವಾಗಿ ಬೆಂಕಿ ತಗುಲಿ ಲಕ್ಷಾಂತರ ರೂ. ಮೌಲ್ಯದ ಮರ–ಮುಟ್ಟುಗಳು ನಾಶವಾಗಿವೆ. ಈ ಘಟನೆ ಮೈಸೂರಿನ ರಾಮಕೃಷ್ಣನಗರದಲ್ಲಿ ಇಂದು ಬೆಳಿಗ್ಗೆ ಸಂಭವಿಸಿದೆ.

ರಾಮಕೃಷ್ಣನಗರದ ಶ್ರೀ ರಾಮಕೃಷ್ಣ ಪರಮಹಂಸ ಸರ್ಕಲ್ ಬಳಿ ಇರುವ ಟಿಂಬರ್ ಗೋಡೌನ್‌ನಲ್ಲಿ ಇಂದು ಬೆಳಿಗ್ಗೆ 9–45 ಗಂಟೆ ವೇಳೆಗೆ ಬೆಂಕಿ ಕಾಣಿಸಿಕೊಂಡಿತು. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಕುವೆಂಪುನಗರ ಠಾಣೆ ಇನ್‌ಸ್ಪೆಕ್ಟರ್ ಯೋಗೇಶ್ ಹಾಗೂ ಸಿಬ್ಬಂದಿ, ತಕ್ಷಣ ಸರಸ್ವತಿಪುರಂ ಅಗ್ನಿಶಾಮಕ ಠಾಣೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ಕರೆಸಿ ಬೆಂಕಿ ನಂದಿಸಿದರು.

ಸುಮಾರು 2 ಗಂಟೆ ಕಾರ್ಯಾಚರಣೆ ಬಳಿಕ ಬೆಂಕಿ ಸಂಪೂರ್ಣವಾಗಿ ಶಮನವಾಯಿತಲ್ಲದೆ, ಅಕ್ಕಪಕ್ಕದ ಅಂಗಡಿ ಮಳಿಗೆಗೂ ಹರಡುವುದು ತಪ್ಪಿದಂತಾಯಿತು. ಆದರೆ ಅಷ್ಟರಲ್ಲಿ ಗೋದಾಮಿನಲ್ಲಿ ಶೇಖರಿಸಿದ್ದ ಲಕ್ಷಾಂತರ ರೂ. ಬೆಲೆಬಾಳುವ ಮರ–ಮುಟ್ಟು ಬೆಂಕಿಗೆ ಆಹುತಿಯಾದವು. ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಬೆಂಕಿ ಹೊತ್ತಿಕೊಂಡಿರಬಹುದು ಎನ್ನಲಾಗಿದೆ. ಪ್ರಕರಣ ದಾಖಲಿಸಿಕೊಂಡಿರುವ ಕುವೆಂಪುನಗರ ಠಾಣೆ ಪೊಲೀಸರು ಮಹಜರು ನಡೆಸಿ ತನಿಖೆ ನಡೆಸುತ್ತಿದ್ದಾರೆ. ಸೆಸ್ಕ್ ಅಧಿಕಾರಿಗಳು ಇಂದು ಘಟನಾ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ಆರ್ಥಿಕವಾಗಿ ಸ್ವಾವಲಂಬನೆಯತ್ತ ಸಾಗುತ್ತಿರುವುದು ಶ್ಲಾಘನೀಯ

ಮೈಸೂರು, ಮಾ.18– ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ದಾಪುಗಾಲು ಇಡುತ್ತಾ ಆರ್ಥಿಕವಾಗಿ ಸ್ವಾವಲಂಬನೆಯತ್ತ ಸಾಗುತ್ತಿರುವುದು ನಿಜಕ್ಕೂ ಶ್ಲಾಘನೀಯ ಸಂಗತಿ ಎಂದು ರಂಗಾಯಣ ಉಪ ನಿರ್ದೇಶಕಿ ನಿರ್ಮಲ ಮಠಪತಿ ಅಭಿಪ್ರಾಯಪಟ್ಟರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಮೈಸೂರು ನಗರದ ನೇಗಿಲಯೋಗಿ ಸಭಾಂಗಣದಲ್ಲಿ ಆಯೋಜಿಸಿದ್ದ ವಿಶ್ವ ಮಹಿಳಾ ದಿನಾಚರಣೆಯ ಉದ್ಘಾಟನೆಯನ್ನು ನೆರವೇರಿಸಿ, ಮಾತನಾಡುತ್ತಿದ್ದರು. ಮಹಿಳೆಯರ ಸಬಲೀಕರಣದಿಂದಾಗಿ ಆಕೆ ತನ್ನ ವ್ಯಕ್ತಿತ್ವವನ್ನು ವಿಕಸಿತಗೊಳಿಸಿಕೊಂಡಿರುವುದೇ ಅಲ್ಲದೆ ಬದುಕನ್ನು ತನ್ನ ಸ್ವಂತ ಪರಿಶ್ರಮದಿಂದ ರೂಪಿಸಿಕೊಳ್ಳುವ ನಿಟ್ಟಿನಲ್ಲಿ ಯಶಸ್ವಿಯಾಗಿದ್ದಾಳೆಂದರೆ ಅತಿ ಶಯೋಕ್ತಿಯೇನಿಲ್ಲ ಎಂದು ನುಡಿದರು.

ಸಂಸ್ಕೃತ ವಿದ್ವಾಂಸರಾದ ಡಾ.ಕೆ. ಲೀಲಾಪ್ರಕಾಶ್ ಅವರು ಮಹಿಳಾ ಸಾಧಕಿಯರಾದ ಹೇಮಮಾಲಾ (ಅಂತರ್ಜಾಲ ಪತ್ರಿಕೆ), ಅಂಬಿಕಾ ಶಿವನಂಜಪ್ಪ (ಶಿಕ್ಷಣ), ಬಿ.ಆರ್.ನಾಗರತ್ನ (ಸಾಹಿತ್ಯ), ಗಾಯತ್ರಿ ಸುಂದರೇಶ್ (ಉದ್ಯಮಿ), ಮಲ್ಲಿಗೆ ವೀರೇಶ್(ಸಮಾಜಸೇವೆ), ಅಂಬಾ ಅರಸ್ (ಮಾಧ್ಯಮ), ಪ್ರತಿಭಾ ರಘುರಾಂ ವಾಜಪೇಯಿ (ಯಶಸ್ವಿ ಪುರುಷನ ಹಿಂದೆ ಮಹಿಳೆ) ಅವರನ್ನು ಸನ್ಮಾನಿಸಿದರು.



ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ನಗರದ ನೇಗಿಲಯೋಗಿ ಸಭಾಂಗಣದಲ್ಲಿ ಆಯೋಜಿಸಿದ್ದ ಮಹಿಳಾ ದಿನಾಚರಣೆಯಲ್ಲಿ ವಿವಿಧ ಕ್ಷೇತ್ರದ ಮಹಿಳಾ ಸಾಧಕರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು. ಸಂಸ್ಕೃತ ವಿದ್ವಾಂಸರಾದ ಡಾ.ಕೆ.ಲೀಲಾಪ್ರಕಾಶ್, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಇತರರಿದ್ದಾರೆ.

ಅಧ್ಯಕ್ಷತೆ ವಹಿಸಿದ್ದ ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮಾತನಾಡಿ, ಮಹಿಳೆಯರು ಸಾಧನೆಯ ಮೆಟ್ಟಿಲುಗಳನ್ನು ಏರುತ್ತಾ ಸಾಗುತ್ತಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ. ಪುರುಷರಿಗೆ ಸರಿಸಮನಾಗಿ ತಮ್ಮ ಸ್ವಂತಿಕೆಯನ್ನು ಪ್ರದರ್ಶಿಸುತ್ತಿರುವ ಮಹಿಳೆಯರಿಗೆ ಸಮಾಜದಿಂದ ಮತ್ತಷ್ಟು ಬೆಂಬಲ ಸಿಗಬೇಕಿದೆ ಎಂದು ಅರ್ಥಗರ್ಭಿತವಾಗಿ ಹೇಳಿದರು.

ಇದೇ ಸಂದರ್ಭದಲ್ಲಿ ವಿಶೇಷವಾಗಿ ಆಯೋಜಿಸಿದ್ದ ವಿಚಾರಗೋಷ್ಠಿಯಲ್ಲಿ ಕೆರೋಡಿ ಎಂ.ಲೋಲಾಕ್ಷಿ, ಸುಧಾ ರಮೇಶ್, ಪ್ರೊ.ಸೌಭಾಗ್ಯವತಿ, ಸುಮತಿ ಸುಬ್ರಹ್ಮಣ್ಯ ಪಾಲ್ಗೊಂಡಿದ್ದರು.

ಕಥಾಗೋಷ್ಠಿಯಲ್ಲಿ ಉಷಾ ನರಸಿಂಹನ್, ಬಿ.ಆರ್.ನಾಗರತ್ನ, ಪದ್ಮಾ ಆನಂದ್, ಕೆ.ಟಿ.ಶ್ರೀಮತಿ, ತುಳಸಿ ವಿಜಯಕುಮಾರಿ ಚಿಕ್ಕಕತೆಗಳನ್ನು ವಾಚಿಸಿದರು. ಕವಿಗೋಷ್ಠಿಯಲ್ಲಿ ವಾಣಿ ಸುಬ್ಬಯ್ಯ, ಭಾರತೀ ಪ್ರಸಾದ್, ಸುಮಾ ಪಂಚವಳ್ಳಿ, ನಂದಿನಿ, ಮಂಜುಳಾ, ಶಾಂತಕುಮಾರಿ ಇದ್ದರು. ಕಸಾಪ ಗೌ.ಕಾರ್ಯದರ್ಶಿ ಮ.ನ.ಲತಾ ಮೋಹನ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಪದ್ಮಾ ಪಾಂಡುರಂಗ, ಕೌಸಲ್ಯ, ರೂಪ, ನೀತು, ರಾಜೇಶ್ವರಿ ಮತ್ತಿತರರಿದ್ದರು.

ಮೈಸೂರು ಮಿತ್ರ
ಮಂಗಳವಾರ 19 ಮಾರ್ಚ್ 2024

ಮೇಲುಕೋಟೆಯಲ್ಲಿ ಗರುಡ ಧ್ವಜಾರೋಹಣದೊಂದಿಗೆ

ವೈರಮುಡಿ ಬ್ರಹ್ಮೋತ್ಸವಕ್ಕೆ ವಿಧ್ಯುಕ್ತ ಚಾಲನೆ

ಮೇಲುಕೋಟೆ : ವೈರಮುಡಿ ಬ್ರಹ್ಮೋತ್ಸವದ ಒಂದನೇ ತಿರುನಾಳ್ ಅಂಗವಾಗಿ ಸೋಮವಾರ ಗರುಡ ಧ್ವಜಾರೋಹಣ ನೆರವೇರುವುದರೊಂದಿಗೆ ಚೆಲುವ ನಾರಾಯಣ ಸ್ವಾಮಿಯ ಪ್ರಖ್ಯಾತ ವೈರಮುಡಿ ಬ್ರಹ್ಮೋತ್ಸವ ವಿಧ್ಯುಕ್ತವಾಗಿ ಆರಂಭವಾಗಿದೆ.

ಧ್ವಜಾರೋಹಣದ ನಿಮಿತ್ತ ಬೆಳಿಗ್ಗೆ 7–30 ಗಂಟೆ ವೇಳೆಗೆ ಗರುಡದೇವನನ್ನು ಪಟದಲ್ಲಿ ಪ್ರತಿಷ್ಠಾಪಿಸಿ ದೇವಾನುದೇವತೆಗಳನ್ನು ಬ್ರಹ್ಮೋತ್ಸವಕ್ಕೆ ಆಹ್ವಾನಿಸಿ ಭಕ್ತರ ಇಷ್ಟಾರ್ಥ ಕರುಣಿಸುವಂತೆ ಪ್ರಾರ್ಥಿಸಲಾಯಿತು. ಚಿನ್ನದ ಗರುಡಗಂಬದ ಬಳಿ ವಿಶೇಷ ಹೋಮ ಹವನಾದಿ ಕಾರ್ಯಕ್ರಮಗಳು ನೆರವೇರಿದವು ಇದೇ ವೇಳೆ 3ನೇ ಸ್ಥಾನೀಕರಿಂದ ಗರುಡಸಾಮ ಮಂತ್ರಪಠಣ ನೆರವೇರಿದ ನಂತರ ಚಿನ್ನದ ಧ್ವಜಸ್ಥಂಭದ ಮೇಲೆ ಗರುಡ ಧ್ವಜಾರೋಹಣ ಮಾಡಲಾಯಿತು. ರಾತ್ರಿ ಹಂಸವಾಹನ ಭೇರಿತಾಡನ ತಿರುಪ್ಪೊರೈ ಕಾರ್ಯಕ್ರಮಗಳು ನಡೆದವು. ಇಂದಿನಿಂದ ಮಾ.28 ರವರೆಗೆ ನಡೆಯುವ ಪ್ರಖ್ಯಾತ ವೈರಮುಡಿ ಬ್ರಹ್ಮೋತ್ಸವದಲ್ಲಿ ಮಾ.21ರ ರಾತ್ರಿ ಚೆಲುವ ನಾರಾಯಣಸ್ವಾಮಿಗೆ ಸಾಕ್ಷಾತ್ ಭಗವಂತನ ಕಿರೀಟವೆಂದೇ ಐತಿಹ್ಯವಿರುವ ವಜ್ರ ಖಚಿತ ವಾದ ವೈರಮುಡಿ ಕಿರೀಟ ಧಾರಣಾ ಮಹೋತ್ಸವ ನಡೆಯಲಿದೆ ಮಾ. 24 ರಂದು ಮಹಾ ರಥೋತ್ಸವ ಮಾ.25 ತೆಪ್ಪೋತ್ಸವ ಮಾ. 26 ರಂದು ತೀರ್ಥಸ್ನಾನ ನೆರವೇರಲಿದೆ



ಮೇಲುಕೋಟೆ ವೈರಮುಡಿ ಬ್ರಹ್ಮೋತ್ಸವಕ್ಕೆ ಸೋಮವಾರ ಧ್ವಜಾರೋಹಣ ಉತ್ಸವ ಮೂಲಕ ಚಾಲನೆ ನೀಡಲಾಯಿತು.

ಶಾಸಕರಿಂದ ದೀಪಾಲಂಕಾರ ಪರಿಶೀಲನೆ: ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಕಲ್ಯಾಣೋತ್ಸವದಲ್ಲಿ ಭಾಗಿಯಾಗಿ ಚೆಲುವನಾರಾಯಣ ಸ್ವಾಮಿಯ ಉತ್ಸವವನ್ನು ಹೊತ್ತು ಭಕ್ತಿಭಾವ ಪ್ರದರ್ಶಿಸಿದರು. ನಂತರ ರಾತ್ರಿ ಬೈಕ್ ಚಾಲನೆ ಮಾಡಿಕೊಂಡು ಮೇಲುಕೋಟೆಯ ಎಲ್ಲಾ ಬೀದಿಗಳಲ್ಲಿ ಸಂಚರಿಸಿ ಬ್ರಹ್ಮೋತ್ಸವಕ್ಕೆ ಮಾಡಿದ ದೀಪಾಲಂಕಾರವನ್ನು ಪರಿಶೀಲಿಸಿದರು. ಉತ್ಸವ ಬೀದಿಗಳಲ್ಲಿ ದೀಪಾಲಂಕಾರ ಕಡಿಮೆ ಇದ್ದು, ಆಕರ್ಷಕವಾದ ರೀತಿ ದೀಪಾಲಂಕಾರ ಮಾಡಲು ಸೂಚನೆ ನೀಡಿದರು. ಸ್ವಚ್ಛತೆಯನ್ನೂ ಪರಿಶೀಲಿಸಿದ ಶಾಸಕರು ಪ್ರಮುಖ ಬೀದಿಗಳನ್ನು ಹಾಗೂ ಉತ್ಸವ ಬೀದಿಗಳನ್ನು ಸ್ವಚ್ಛವಾಗಿಡಲು ಅಧಿಕಾರಿಗಳಿಗೆ ಸೂಚನೆ ನೀಡಿದರು. ಭಕ್ತರಿಗೆ ಯಾವುದೇ ಲೋಪವಾಗದಂತೆ ದರ್ಶನಕ್ಕೆ ವ್ಯವಸ್ಥೆ ಮಾಡಬೇಕು ವೈರಮುಡಿ ಬ್ರಹ್ಮೋತ್ಸವದಲ್ಲಿ ಪಾಲ್ಗೊಂಡು ಭಕ್ತರ ಸೇವೆ ಮಾಡಲು ಅವಕಾಶ ದೊರೆತಿರುವುದು ನನಗೆ ಸಿಕ್ಕಿದ ಭಾಗ್ಯ ಎಂದೇ ಭಾವಿಸಿದ್ದೇನೆ ಎಂದು ಸಂತಸ ವ್ಯಕ್ತಪಡಿಸಿದರು.

ಹರಳಹಳ್ಳಿ ಗ್ರಾಪಂ ಅಧ್ಯಕ್ಷರಾಗಿ ರಾಯಸಮುದ್ರ ಯೋಗೀಶ್



ಹರಳಹಳ್ಳಿ ಗ್ರಾಪಂ ನೂತನ ಅಧ್ಯಕ್ಷ ರಾಯಸಮುದ್ರ ಯೋಗೇಶ್ ಅವರನ್ನು ಸದಸ್ಯರು ಹಾಗೂ ಮುಖಂಡರು ಅಭಿನಂದಿಸಿದರು.

ಕೆ.ಆರ್.ಪೇಟೆ, ಮಾ.18– ತಾಲೂಕಿನ ಹರಳಹಳ್ಳಿ ಗ್ರಾಪಂ ನೂತನ ಅಧ್ಯಕ್ಷರಾಗಿ ರಾಯಸಮುದ್ರ ಯೋಗೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷ ಹೆಚ್.ಬಿ.ಶಿವಲಿಂಗೇಗೌಡ ಅವರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷರ ಸ್ಥಾನಕ್ಕೆ ಇಂದು ನಡೆದ ಚುನಾವಣೆಯಲ್ಲಿ ರಾಯಸಮುದ್ರ ಯೋಗೇಶ್ ಹೊರತುಪಡಿಸಿ ಯಾವುದೇ ಸದಸ್ಯರು ನಾಮಪತ್ರ ಸಲ್ಲಿಸದ ಕಾರಣ ಚುನಾವಣೆ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ ಮಂಜುನಾಥ್ ಅವರು ಆಯ್ಕೆ ಘೋಷಿಸಿದರು.

ನೂತನ ಅಧ್ಯಕ್ಷ ಯೋಗೇಶ್ ಅವರನ್ನು ಅಭಿನಂದಿಸಿ ಮಾತನಾಡಿದ ಟಿಎಪಿಸಿಎಂಎಸ್ ಮಾಜಿ ನಿರ್ದೇಶಕ ಹೆಚ್.ಟಿ ಲೋಕೇಶ್, ನೂತನ ಅಧ್ಯಕ್ಷರು ಎಲ್ಲಾ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪಂಚಾಯತಿಯ ಸಮಗ್ರ ಅಭಿವೃದ್ಧಿಗಾಗಿ ಕೆಲಸ ನಿರ್ವಹಿಸಬೇಕು ಎಂದು ಸಲಹೆ ನೀಡಿದರು.

ನೂತನ ಅಧ್ಯಕ್ಷ ರಾಯಸಮುದ್ರ ಯೋಗೇಶ್ ಮಾತನಾಡಿ, ಶಾಸಕ ಹೆಚ್.ಟಿ ಮಂಜು ಅವರ ಮಾರ್ಗದರ್ಶನದಲ್ಲಿ ಮತ್ತು ನಮ್ಮ ಸದಸ್ಯರ ಸಹಕಾರದಿಂದ ಅವಿರೋಧವಾಗಿ ಆಯ್ಕೆಯಾಗಿದ್ದೇನೆ. ಅವರ ಆಶಯದಂತೆ ನಮ್ಮ ಗ್ರಾಪಂ ವ್ಯಾಪ್ತಿಗೆ ಬರುವ ಹಳ್ಳಿಗಳಿಗೆ ನನ್ನ ಅವಧಿಯಲ್ಲಿ ಯಾವುದೇ ಲೋಪವಾಗದೆ ಸರ್ವ ಸದಸ್ಯರ ಸಹಕಾರದಿಂದ ಉತ್ತಮ ಆಡಳಿತ ನಡೆಸುತ್ತೇವೆ ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಗ್ರಾ.ಪಂ ಮಾಜಿ ಅಧ್ಯಕ್ಷ ಬೈರಾಪುರ ಹರೀಶ್, ಗ್ರಾಪಂ ಉಪಾಧ್ಯಕ್ಷೆ ಸುಶೀಲಮ್ಮ, ಗ್ರಾಪಂ ಸದಸ್ಯರುಗಳು, ಮುಖಂಡರಾದ ಸೋಮಶೇಖರ್ ವೆಂಕಟೇಶ್, ಪ್ರೇಮ್ ಕುಮಾರ್ ದೇವರಾಜು, ಈರೇಗೌಡ, ರಮೇಶ್, ಶಂಕರೇಗೌಡ, ಪ್ರಸಾದ್ ಚಕ್ರಪಾಣಿ, ಉಮೇಶ್, ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

ವಿಶ್ವಮಾನವ ಸಂದೇಶ, ವಿಚಾರ ಕ್ರಾಂತಿಗೆ ಆಹ್ವಾನ ಕೈಪಿಡಿ ಬಿಡುಗಡೆ



ಪ್ರಗತಿಪರ ಸಂಘಟನೆಗಳು ಮಂಡ್ಯದ ಕರ್ನಾಟಕ ಸಂಘದಲ್ಲಿ ಆಯೋಜಿಸಿದ್ದ 'ವಿಶ್ವಮಾನವ ಸಂದೇಶ ಮತ್ತು ವಿಚಾರ ಕ್ರಾಂತಿಗೆ ಆಹ್ವಾನ ಕೈಪಿಡಿ'ಯನ್ನು ವನ್ಯಜೀವಿ ತಜ್ಞರು ಹಾಗೂ ಛಾಯಾಗ್ರಾಹಕರಾದ ಕೃಪಾಕರ–ಸೇನಾನಿ ಬಿಡುಗಡೆ ಮಾಡಿದರು. ಖ್ಯಾತ ವಿಮರ್ಶಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ಅಂಕಣಕಾರ ಬಿ.ಚಂದ್ರೇಗೌಡ, ಲೇಖಕ ಡಾ.ಜಗದೀಶ್ ಕೊಪ್ಪ, ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಗುರುಪ್ರಸಾದ್ ಕೆರಗೋಡು, ಪ್ರಗತಿಪರ ಹೋರಾಟಗಾರ ಟಿ.ಎಲ್.ಕೃಷ್ಣೇಗೌಡ ಇನ್ನಿತರರಿದ್ದರು.

ಆರ್‌ಸಿಬಿ ಮಹಿಳಾ ತಂಡಕ್ಕೆ ಪ್ರಶಂಸೆಗಳ ಸುರಿಮಳೆ

ಬೆಂಗಳೂರು: ಪ್ರತಿ ಬಾರಿಯೂ ಈ ಸಲ ಕಪ್ ನಮ್ದೆ ಎನ್ನುತ್ತಿದ್ದ ಆರ್‌ಸಿಬಿ ಅಭಿಮಾನಿಗಳ ಕನಸು 16 ವರ್ಷಗಳ ಬಳಿಕ ನನಸಾಗಿದೆ. ಮಹಿಳಾ ಪ್ರೀಮಿಯರ್ ಲೀಗ್‌ನ ಮೊದಲ ಆವೃತ್ತಿಯಲ್ಲಿ ಹೀನಾಯ ಸೋಲನನುಭವಿಸಿದ್ದ ಆರ್‌ಸಿಬಿ ಮಹಿಳಾ ತಂಡ ತನ್ನ 2ನೇ ಆವೃತ್ತಿಯಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡಿದೆ. 16 ವರ್ಷಗಳ ಬಳಿಕ ಟ್ರೋಫಿ ಗೆದ್ದು ಪ್ರಶಸ್ತಿಯ ಬರ ನೀಗಿಸಿದ ತಂಡಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ರಾಜ್ಯದ ಅನೇಕ ರಾಜಕೀಯ ನಾಯಕರು ಅಭಿನಂದನೆ ಸಲ್ಲಿಸಿದ್ದಾರೆ.

ಚಲುವೇಗೌಡರಿಗೆ ಮೂರು ಚಿನ್ನದ ಪದಕ



ಚಿನಕುರಳಿ,ಮಾ.18– ಉಡುಪಿಯ ಮಾಸ್ಟರ್ ಗೇಮ್ಸ್ ಅಸೋಸಿಯೇಷನ್ ವತಿಯಿಂದ ಇತ್ತೀಚೆಗೆ ನಡೆದ ಓಪನ್ ಅಥ್ಲೆಟಿಕ್ಸ್ ಚಾಂಪಿಯನ್ ಶಿಪ್‌ನಲ್ಲಿ ಪಾಂಡವಪುರ ತಾಲೂಕಿನ ಚಿನಕುರಳಿ ಗ್ರಾಮದ ಸಿ.ಬಿ.ಚಲುವೇಗೌಡ 75 ವರ್ಷ ಮೇಲ್ಪಟ್ಟ ವಿಭಾಗದಲ್ಲಿ ಭಾಗವಹಿಸಿ ಗುಂಡು ಎಸೆತದಲ್ಲಿ ಚಿನ್ನ ಹಾಗೂ ಹ್ಯಾಮರ್ ಎಸೆತದಲ್ಲಿ ಚಿನ್ನ, ತಟ್ಟೆ ಎಸೆತದಲ್ಲಿ ಚಿನ್ನ ಸೇರಿದಂತೆ ಒಟ್ಟು ಮೂರು ಚಿನ್ನದ ಪದಕವನ್ನು ತಮ್ಮದಾಗಿಸಿಕೊಂಡಿದ್ದಾರೆ. ಇದುವರೆಗೆ ಐದು ಬಾರಿ ಅಂತರಷ್ಟ್ರೀಯ ಕ್ರೀಡಾ ಪದಕಗಳನ್ನು ಜಯಿಸಿರುವ ಅವರು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಈವರೆಗೂ 147 ಪದಕಗಳನ್ನು ಗೆದ್ದು ದೇಶಕ್ಕೆ ಕೀರ್ತಿ ತಂದಿದ್ದಾರೆ.

ಚುನಾವಣಾ ಅಕ್ರಮ ತಡೆಯಲು ಕಟ್ಟುನಿಟ್ಟಿನ ಕ್ರಮ

ಮಳವಳ್ಳಿ,ಮಾ.18–ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಮಾ. 16ರಿಂದ ಮಾದರಿ ನೀತಿ ಸಂಹಿತೆ ಜಾರಿಯಲ್ಲಿದ್ದು, ಚುನಾವಣಾ ಅಕ್ರಮ ಚಟುವಟಿಕೆಗಳನ್ನು ತಡೆಯಲು ಕಟ್ಟುನಿಟ್ಟಿನ ಆಗತ್ಯಕ್ರಮ ಕೈಗೊಳ್ಳಲಾಗಿದೆ ಎಂದು ಸಹಾಯಕ ಚುನಾವಣಾ ಅಧಿಕಾರಿ ನಹೀದಾ ಜಮ್‌ಜಮ್ ತಿಳಿಸಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಏಪ್ರಿಲ್ 26ರಂದು ನಡೆಯಲಿರುವ ಚುನಾವಣೆಗೆ ಮಾರ್ಚ್ 16ರಿಂದ ನೀತಿಸಂಹಿತೆ ಜಾರಿಯಾಗಿದೆ ಎಂದು ಹೇಳಿದರು.

ತಾಲೂಕಿನಲ್ಲಿ ಸೂಕ್ಷ್ಮ ಮತಗಟ್ಟೆಗಳು 3, ಅತಿ ಸೂಕ್ಷ್ಮ ಮತಗಟ್ಟೆ 24, ಸಂಪರ್ಕದಿಂದ ದೂರ ಉಳಿದ ಮತಗಟ್ಟೆ 2 ಎಂದು ಗುರುತಿಸಲಾಗಿದೆ, ಚುನಾವಣೆಯಲ್ಲಿ ಅಕ್ರಮ ಚಟುವಟಿಕೆ ತಡೆಯಲು 18 ಅಧಿಕಾರಿಗಳ ತಂಡವನ್ನು ರಚನೆ ಮಾಡಿ ತಾಲೂಕಿನಾದ್ಯಂತ 5 ಚೆಕ್ ಪೋಸ್ಟ್‌ಗಳನ್ನು ಸ್ಥಾಪಿಸಲಾಗಿದೆ. ಅಲ್ಲದೇ ತಾಲ್ಲೂಕು ಕಚೇರಿಯಲ್ಲಿ ಚುನಾವಣಾ ಕಂಟ್ರೋಲ್‌ರೂಂ ಸ್ಥಾಪಿಸಲಾಗಿದ್ದು, ಸಾರ್ವಜನಿಕರು ದೂರವಾಣಿ ಸಂಖ್ಯೆ 08231–242277 ಮೂಲಕ ದೂರು ಸಲ್ಲಿಸಬಹುದಾಗಿದೆ ಎಂದು ಮಾಹಿತಿ ನೀಡಿದರು.



ಮಳವಳ್ಳಿ ಸಹಾಯಕ ಚುನಾವಣಾ ಅಧಿಕಾರಿ ನಹೀದಾ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮಳವಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ 1,25,470 ಪುರುಷರು, 1,26,665 ಮಹಿಳೆಯರು, 23 ಇತರೆ ಸೇರಿದಂತೆ ಒಟ್ಟು 2,52,158 ಮತದಾರರು ಇದ್ದಾರೆ, ಪಟ್ಟಣದಲ್ಲಿ 30 ಬೂತ್ ಗ್ರಾಮೀಣದಲ್ಲಿ 242 ಬೂತ್ ಸೇರಿದಂತೆ ಒಟ್ಟು 272 ಬೂತ್‌ಗಳಲ್ಲಿ ಚುನಾವಣೆ ಪ್ರಕ್ರಿಯೆ ನಡೆಯಲಿದೆ, 26 ಬೂತ್ ಮೇಲ್ವಿಚಾರಕರನ್ನು ನೇಮಿಸಲಾಗಿದೆ ಎಂದರು.

ಹೆಚ್ಚಿನ ಪರಿಣಾಮಕಾರಿಯಾಗಿ ಮಾದರಿ ನೀತಿ ಸಂಹಿತೆ ಜಾರಿ ಮಾಡಲು ಭಾರತ ಚುನಾವಣಾ ಆಯೋಗದ ತಂತ್ರಾಂಶವಾದ ಸಿ–ವಿಜಿಐಎಲ್ ಮೂಲಕ ದೂರುಗಳನ್ನು ಸಹ ಸಾರ್ವಜನಿಕರು ಸಲ್ಲಿಸಬಹುದಾಗಿದೆ, ತಾಲೂಕಿನ ಬೆಂಡರವಾಡಿ, ಕುಂತೂರು, ದೇವಿರಹಳ್ಳಿ, ಸತ್ತೇಗಾಲ, ಚಿಕ್ಕಬಾಗಿಲು ಗ್ರಾಮಗಳಲ್ಲಿ ಚೆಕ್‌ಪೋಸ್ಟ್ ನಿರ್ಮಿಸಲಾಗಿದೆ, ತನಿಖೆಗೆ ಸಾರ್ವಜನಿಕರು ಸಹಕರಿಸಬೇಕೆಂದು ಕೋರಿದರು.

ಪಟ್ಟಣದ ಶಾಂತಿ ಪದವಿಪೂರ್ವ ಕಾಲೇಜಿನಲ್ಲಿ ಸಿಬ್ಬಂದಿಗಳಿಗೆ ತರಬೇತಿ ನೀಡುವುದರ ಜೊತೆಗೆ ಮಸ್ಟರಿಂಗ್ ಮತ್ತು ಡಿ.ಮಸ್ಟರಿಂಗ್ ಕೇಂದ್ರವನ್ನಾಗಿ ಸ್ಥಾಪಿಸಲಾಗಿದೆ, ಸಾರ್ವಜನಿಕರು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಇರುವ ಬಗ್ಗೆ ಖಾತರಿಪಡಿಸಿಕೊಳ್ಳಬೇಕು, 50 ಸಾವಿರ ಮೇಲ್ಪಟ್ಟು ಹಣ ಸಾಗಿಸುವಂತಿಲ್ಲ, ಹಣ ಸಾಗಿಸುವಂತಿದ್ದರೇ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಬೇಕು,

ಚುನಾವಣೆಯಲ್ಲಿ ಹೆಚ್ಚು ಮತದಾನವಾಗಲು ಚುನಾವಣಾ ಆಯೋಗ ಹಾಗೂ ತಾಲೂಕು ಆಡಳಿತದ ವತಿಯಿಂದ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ವಿವರಿಸಿದರು.ಇದೇ ಸಂದರ್ಭದಲ್ಲಿ ತಹಶೀಲ್ದಾರ್ ಕೆ.ಎನ್.ಲೊಕೇಶ್, ಇನ್ಸ್‌ಪೆಕ್ಟರ್ ರವಿಕುಮಾರ್ ಇದ್ದರು.

ಒಂದನೇ ಪುಟದಿಂದ

ದೆಹಲಿ ಕಲೆಕ್ಷನ್‌ಗಾಗೇ ಮಂತ್ರಿ ಇದ್ದಾರೆ



ಹೆಣ್ಣು ದೇವಿಯಿದ್ದಂತೆ, ಈ ನಾರಿಶಕ್ತಿಯನ್ನು ಕೆಣಕಿದವರನ್ನು ಜೂನ್ 4ರಂದು ನಾಶಪಡಿ ಸುವ ತೀರ್ಪು ಬರಬೇಕು. ಕರ್ನಾಟಕದ ಮತದಾರರು ವಿಭಜನಕಾರಿ ಶಕ್ತಿಗಳಿಗೆ ತಕ್ಕ ಉತ್ತರ ನೀಡುವ ಸಂಕಲ್ಪ ತೊಡಬೇಕು. ರಾಜ್ಯದ ವಿಕಸನಕ್ಕೆ ಎನ್‌ಡಿಎ ಸರ್ಕಾರ ಕಳೆದ 10 ವರ್ಷಗಳಲ್ಲಿ ಹಲವು ಜನಪರ ಯೋಜನೆಗಳನ್ನು ನೀಡಿದೆ. ತುರ್ತು ವೈದ್ಯಕೀಯ ಚಿಕಿತ್ಸೆಯಡಿ ಕರ್ನಾಟಕದ 75 ಲಕ್ಷ ಜನರು ಸೌಲಭ್ಯ ಪಡೆದುಕೊಂಡಿದ್ದಾರೆ, ಶಿವಮೊಗ್ಗ ಜಿಲ್ಲೆ ಒಂದರಲ್ಲೇ 5 ಲಕ್ಷಕ್ಕೂ ಹೆಚ್ಚು ಆಯುಷ್ಮಾನ್ ಕಾರ್ಡ್‌ದಾರರಿದ್ದಾರೆ.

ರಾಜ್ಯದ 40 ಲಕ್ಷ ಮನೆಗಳಿಗೆ ಉಚಿತ ಎಲ್‌ಪಿಜಿ ಸಂಪರ್ಕ ಒದಗಿಸಲಾಗಿದೆ, 9 ಲಕ್ಷ ಮಂದಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಲಾಭ ಪಡೆದು ಕೊಂಡಿದ್ದಾರೆ, ಇವರಲ್ಲಿ ಬಹಳಷ್ಟು ಮಂದಿ ಎಸ್‌ಸಿ, ಎಸ್‌ಟಿ, ಒಬಿಸಿ ಜನರೂ ಇದ್ದಾರೆ. ಎಲ್ಲ ವರ್ಗದ ಜನರಿಗಾಗಿ ಬಿಜೆಪಿ ಶ್ರಮಿಸುತ್ತಿದೆ. ತುಮಕೂರು–ಶಿವಮೊಗ್ಗ ನಡುವೆ ಆರು ಸಾವಿರ ಕೋಟಿ ರೂ. ವೆಚ್ಚದಲ್ಲಿ ರಾಷ್ಟ್ರೀಯ ಹೆದ್ದಾರಿ ನಿರ್ಮಿಸಲಾಗುತ್ತಿದೆ, ಇದರಿಂದ ಶಿವಮೊಗ್ಗ–ಬೆಂಗಳೂರು ನಡುವಿನ ಪ್ರಯಾಣ ಸಮಯದಲ್ಲಿ ಎರಡು ಗಂಟೆ ಉಳಿತಾಯ ವಾಗಲಿದೆ. ಮುಂದಿನ ಐದು ವರ್ಷ ಎನ್‌ಡಿಎ ಸರ್ಕಾರ ಜನರ ಮನೆ ಬಾಗಿಲಿಗೆ ಇನ್ನೂ ಹೆಚ್ಚಿನ ಅಭಿವೃದ್ಧಿಗೆ ಕಾರ್ಯಗಳನ್ನು ತಲುಪಿಸಲಿದೆ. ನಾರಿಶಕ್ತಿಯನ್ನು ದಮನ ಮಾಡುವ ಪ್ರಯತ್ನದಲ್ಲಿ ನಿರತರಾಗಿರುವ ವಿರೋಧ ಪಕ್ಷಗಳು, ಜಾತಿ, ಸಮುದಾಯ, ಭಾಷೆ, ದೇಶ ಮತ್ತು ಕರ್ನಾಟಕದ ವಿಭಜನೆಯ ಮಾತ ನಾಡುತ್ತಿದ್ದಾರೆ. ಇಂತಹ ವಿಭಜನಕಾರಿ ಶಕ್ತಿಗಳ ನಾಶಕ್ಕೆ ಪಣತೊಟ್ಟು ರಾಜ್ಯದ ಜನತೆ ಏಪ್ರಿಲ್ 26 ಮತ್ತು ಮೇ 7ರಂದು ಮನೆಯಿಂದ ಹೊರಬಂದು ಮತದಾನ ಮಾಡಬೇಕು ಎಂದು ಪ್ರಧಾನಮಂತ್ರಿ ಕರೆ ನೀಡಿದ್ದಾರೆ. ರಾಜ್ಯದ ಎಲ್ಲಾ 28 ಕ್ಷೇತ್ರಗಳಲ್ಲೂ ಎನ್‌ಡಿಎ ಅಭ್ಯರ್ಥಿಗಳು ಜಯ ಗಳಿಸುವ ಮೂಲಕ 'ಈ ಬಾರಿ 400 ಮೀರಿ' ಸಾಗಬೇಕು ಎಂದರು.

ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳ ಒಕ್ಕೂಟಕ್ಕೆ ದೇಶದ ವಿಕಸನದ ಅಜೆಂಡಾ ಇಲ್ಲಾ, ಬರೀ ಸುಳ್ಳುಗಳನ್ನೇ ಹೇಳುತ್ತಿವೆ. ಸುಳ್ಳು ಭರವಸೆಗಳನ್ನು ನೀಡುತ್ತಿವೆ, ಪದೇ ಪದೆ ಸುಳ್ಳು ಹೇಳುವ ಮೂಲಕ ಸುಳ್ಳನ್ನೇ ಸತ್ಯವಾಗಿಸಲು ಹೊರಟಿವೆ. ಭ್ರಷ್ಟಾಚಾರ, ಅಭಿವೃದ್ಧಿ ವಿರೋಧಿ, ರೈತ ವಿರೋಧಿ, ಯುವಜನ ವಿರೋಧಿ ಕೆಲಸಗಳಲ್ಲೇ ನಿರತವಾಗಿವೆ, ಕಾಂಗ್ರೆಸ್‌ನ ಮನಸ್ಥಿತಿ ದೇಶವನ್ನು ಉದ್ಧಾರ ಮಾಡುವ ಬದಲಿಗೆ ಜನರನ್ನು ಲೂಟಿ ಮಾಡಿ ಜೇಬು ತುಂಬಿಸಿ ಕೊಳ್ಳುವುದಾಗಿದೆ. ಭಾರತದ ಪ್ರಗತಿಯನ್ನು ಇಡೀ ವಿಶ್ವ ನೋಡುತ್ತಿದೆ, ತಂತ್ರಜ್ಞಾನ, ಕೃಷಿ, ಬಾಹ್ಯಾಕಾಶ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲಿ ವಿಕಸನ ಹೊಂದುತ್ತಿರುವ ದೇಶವಾಗಿ ಗುರುತಿಸಲ್ಪಡುತ್ತಿದೆ. ಕಳೆದ 10 ವರ್ಷಗಳ ಎನ್‌ಡಿಎ ಆಡಳಿತದಲ್ಲಿ 25 ಕೋಟಿ ಜನತೆಯನ್ನು ಬಡತನ ರೇಖೆಯಿಂದ ಮೇಲೆತ್ತಲಾಗಿದೆ. ದೇಶದ ನಾರಿಶಕ್ತಿ ಹಾಗೂ ಹಿಂದೂತ್ವ ನಾಶ ಮಾಡಲು ಹೊರಟಿರುವವರಿಗೆ ಜೂನ್ 4ರ ಫಲಿತಾಂಶ ಬುದ್ಧಿ ಕಲಿಸುವಂತಿರಬೇಕು, ನಾರಿಶಕ್ತಿ ಏನೆಂಬುದನ್ನು ತೋರಿಸಬೇಕು ಎಂದು ಕರೆ ನೀಡಿದರು.

ಗೆಲ್ಲಿಸಿ ದೆಹಲಿಗೆ ಕರೆದುಕೊಂಡು ಬರ್ತೀನಿ

ಕ್ಷೇತ್ರಗಳಲ್ಲೂ ಬಿಜೆಪಿ ಅಭ್ಯರ್ಥಿಗಳನ್ನ ಗೆಲ್ಲಿಸಿ, ದೆಹಲಿಗೆ ಕರೆದುಕೊಂಡು ಬರುತ್ತೇನೆ ಎಂದಿದ್ದಾರೆ. ಕರ್ನಾಟಕದಲ್ಲಿ ಚುನಾವಣೆ ರಣ ಕಹಳೆ ಮೊಳಗಿಸಿದೆ. ಮೋದಿ ಸರ್ಕಾರ ಚುನಾವಣೆಗೆ ಕೆಲಸ ಮಾಡುವ ಸರ್ಕಾರವಲ್ಲ. ದಿನದ 24 ಗಂಟೆ ವರ್ಷದ 365 ದಿನ ಕೆಲಸ ಮಾಡುವ ಸರ್ಕಾರ. ರೈತರ ಖಾತೆಗೆ ಹಣ ಹಾಕುವ ಮೂಲಕ ಮಂದಹಾಸ ತರುವ ಕೆಲಸ ಮಾಡಿದೆ. ಕಾಶ್ಮೀರದ ಸ್ವಾಯತತ್ತೆಯ ಕನಸಾಗಿದ್ದ ಆರ್ಟಿಕಲ್ 370 ರದ್ದು ಮಾಡಿದ್ದಾರೆ. ಕೋವಿಡ್ ನಂತರ ವಿಶ್ವದ ಅನೇಕ ರಾಷ್ಟ್ರ ಆರ್ಥಿಕವಾಗಿ ಹಿಂದುಳಿದ್ದರೂ, ಭಾರತ ವಿಶ್ವದ ಬಲಿಷ್ಠ ಆರ್ಥಿಕ ದೇಶವಾಗಿ ಬೆಳೆಯುವಂತೆ ಮಾಡಿದ್ದಾರೆ ಎಂದು ಹಾಡಿ ಹೊಗಳಿದ್ದಾರೆ. ಮುಂದಿನ ದಿನಗಳಲ್ಲಿ ಭಾರತ ಮೋದಿ ಅವರ ನೇತೃತ್ವದಲ್ಲಿ ಆರ್ಥಿಕವಾಗಿ 3ನೇ ರಾಷ್ಟ್ರ ಆಗಲಿದೆ. ಮೋದಿ ಅವರು ಒಂದೇ ಒಂದು ದಿನ ರಜೆ ಪಡೆಯದೇ ಕೆಲಸ ಮಾಡಿದ್ದಾರೆ. ಮಲೆನಾಡು ಭಾಗದಲ್ಲಿಯೂ ಸಾಕಷ್ಟು ಕೆಲಸ ಮಾಡಿದ್ದಾರೆ. ಹೆಚ್.ಡಿ ದೇವೇಗೌಡರೂ ದೂರವಾಣಿ ಮೂಲಕ ಮಾತನಾಡಿದ್ದಾರೆ, ನಾನು ಶಿವಮೊಗ್ಗಕ್ಕೆ ಪ್ರಚಾರಕ್ಕೆ ಬರುತ್ತೇನೆ ಎಂದು ತಿಳಿಸಿದ್ದಾರೆ.

ನೀವಿಂಗೆ ನೋಡಬ್ಯಾಡಿ ನಮ್ಮ...

ಮೇಲೆ ಒತ್ತಡ ಹಾಕಿದ್ದಾರೆ ಎಂದು ಹೆಚ್‌ಡಿಕೆ ತಿಳಿಸಿದರು.

18 ಕ್ಷೇತ್ರಗಳಲ್ಲಿ ಬಿಜೆಪಿಗೆ ಅನುಕೂಲ ಆಗುತ್ತದೆ: ನಮ್ಮ ಪಕ್ಷದ ಮುಖಂಡರು ಜೆಡಿಎಸ್–ಬಿಜೆಪಿ ಮೈತ್ರಿಯಿಂದ ಜೆಡಿಎಸ್‌ಗೆ ದೊಡ್ಡ ಲಾಭವಿಲ್ಲ ಎಂದು ಹೇಳಿದ್ದಾರೆ. 18 ಕ್ಷೇತ್ರಗಳಲ್ಲಿ ಜೆಡಿಎಸ್ ಪಕ್ಷದ ಮತಗಳಲ್ಲಿ ಶೇ3–4ರಷ್ಟು ಬಿಜೆಪಿಗೆ ಸ್ವಿಂಗ್ ಆದರೆ 18 ಕ್ಷೇತ್ರಗಳಲ್ಲಿ ಬಿಜೆಪಿ ಗೆಲ್ಲಲಿದೆ. ನಮ್ಮ ಪಕ್ಷದ ದುಡಿಮೆ ಬಿಜೆಪಿಗೆ ಅನುಕೂಲ ಆಗುತ್ತದೆ. ಇದನ್ನು ಬಿಜೆಪಿ ಹೈಕಮಾಂಡ್ ಗಮನಕ್ಕೆ ತನ್ನಿ ಎಂದು ಮುಖಂಡರು ಹೇಳಿದ್ದಾರೆ. ಬಿಜೆಪಿ ಸರಿ ಯಾಗಿ ನಮ್ಮನ್ನು ಬಳಕೆ ಮಾಡಿಕೊಳ್ಳಲಿ. ಇಲ್ಲದೇ ಹೋದರೆ ಮುಂದೆ ಪೆಟ್ಟು ಬಿದ್ದರೆ ಅದರ ಸಾಧಕ – ಬಾಧಕಗಳಿಗೆ ಬಿಜೆಪಿ ಜವಾಬ್ದಾರಿ ಆಗಲಿದೆ ಎಂದರು.

ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ: ಜೆಡಿಎಸ್ ಪಕ್ಷವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದ ಮಿತ್ರಪಕ್ಷ ಬಿಜೆಪಿ ಬಗ್ಗೆ ಬೇಸರ ವ್ಯಕ್ತಪಡಿ ಸಿದ ಕುಮಾರಸ್ವಾಮಿ, ಕೋಲಾರ ಲೋಕಸಭೆ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟು ಕೊಡಲು ವಿಳಂಬ ಮಾಡುತ್ತಿರುವ ಬಗ್ಗೆ ಅತೃಪ್ತಿ ಹೊರ ಹಾಕಿದರು. ರಾಜ್ಯದ ಅನೇಕ ಕ್ಷೇತ್ರಗಳಲ್ಲಿ ಜೆಡಿಎಸ್ ಪಕ್ಷಕ್ಕೆ ಶಕ್ತಿ ಇದೆ ಅಂತ ಎಲ್ಲರಿಗೂ ಗೊತ್ತು. ರಾಜಕೀಯ ವಿಶ್ಲೇಷಣೆ ಮಾಡುವ ಎಲ್ಲರಿಗೂ ಈ ವಿಷಯ ಗೊತ್ತಿದೆ. ಬಿಜೆಪಿ ಅವರು ಇದನ್ನೆಲ್ಲ ಗಮನಿಸುತ್ತಾರೆ. ಅದನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳಿ ಅಂತ ಹೇಳೋಕೆ ನಾವು ಸಭೆ ಮಾಡಿದ್ದು ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ನಮ್ಮ ಪಕ್ಷದ ಕಾರ್ಯಕರ್ತರು, ಬಿಜೆಪಿ ಕಾರ್ಯಕರ್ತರು ಗೊಂದಲಕ್ಕೆ ಎಡೆ ಮಾಡಿಕೊಡದೇ ಒಟ್ಟಾಗಿ ಕೆಲಸ ಮಾಡಿ. ಅದು ನನ್ನ ವಿನಂತಿ. ನಮ್ಮ ಗುರಿ ನಾವು ಮುಟ್ಟಬೇಕು. ನಮ್ಮ ಗುರಿ ಅಧಿಕಾರ ಅಲ್ಲ, ರಾಜ್ಯದ ಅಭಿವೃದ್ಧಿ ಮಾತ್ರ. 75 ವರ್ಷಗಳಿಂದ ನಮ್ಮ ರಾಜ್ಯಕ್ಕೆ ಅನ್ಯಾಯ ಆಗಿದೆ. ಮೈತ್ರಿ ಕಾರಣ ನಮ್ಮ ರಾಜ್ಯದ ಅಭಿವೃದ್ಧಿಗೆ ಪರಿಹಾರ ತರಬೇಕು. ನಿತ್ಯ ಕೇಂದ್ರದ ಮೇಲೆ ಆರೋಪ ಮಾಡುವ ಕಾಂಗ್ರೆಸ್ 45 ವರ್ಷ ರಾಜ್ಯ, ದೇಶವನ್ನು ಆಳಿದೆ. ಕಾಂಗ್ರೆಸ್‌ನ ಕೊಡುಗೆ ರಾಜ್ಯಕ್ಕೆ ಏನು? ನಿಮ್ಮಿಂದ ರಾಜ್ಯಕ್ಕೆ ಅನ್ಯಾಯ ಆಗಿದೆ. ಇದನ್ನು ಸರಿ ಮಾಡೋಕೆ ನಮ್ಮ ಮೈತ್ರಿ ಆಗಿದೆ. ಲೋಕಸಭೆಯಲ್ಲಿ ದನಿ ಗಟ್ಟಿಯಾಗಿರಬೇಕು. ಲೋಕಸಭೆಯಲ್ಲಿ ನಮ್ಮ ದನಿ ಇರಬೇಕು ಎಂದು ಹೇಳಿದರು.

ನಾಡಿನ ಜನರಿಗೆ ಮನವಿ ಮಾಡುತ್ತೇನೆ. ಎಲ್ಲ 28 ಕ್ಷೇತ್ರಗಳಲ್ಲಿ ಬಿಜೆಪಿ – ಜೆಡಿಎಸ್ ಅಭ್ಯರ್ಥಿಗಳನ್ನು ಗೆಲ್ಲಿಸುವ ಆಶೀರ್ವಾದ ಮಾಡಿ. ಒಂದು ಅವಕಾಶ ವನ್ನು ದೇವೇಗೌಡರ ಮಾರ್ಗದರ್ಶ ನದಲ್ಲಿ ನಾವು ಮೈತ್ರಿಗೆ ಸಹಕಾರ ಕೊಡ್ತಿ ದ್ದೇವೆ. ನಾಡಿಗೆ ಆಗಿರುವ ಅನ್ಯಾಯ ಸರಿ ಮಾಡೋಕೆ ನಾವು ಮೈತ್ರಿ ಆಗಿದ್ದೇವೆ. ರಾಜ್ಯದ ಅನ್ಯಾಯ ಸರಿ ಮಾಡೋದರಲ್ಲಿ ನಾವು ವಿಫಲವಾದರೆ ನೀವು ನಮ್ಮನ್ನು ನೇರವಾಗಿ ಪ್ರಶ್ನೆ ಮಾಡಿ ಎಂದು ಹೇಳಿದರು.

ಇವತ್ತಿನ ಸಭೆಯಲ್ಲಿ ಚುನಾವಣೆ ಉಸ್ತುವಾರಿಗಳು ಮತ್ತು ಜಿಲ್ಲಾ ಘಟಕದ ಅಧ್ಯಕ್ಷರು ಭಾಗವಹಿಸಿದ್ದರು. ಕೆಲವು ವಿಷಯಗಳ ಬಗ್ಗೆ ಚರ್ಚೆ ಮಾಡಿದ್ದೇವೆ. ಅ ಸಭೆಯಲ್ಲಿ ನಮ್ಮ ಪ್ರಮುಖರು ಅಭಿಪ್ರಾಯ ಹೇಳಿದ್ದಾರೆ. ನಮ್ಮ ಉದ್ದೇಶ ಕಾಂಗ್ರೆಸ್‌ನವರು ಜೆಡಿಎಸ್ ಪಕ್ಷವನ್ನು ಮುಗಿಸ್ತೀವಿ ಎನ್ನುತ್ತಿದ್ದಾರೆ. 28 ಕ್ಷೇತ್ರ ಗೆಲ್ಲುತ್ತೇವೆ ಎಂದು ಹೇಳಿಕೊಂಡು ತಿರುಗುತ್ತಿದ್ದಾರೆ. ಇದನ್ನು ಬಿಜೆಪಿ ನಾಯಕರು ಅರ್ಥ ಮಾಡಿಕೊಳ್ಳಬೇಕು. ನಮ್ಮ ಸಹಕಾರ ಇರುವ ರೀತಿಯಲ್ಲೇ ಬಿಜೆಪಿಯಿಂದಲೂ ಸಹಕಾರ ಇರಬೇಕು. ಅದನ್ನು ಸರಿ ಮಾಡುವ ನಿಟ್ಟಿನಲ್ಲಿ ಕೆಲವು ಸೂಚನೆ ಬಿಜೆಪಿ ಅವರಿಗೆ ನೀಡಬೇಕು ಅಂತ ಕೆಲವರು ಹೇಳಿದ್ದಾರೆ ಎಂದರು.

ಎರಡು ಪಕ್ಷದ ನಾಯಕರ ಸಭೆಗಳು, ಚುನಾವಣೆ ಪ್ರಚಾರದಲ್ಲಿ ಎರಡು ಪಕ್ಷಗಳು ಹೇಗೆ ಕೆಲಸ ಮಾಡಬೇಕು. ಬೂತ್ ಮಟ್ಟದಲ್ಲಿ ಹೇಗೆ ಕಾರ್ಯಕರ್ತರು ಕೆಲಸ ಮಾಡಬೇಕು ಅಂತ ಸಲಹೆ ಕೊಡಬೇಕು ಅಂತ ಹೇಳಿದ್ದಾರೆ. ಉತ್ತರ ಕರ್ನಾಟಕದ ಕೆಲವು ಕ್ಷೇತ್ರಗಳ ವಿಜಯಪುರ, ಕಲ ಬುರ್ಗಿಯಲ್ಲಿ ಬಿಜೆಪಿಗಿಂತ ಜೆಡಿಎಸ್ ಪ್ರಬಲವಾಗಿದೆ. ಇಂತಹ ಕ್ಷೇತ್ರಗಳಲ್ಲಿ ನಮ್ಮ ನಾಯಕರನ್ನು ಸರಿಯಾಗಿ ಬಳಕೆ ಮಾಡಿಕೊಳ್ಳಬೇಕು. ಇದರ ಬಗ್ಗೆ ಬಿಜೆಪಿ ಹೈಕಮಾಂಡ್ ಜತೆ ಚರ್ಚೆ ಆಗಬೇಕು ಅಂತ ಪ್ರಮುಖರು ಹೇಳಿದ್ದಾರೆ ಎಂದು ಕುಮಾರಸ್ವಾಮಿ ಅವರು ಹೇಳಿದರು.

ನಮಗೆ ಗೌರವಯುತವಾಗಿ ನಡೆಸಿಕೊಳ್ಳಬೇಕು, ಕಡೆಗಣಿಸಬಾರದು. ಅದರಿಂದ ಆಗುವ ಪರಿಣಾಮವನ್ನು ಸಭೆಯಲ್ಲಿ ಚರ್ಚೆ ಮಾಡಿದ್ದೇವೆ. ಇದೆಲ್ಲವನ್ನೂ ಬಿಜೆಪಿ ಹೈಕಮಾಂಡ್ ಜತೆ ಚರ್ಚೆ ಮಾಡಿ ಸೌಹಾರ್ದಯುತವಾಗಿ ಒಟ್ಟಾಗಿ ಕೆಲಸ ಮಾಡೋ ನಿಟ್ಟಿನಲ್ಲಿ ಚರ್ಚೆ ಮಾಡಿದ್ದೇವೆ ಎಂದರು. ಕೋರ್ ಕಮಿಟಿ ಅಧ್ಯಕ್ಷರ ಜಿ.ಟಿ ದೇವೇಗೌಡ, ಮಾಜಿ ಸಚಿವ ಬಂಡೆಪ್ಪ ಕಾಶೆಂಪೂರ್, ಶಾಸಕ ಸಮೃದ್ಧಿ ಮಂಜುನಾಥ್, ಮಾಜಿ ಶಾಸಕ ತಿಮ್ಮರಾಯಪ್ಪ ಮತ್ತಿತರರು ಉಪಸ್ಥಿತರಿದ್ದರು.

ಟಿಕೆಟ್ ಕೇಳಿದ್ದೇವೆ: ಜಿಟಿಡಿ

ಪ್ರಧಾನಿ ಆಗಬೇಕು ಎಂದರು. ಜೆಡಿಎಸ್ ಕ್ಷೇತ್ರಗಳ ಟಿಕೆಟ್ ಘೋಷಣೆ ವಿಚಾರವಾಗಿ ಪ್ರತಿಕ್ರಿಯಿಸಿ, ನಮ್ಮ ನಾಯಕ ಹೆಚ್ ಡಿ ಕುಮಾರಸ್ವಾಮಿ ಬರುತ್ತಾರೆ. ಅವರ ಜೊತೆ ಚರ್ಚೆ ಮಾಡಿ ನಿರ್ಧಾರ ಮಾಡುತ್ತೇವೆ. ನಮಗೆ ಸಿಗುವ ಕ್ಷೇತ್ರಗಳ ಬಗ್ಗೆ ನಮಗೆ ಯಾವುದೇ ಗೊಂದಲ ಇಲ್ಲ. ಚಿಕ್ಕಬಳ್ಳಾ ಪುರ ಕ್ಷೇತ್ರವನ್ನು ನಾವು ಕೇಳಿಲ್ಲ. ಆದರು ಬಿಜೆಪಿ ಅವರು ತೆಗೆದುಕೊಳ್ಳಿ ಅಂತಿದ್ದಾರೆ ಅಂತ ಮಾಧ್ಯಮಗಳಲ್ಲಿ ನೋಡಿದ್ದೇನೆ. ಅಂತಿಮವಾಗಿ ನಮ್ಮ ನಾಯಕರ ಜೊತೆ ಚರ್ಚೆ ಮಾಡಿ ಮುಂದಿನ ತೀರ್ಮಾನ ಮಾಡುತ್ತೇವೆ ಎಂದು ತಿಳಿಸಿದರು.

ಹೆಚ್‌ಡಿಕೆ ಅಥವಾ ನಿಖಿಲ್ ಮಂಡ್ಯದಿಂದ ಸ್ಪರ್ಧೆ ಮಾಡಬೇಕು: ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಮಾತನಾಡಿ, ಹೆಚ್.ಡಿ. ಕುಮಾರ ಸ್ವಾಮಿ ಅಥವಾ ನಿಖಿಲ್ ಕುಮಾರ ಸ್ವಾಮಿ ಅವರು ಮಂಡ್ಯದಿಂದ ಸ್ಪರ್ಧೆ ಮಾಡಬೇಕೆಂದು ನಾವೆಲ್ಲ ಈಗಾಗಲೇ ಸರ್ವಾನುಮತದಿಂದ ಹೇಳಿದ್ದೇವೆ. ಮಾರ್ಚ್ 25ಕ್ಕೆ ಅಭ್ಯರ್ಥಿ ಘೋಷಣೆ ಮಾಡುವುದಾಗಿ ಕುಮಾರಸ್ವಾಮಿ ಅವರು ಹೇಳಿದ್ದಾರೆ. ಅದರಂತೆ ಎಲ್ಲವೂ ಸುಲಲಿತವಾಗಿ ನಡೆಯುತ್ತದೆ. ಮಂಡ್ಯದಲ್ಲಿ ಯಾರೇ ನಿಂತರು ಗೆಲ್ಲುವ ವಾತಾವರಣ ಇದೆ. ಕುಮಾರಸ್ವಾಮಿ, ನಿಖಿಲ್ ಬಂದರೆ ಅತ್ಯಂತ ಪ್ರಚಂಡ ಬಹುಮತದಿಂದ ಗೆಲ್ಲುತ್ತಾರೆ. ಕುಮಾರಸ್ವಾಮಿ ಅವರ ಋಣ ತೀರಿಸಬೇಕೆನ್ನುವ ಅಭಿಪ್ರಾಯ ನಮ್ಮ ಜಿಲ್ಲೆಯಲ್ಲಿ ಇದೆ. ನಾವು ಇವತ್ತು ಒತ್ತಾಯ ಮಾಡಿದ್ದೇವೆ. ಕುಮಾರ ಸ್ವಾಮಿ ಅವರು ನಮ್ಮ ಮಾತಿಗೆ ಬೆಲೆ ಕೊಡಬೇಕು ಎಂದರು. ನಿಮಗೆ ಸ್ಪರ್ಧೆ ಮಾಡಿ ಅಂತ ಕುಮಾರ ಸ್ವಾಮಿ ಹೇಳಿದರೆ ಸ್ಪರ್ಧೆಗೆ ಒಪ್ಪಿ ಕೊಳ್ತೀರಾ ಎಂಬ ಪ್ರಶ್ನೆ ಉತ್ತರಿಸಿ, ಬಹಳ ಜನ ನಮ್ಮಲ್ಲಿ ಸಮರ್ಥ ಅಭ್ಯರ್ಥಿಗಳು ಇದ್ದೇವೆ. ಅಂತಹ ಪರಿಸ್ಥಿತಿ ಬಂದಾಗ ಪಕ್ಷ ಏನು ತೀರ್ಮಾನ ಮಾಡುತ್ತೋ ಅದಕ್ಕೆ ನಾವು ಬದ್ಧರಾಗಿ ಇರುತ್ತೇವೆ. ನಾವು ಪಕ್ಷದ ಕಟ್ಟಾಳು. ಪಕ್ಷ ಯಾವುದೇ ಜವಾಬ್ದಾರಿ ಕೊಟ್ಟರೂ ಮಾಡಿಕೊಂಡು ಬಂದಿದ್ದೇವೆ. ಬಹಳ ಜನ ನಮ್ಮ ಪಕ್ಷದಲ್ಲಿ ಸಮರ್ಥರಿದ್ದೇವೆ. ಪಕ್ಷ ಏನೇ ತೀರ್ಮಾನ ಮಾಡಿದರೂ ಅದನ್ನು ಪಾಲಿಸುತ್ತೇವೆ ಎಂದು ಸ್ಪಷ್ಟಪಡಿಸಿದರು.

ಮಣಿಪಾಲ್ ಆಸ್ಪತ್ರೆಯಲ್ಲಿ ಅತ್ಯಾಧುನಿಕ ವಿಧಾನದಲ್ಲಿ ಡಯಾಲಿಸಿಸ್ ಸೇವೆ



ಮೈಸೂರು,ಮಾ.18 (ಎಂಟಿವೈ)– ಕಿಡ್ನಿ ವೈಫಲ್ಯ ಚಿಕಿತ್ಸೆಗಾಗಿ ನಡೆಸುವ ಡಯಾಲಿಸಿಸ್‌ಗಾಗಿ ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಅತ್ಯಾಧುನಿಕ ಚಿಕಿತ್ಸಾ ವಿಧಾನವಾದ ಡಬಲ್ ಸ್ಟೇಜ್ ರಿವರ್ಸ್ ಆಸ್ಮೋಸಿಸ್(ಆರ್‌ಓ) ಅಳವಡಿಸಿಕೊಳ್ಳಲಾಗಿದ್ದು, ರೋಗಿಗಳ ಮೂತ್ರಪಿಂಡ ಆರೋಗ್ಯ ಕಾಪಾಡುವಿಕೆಯಲ್ಲಿ ಗಮನಾರ್ಹ ಪ್ರಗತಿ ಸಾಧಿಸಿದೆ ಎಂದು ಆಸ್ಪತ್ರೆಯ ಮೂತ್ರರೋಗಶಾಸ್ತ್ರ ತಜ್ಞ ವೈದ್ಯ ಡಾ.ವಿ.ಪಿ.ಎನ್.ಕಾವೇರಪ್ಪ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೂತ್ರಪಿಂಡ ವೈಫಲ್ಯದ ಸಂದರ್ಭಗಳಲ್ಲಿ ಮಾಡುವ ಡಯಾಲಿಸಿಸ್ ವೇಳೆ ಬಳಸುವ ನೀರಿನಿಂದ ಸೋಂಕು, ಅಗತ್ಯ ರಾಸಾಯನಿಕ ಮಿಶ್ರಣವನ್ನು ವ್ಯಕ್ತಿಗಳೇ ಮಾಡುವುದರಿಂದ ಸಮಸ್ಯೆ ಉಂಟಾಗುವ ಸಾಧ್ಯತೆ ಇದೆ. ಹೀಗಾಗಿ ಇದನ್ನು ನಿವಾರಿಸುವ ನಿಟ್ಟಿನಲ್ಲಿ ಮೈಸೂರಲ್ಲಿ ಇದೇ ಮೊದಲ ಬಾರಿಗೆ ಮಣಿಪಾಲ್ ಆಸ್ಪತ್ರೆಯಲ್ಲಿ ಡಬಲ್ ಸ್ಟೇಜ್ ರಿವರ್ಸ್ ಆಸ್ಮೋಸಿಸ್ (ಆರ್‌ಓ) ಹಾಗೂ ಬೈಬ್ಯಾಗ್ ಎಂಬ ಅತ್ಯಾಧುನಿಕ ಸೇವೆ ಆರಂಭಿಸಲಾಗಿದೆ. ಈ ಆರ್‌ಓ ವಿಧಾನ ಬಳಕೆ ಅತ್ಯಾಧುನಿಕವಾಗಿದೆ. ಡಯಾಲಿಸಿಸ್‌ಗೆ ಬಳಸುವ ನೀರಿನಲ್ಲಿ ರೋಗಾಣುಗಳು, ವಿಷ ಪೂರಿತ ರಾಸಾಯನಿಕ ಅಥವಾ ಲೋಹಗ ಳಂತಹ ಕಲಶಗಳು ಇರದಂತೆ ನೋಡಿಕೊಳ್ಳು ತ್ತಾರೆ. ಇದು ಅತಿ ಶುದ್ಧವಾದ ನೀರು ಮಾತ್ರ ಲಭ್ಯವಾಗುವಂತೆ ಮಾಡುತ್ತದೆ. ರೋಗಿಗಳ ಆರೋಗ್ಯ ಸುರಕ್ಷತೆ ಹೆಚ್ಚಿಸುತ್ತದೆ ಎಂದು ತಿಳಿಸಿದರು.

ಬೈಬ್ಯಾಗ್ ಎಂಬ ಸಾಧನ ಈ ಮೊದಲಿನ ರೀತಿ ಡಯಾಲಿಸಿಸ್ ವೇಳೆ ಅಗತ್ಯವಾದ ರಾಸಾಯನಿಕ ಮಿಶ್ರಣವನ್ನು ವ್ಯಕ್ತಿಗಳು ಮಾಡುವ ಬದಲಾಗಿ ರೋಗಿಗೆ ಅಗತ್ಯವಾಗಿರುವಷ್ಟು ಪ್ರಮಾಣ ವನ್ನು ತಾನೇ ನಿರ್ಧರಿಸಿ, ದೇಹಕ್ಕೆ ಸೇರ್ಪಡೆ ಮಾಡುತ್ತದೆ. ಇದು ಸಂಪೂರ್ಣ ಸ್ವಯಂಚಾಲಿತವಾಗಿದ್ದು, ಅತಿಯಾದ ಅಥವಾ ಕಡಿಮೆ ಪ್ರಮಾಣದ ರಾಸಾಯನಿಕ ದೇಹಕ್ಕೆ ಸೇರುವುದರಿಂದ ರೋಗಿಗೆ ಆಗುವ ಅಪಾಯ ತಡೆಗಟ್ಟುತ್ತದೆ. ರೋಗಿ ಶೀಘ್ರ ಚೇತರಿಸಿಕೊಂಡು ದಿನನಿತ್ಯದ ಕೆಲಸ ಕಾರ್ಯಗಳಲ್ಲಿ ತೊಡಗಲು ನೆರವಾಗುತ್ತದೆ ಎಂದರು.

ಆಸ್ಪತ್ರೆಯ ವೈದ್ಯಕೀಯ ಸೇವೆಗಳ ಮುಖ್ಯಸ್ಥ ಡಾ.ಉಪೇಂದ್ರ ಶೆಣೈ ಮಾತನಾಡಿ, ಉದ್ಯೋಗಿಗಳು ದಿನನಿತ್ಯದ ಕೆಲಸ ಕಾರ್ಯಕಗಳಲ್ಲಿ ತೊಡಗಬೇಕಾದ ಕಾರಣ ಸುಮಾರು ನಾಲ್ಕು ಗಂಟೆ ಹಿಡಿಯುವ ಡಯಾಲಿಸಿಸನ್ನು ತಮಗೆ ಹೊಂದಾಣಿಕೆ ಆಗುವ ಅವಧಿಯಲ್ಲಿ ಮಾಡಿಸಿಕೊಳ್ಳಬಹುದಾಗಿದೆ. ಕೆಲವರು ಬೆಳಗಿನ ಜಾವ ನಾಲ್ಕಕ್ಕೇ ಬಂದರೆ, ಕೆಲವರು ಕೆಲಸ ಕಾರ್ಯ ಮುಗಿದ ನಂತರ ಬರುತ್ತಿದ್ದಾರೆ. ನಿತ್ಯ ಈ ರೀತಿ ಸುಮಾರು 70 ಮಂದಿಗೆ ಮಣಿಪಾಲ್ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಶಸ್ತ್ರಾಸ್ತ್ರ, ಮಾರಕಾಸ್ತ್ರಗಳ ಬಳಕೆ ನಿಷೇಧ

ಮೈಸೂರು, ಮಾ.18– ಲೋಕಸಭೆ ಚುನಾವಣೆ–2024 ರ ಸಂಬಂಧ ಮಾ.16 ರಿಂದ ಜೂ.06 ರವರೆಗೆ ಮೈಸೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯಲ್ಲಿ ಯಾವುದೇ ವ್ಯಕ್ತಿ ಶಸ್ತ್ರಾಸ್ತ್ರ, ಸ್ಫೋಟಕ ವಸ್ತುಗಳು ಹಾಗೂ ಮಾರಕಾಸ್ತ್ರಗಳನ್ನು ಸಂಚರಿಸುವುದನ್ನು ಅಥವಾ ಹಿಡಿದುಕೊಂಡು ಓಡಾಡುವುದನ್ನು ನಿಷೇಧಿಸಿ ನಗರ ಪೊಲೀಸ್ ಆಯುಕ್ತರಾದ ರಮೇಶ್.ಬಿ ಅವರು ಆದೇಶಿಸಿದ್ದಾರೆ. ಆಯುಧ ರಹದಾರಿ ಹೊಂದಿರುವ ಪರವಾನಗಿದಾರರು ಚುನಾವಣೆ ಪ್ರಕ್ರಿಯೆ ಮುಗಿಯುವವರೆಗೂ ಶಸ್ತ್ರಾಸ್ತ್ರಗಳನ್ನು ಸಂಬಂಧಪಟ್ಟ ಪೊಲೀಸ್ ಠಾಣೆಗಳಲ್ಲಿ ಠೇವಣಿ ಇಡಲು ಆದೇಶಿಸಲಾಗಿದೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ರಮೇಶ್.ಬಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಕೆ.ಆರ್.ಕ್ಷೇತ್ರದಲ್ಲಿ ಬಿಜೆಪಿ ಕಾರ್ಯಕರ್ತರ ಸಭೆ

ಮೈಸೂರು, ಮಾ. 18– ಕೆಆರ್. ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮಂಗಳವಾರ ಬೆಳಗ್ಗೆ 10ಕ್ಕೆ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಹೊಯ್ಸಳ ಕರ್ನಾಟಕ ಸಂಘದಲ್ಲಿ ವಾರ್ಡ್ ನಂ.49, 50, 51, ಬೆಳಗ್ಗೆ 11ಕ್ಕೆ ಜೆಎಲ್‌ಬಿ ರಸ್ತೆ ಚಾಮುಂಡಿಪುರಂನ ಆರಾಧ್ಯ ಮಹಾ ಸಭಾದಲ್ಲಿ ವಾರ್ಡ್ ನಂ.54, 55, 56, 60, 61, ಮಧ್ಯಾಹ್ನ 12.30ಕ್ಕೆ ಕುವೆಂಪು ನಗರದ ಸಾಮ್ರಾಟ್ ಕಲ್ಯಾಣ ಮಂಟಪದಲ್ಲಿ ವಾರ್ಡ್ ನಂ.43, 47, 48, 57, ಮಧ್ಯಾಹ್ನ 2.30ಕ್ಕೆ ಇಟ್ಟಿಗೆ ಗೂಡಿನ ಮಾರಿಯಮ್ಮ ಸಮುದಾಯ ಭವನದಲ್ಲಿ ವಾರ್ಡ್ ನಂ. 52, 63ರ ಕಾರ್ಯಕರ್ತರ ಸಭೆ ಕರೆಯಲಾಗಿದೆ.

ಸಭೆಯಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್.ಶ್ರೀವತ್ಸ, ಕೆ.ಆರ್.ಕ್ಷೇತ್ರದ ಬಿಜೆಪಿ ಪ್ರಧಾನ ಕಾರ್ಯದರ್ಶಿ ಸೇರಿದಂತೆ ಇತರರು ಭಾಗವಹಿಸಲಿದ್ದಾರೆ ಎಂದು ಕೆ.ಆರ್.ಕ್ಷೇತ್ರದ ಅಧ್ಯಕ್ಷ ಯು.ಜಿ.ಗೋಪಾಲ್ ರಾಜೇ ಅರಸ್ ತಿಳಿಸಿದ್ದಾರೆ.

ನಾಳೆ ವಿಶ್ವ ಗುಬ್ಬಚ್ಚಿ ದಿನಾಚರಣೆ ಅಂಗವಾಗಿ ಗುಬ್ಬಚ್ಚಿ ಹಬ್ಬ



ಮೈಸೂರು, ಮಾ. 18– ಕೆಎಂಪಿಕೆ ಚಾರಿಟೇಬಲ್ ಟ್ರಸ್ಟ್ ವತಿಯಿಂದ ವಿಶ್ವ ಗುಬ್ಬಚ್ಚಿ ದಿನಾಚರಣೆ ಅಂಗವಾಗಿ ಗುಬ್ಬಚ್ಚಿ ಹಬ್ಬವನ್ನು ಕೃಷ್ಣಮೂರ್ತಿ ಪುರಂನಲ್ಲಿರುವ (ಜಯನಗರ ರೈಲ್ವೆ ಗೇಟ್) ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ (ಗುಬ್ಬಚ್ಚಿ ಶಾಲೆ) ಮಾರ್ಚ್ 20ರಂದು ಮಧ್ಯಾಹ್ನ 12 ಗಂಟೆಗೆ ಆಯೋಜಿಸಲಾಗಿದೆ ಎಂದು ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್ ತಿಳಿಸಿದ್ದಾರೆ.

ಮುಖ್ಯ ಅತಿಥಿಗಳಾಗಿ ಪಕ್ಷಿ ತಜ್ಞರು ಹಾಗೂ ಪರಿಸರವಾದಿ ಸಪ್ತ ಗಿರೀಶ್ ಎಂ ಕೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಅರ್ಥ ಶಾಸ್ತ್ರ ವಿಭಾಗದ ಮುಖ್ಯಸ್ಥರು ಹಾಗೂ ಸಹ ಪ್ರಾಧ್ಯಾಪಕರಾದ ಡಾ. ಆರ್ ಎಚ್ ಪವಿತ್ರ, ಹಿರಿಯ ಸಮಾಜ ಸೇವಕ ಕೆ ರಘುರಾಮ್ ವಾಜಪೇಯಿ, ಪರಿಸರ ಪ್ರೇಮಿ ಶ್ರೀನಿವಾಸ್ ಭಾಷ್ಯಂ, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಸರ್ಕಾರಿ ಶಾಲೆಯ ಮುಖ್ಯೋಪಾಧ್ಯಾಯ ಮೋಹನ್ ಕುಮಾರ್ ಅಜಯ್ ಶಾಸ್ತ್ರಿ, ಹಾಗೂ ಇನ್ನಿತರರು ಭಾಗವಹಿಸಲಿದ್ದಾರೆ.



ಮೈಸೂರು ದತ್ತನಗರದಲ್ಲಿ ಅಪ್ಪು ಅಭಿಮಾನಿಗಳ ಬಳಗದ ವತಿಯಿಂದ ದಿ. ಪುನೀತ್ ರಾಜ್‌ಕುಮಾರ್ ಅವರ 49ನೇ ಹುಟ್ಟುಹಬ್ಬವನ್ನು ಪುನೀತ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಅನ್ನಸಂತರ್ಪಣೆ ಮಾಡುವುದರ ಮೂಲಕ ಅರ್ಥಪೂರ್ಣವಾಗಿ ಆಚರಿಸಿದರು. ಈ ವೇಳೆ ಸಮಾಜ ಸೇವಕರೂ ಆದ ಹಾಗೂ ಉದ್ಯಮಿ ಎಸ್.ಶ್ರೀಕಾಂತ್, ಕೆ.ಆರ್. ಕ್ಷೇತ್ರದ ಕಾಂಗ್ರೆಸ್ ಮುಖಂಡ ಪ್ರದೀಪ್‌ಕುಮಾರ್ ಅವರನ್ನು ಅಪ್ಪು ಗೆಳೆಯರ ಬಳಗದಿಂದ ಅಭಿನಂದಿಸಲಾಯಿತು. ಬಳಗದ ಅಧ್ಯಕ್ಷ ನಾಗರಾಜು, ನಾಗೇಂದ್ರ, ಗುಡ್ಡಪ್ಪ, ದತ್ತ ನಗರದ ಯುವಗೆಳೆಯರ ಬಳಗದ ಸದಸ್ಯರು ಪಾಲ್ಗೊಂಡಿದ್ದರು.




ಮೈಸೂರಿನ ಸ್ನೇಹ ಸಂಗಮ ಕನ್ನಡ ಗೆಳೆಯರ ಬಳಗದಿಂದ ಕರ್ನಾಟಕ ರತ್ನ ಪವರ್ ಸ್ಟಾರ್ ಡಾ.ಪುನೀತ್ ರಾಜ್‌ಕುಮಾರ್ ಅವರ 49ನೇ ಹುಟ್ಟುಹಬ್ಬದ ಪ್ರಯುಕ್ತ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ಈ ವೇಳೆ ಮಾಜಿ ಶಾಸಕ ಎಂಕೆ.ಸೋಮಶೇಖರ್, ಗೋಪಿ, ರಮೇಶ್, ರಾಜು, ಸುನೀಲ್, ಹನುಮಂತ, ಲಾವಣ್ಯ, ಪ್ರಭಾ, ಹೇಮಾಲತಾ, ರಾಣಿ ಮತ್ತಿತರರು ಉಪಸ್ಥಿತರಿದ್ದರು.

ಸಹಕಾರಿ ಸಂಘಗಳ ಚುನಾವಣೆ ಮುಂದೂಡಿದ್ದ ಆದೇಶ ಹಿಂಪಡೆದ ಸರ್ಕಾರ

ಬೆಂಗಳೂರು, ಮಾ. 18– ಸಹಕಾರಿ ಸಂಘಗಳು ಹಾಗೂ ಸಹಕಾರಿ ಬ್ಯಾಂಕ್‌ಗಳ ಚುನಾವಣೆಯನ್ನು ಮುಂದೂಡಿದ್ದ ಆದೇಶವನ್ನು ರಾಜ್ಯ ಸರ್ಕಾರ ಹಿಂಪಡೆದಿದೆ.

ಅವಧಿ ಮುಗಿದ ಹಾಗೂ ಅವಧಿ ಮುಗಿಯಲಿದ್ದ ಸಹಕಾರಿ ಸಂಘಗಳು ಮತ್ತು ಸಹಕಾರಿ ಬ್ಯಾಂಕ್‌ಗಳ ಚುನಾವಣೆಯನ್ನು ಮುಂದಿನ ಆದೇಶದವರೆಗೆ ಮುಂದೂಡಿ ಹಾಗೂ ಅದರ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಅವಧಿಯನ್ನು ಮುಂದುವರೆಸಿ ರಾಜ್ಯ ಸರ್ಕಾರ ಮಾ. 13ರಂದು ಆದೇಶ ಹೊರಡಿಸಿತ್ತು. ಆದರೆ, ಈ ಆದೇಶದ ಪರಿಣಾಮವನ್ನು ಪರಿಶೀಲಿಸಿ ಸದರಿ ಆದೇಶವನ್ನು ಹಿಂಪಡೆದಿರುವುದಾಗಿ ಸಹಕಾರಿ ಇಲಾಖೆಯ ಪದನಿಮಿತ್ತ ಜಂಟಿ ಕಾರ್ಯದರ್ಶಿ ಎ.ಸಿ.ದಿವಾಕರ್ ಆದೇಶ ನೀಡಿದ್ದಾರೆ.



ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಚಾಮರಾಜ ಕ್ಷೇತ್ರದ ದೇವರಾಜ ಬ್ಲಾಕ್ ನೂತನ ಅಧ್ಯಕ್ಷ ಯು.ಎಸ್.ರಮೇಶ್ ಪದಗ್ರಹಣ ಸಂದರ್ಭದಲ್ಲಿ ಅವರನ್ನು ಮುಡಾ ಮಾಜಿ ಸದಸ್ಯ ನವೀನ್‌ಕುಮಾರ್, ಪಾಲಿಕೆ ಮಾಜಿ ಸದಸ್ಯ ಬಾಲರಾಜು, ಮುಖಂಡರಾದ ಮಂಜುನಾಥ, ರವಿಚಂದ್ರ, ಹರೀಶ್‌ಗೌಡ, ನಂಜುಂಡಸ್ವಾಮಿ ಅಭಿನಂದಿಸಿದರು.

ಕೌಶಲ್ಯಾಭಿವೃದ್ಧಿ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು, ಮಾ.18–2023–24ನೇ ಸಾಲಿನ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಪರಿಶಿಷ್ಟ ಪಂಗಡದ ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಎಲೆಕ್ಟ್ರಾನಿಕ್ ಮತ್ತು ಡಿಜಿಟಲ್ ಮಾಧ್ಯಮದಲ್ಲಿ ತರಬೇತಿ ಮತ್ತು ಕೌಶಲ್ಯಾಭಿವೃದ್ಧಿ ತರಬೇತಿಯನ್ನು ನೀಡಲು ಅರ್ಹ ಪರಿಶಿಷ್ಟ ಪಂಗಡದ ವಿದ್ಯಾರ್ಥಿ ಗಳಿಂದ ಆಫ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಜಿಲ್ಲಾ ಕಚೇರಿಯಲ್ಲಿ ಮಾರ್ಚ್–2024ರ ಮಾಹೆಯ ಅಂತ್ಯದೊಳಗೆ ಪಡೆಯಬಹುದಾಗಿದೆ. ಮಾಹಿತಿಗಾಗಿ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರ ಕಚೇರಿಯ ದೂ.ಸಂ: 0821–2430022 ಅನ್ನು ಸಂಪರ್ಕಿಸಬಹುದು.

ಮಾನವನ ಸರ್ವಾಂಗೀಣ ಅಭಿವೃದ್ಧಿಗೆ ಶಿಕ್ಷಣ, ಸಾಹಿತ್ಯ ಅವಶ್ಯ



ಮೈಸೂರು,ಮಾ.18–ಮೈಸೂರಿನ ಜಯ ಲಕ್ಷ್ಮಿಪುರಂನಲ್ಲಿರುವ ಎಸ್.ಬಿ. ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ವಾರದ ಸಮಾವೇಶ ಆಯೋಜಿಸಲಾಗಿತ್ತು.

ಸಮಾವೇಶದಲ್ಲಿ ಮುಖ್ಯ ಅತಿಥಿ ಗಳಾಗಿದ್ದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪ್ರೊ. ಸಿ.ನಾಗಣ್ಣ ಮಾತನಾಡಿ, ಮಹಾಜನ ವಿದ್ಯಾಸಂಸ್ಥೆ ಒಂದು ಐತಿಹಾಸಿಕ ಮಹಾ ವಿದ್ಯಾಮಂದಿರ. ಇದರ ನಿಕಟಪೂರ್ವ ಅಧ್ಯಕ್ಷ ರಾಗಿದ್ದ ದಿ. ಆರ್. ವಾಸುದೇವಮೂರ್ತಿ ಅವರು ಕೈಗಾರಿಕೋದ್ಯಮಿಗಳು ಮಾತ್ರವಲ್ಲದೆ, ಶ್ರೇಷ್ಠ ಶಿಕ್ಷಣ ತಜ್ಞರೂ ಆಗಿದ್ದರು. ಅವರು ಮಹಾಜನ ಶಿಕ್ಷಣ ಸಂಸ್ಥೆಯನ್ನು ಸಮರ್ಥವಾಗಿ ಕಟ್ಟಿ ಬೆಳೆಸಿದ್ದಾರೆ ಎಂದರು.

ಮಾನವನ ಅಭಿವೃದ್ಧಿಗೆ ಶಿಕ್ಷಣ ಮತ್ತು ಸಾಹಿತ್ಯ ಅತ್ಯಗತ್ಯ. ಈ ನಿಟ್ಟಿನಲ್ಲಿ ಅನೇಕ ಮಹನೀಯರು ಸಮಾಜಕ್ಕೆ ಬೆಳಕಾಗಿದ್ದಾರೆ ಎಂದರು. ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯ ಕುಮಾರಿ, ಪ್ರೊ.ಸಿ.ನಾಗಣ್ಣ ಅವರನ್ನು ಅಭಿನಂದಿಸಿದರು. ಇತಿಹಾಸ ವಿಭಾಗದ ಮುಖ್ಯಸ್ಥ, ಶೈಕ್ಷಣಿಕ ಡೀನ್ ಡಾ.ಹೆಚ್. ಶ್ರೀಧರ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಎಚ್.ಆರ್.ತಿಮ್ಮೇಗೌಡ, ವಾಣಿಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಎನ್. ಸುನಿಲ್ ಮತ್ತಿತರರು ಉಪಸ್ಥಿತರಿದ್ದರು.

ಕೆಆರ್‌ಎಸ್ ರಸ್ತೆ ರೈಲ್ವೆ ಗೇಟ್ ಬಳಿ ಹಳಿ ನಿರ್ವಹಣೆ ಕಾಮಗಾರಿ ಪೂರ್ಣ





ಬಂದ್ ಆಗಿದ್ದ ರಸ್ತೆ ಸಂಚಾರ ಮಧ್ಯಾಹ್ನದ ನಂತರ ಮುಕ್ತ

ಮೈಸೂರು,ಮಾ.18(ಆರ್‌ಕೆ)–ಮೈಸೂರು–ಕೆಆರ್‌ಎಸ್ ರಸ್ತೆಯ ರೈಲ್ವೆ ಲೆವೆಲ್ ಕ್ರಾಸಿಂಗ್ ಬಳಿ ಹಳಿ ನಿರ್ವಹಣಾ ಕಾಮಗಾರಿ ಪೂರ್ಣಗೊಂಡಿದ್ದು, ಇಂದು (ಸೋಮವಾರ) ಮಧ್ಯಾಹ್ನ 3 ಗಂಟೆ ನಂತರ ರಸ್ತೆಯನ್ನು ವಾಹನ ಸಂಚಾರಕ್ಕೆ ಮುಕ್ತಗೊಳಿಸಲಾಯಿತು.

ಕಾಮಗಾರಿಗಾಗಿ ರಾಯಲ್ ಇನ್ ಜಂಕ್ಷನ್ ಬಳಿ ಭಾನುವಾರ ಬೆಳಗ್ಗೆಯಿಂದ ಬ್ಯಾರಿಕೇಡ್ ಅಳವಡಿಸಿ ಕೆಆರ್‌ಎಸ್ ಕಡೆಗೆ ವಾಹನ ಸಂಚಾರ ಬಂದ್ ಮಾಡಲಾಗಿತ್ತು. ಮೈಸೂರಿಂದ ಪಂಪ್‌ಹೌಸ್ ಕಡೆಗೆ ಹೋಗುವ ವಾಹನಗಳು ರಾಯಲ್ ಇನ್ ಜಂಕ್ಷನ್‌ನಲ್ಲಿ ಬಲಕ್ಕೆ ತಿರುಗಿ ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್ ಬಳಿಯ ಸರ್ಕಲ್‌ನಲ್ಲಿ ಎಡಕ್ಕೆ ತಿರುಗಿ, ಮುಂದೆ ವಿಕ್ರಾಂತ್ ಫ್ಯಾಕ್ಟರಿ ಮುಖ್ಯದ್ವಾರದ ಬಳಿ ಕೆಆರ್‌ಎಸ್ ರಸ್ತೆ ತಲುಪಲು ಬದಲಿ ಮಾರ್ಗ ವ್ಯವಸ್ಥೆ ಮಾಡಲಾಗಿತ್ತು. ಭಾರತ್ ಕ್ಯಾನ್ಸರ್ ಆಸ್ಪತ್ರೆ ಕಡೆಯಿಂದ ಬರುವ ವಾಹನಗಳು ಹೆಬ್ಬಾಳಿನ ವಿಕ್ರಾಂತ್ ಟೈರ್ ಪ್ಲಾಂಟ್ ಬಳಿ ರಿಂಗ್ ರಸ್ತೆಯಲ್ಲಿ ಎಡಕ್ಕೆ ತಿರುಗಿ ಮುಂದೆ ಸುನಂದ ಅಗರ ಬತ್ತಿ ಫ್ಯಾಕ್ಟರಿ ಬಳಿ ಕೆಆರ್‌ಎಸ್ ರಸ್ತೆ ತಲುಪಿ ಪಂಪ್‌ಹೌಸ್ ಕಡೆಗೆ ಹೋಗಬೇಕಾಗಿತ್ತು. ಅದೇ ರೀತಿ ಪಂಪ್ ಹೌಸ್ ಕಡೆಯಿಂದ ಮೈಸೂರಿಗೆ ಬರುವ ವಾಹನಗಳು ಎಡಕ್ಕೆ ತಿರುಗಿ ಆರ್‌ಬಿಐ ಮೂಲಕ ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್ ಬಳಿ ರಿಂಗ್ ರಸ್ತೆ ತಲುಪಿ ಮುಂದೆ ಸಾಗಲು ಬದಲಿ ಮಾರ್ಗ ವ್ಯವಸ್ಥೆ ಮಾಡಲಾಗಿತ್ತು.

ರಸ್ತೆ ಸಂಚಾರ ಬಂದ್ ಮಾಡಿದ್ದರಿಂದ ರೈಲ್ವೆ ಇಲಾಖೆಯವರು ಹಗಲು– ರಾತ್ರಿ ಕೆಲಸ ಮಾಡಿ, ಇಂದು ಮಧ್ಯಾಹ್ನ 2.30 ಗಂಟೆಗೆ ರೈಲ್ವೆ ಲೆವೆಲ್ ಕ್ರಾಸಿಂಗ್ ಬಳಿ ನಿರ್ವಹಣಾ ಕಾಮಗಾರಿ ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ ಮಧ್ಯಾಹ್ನ 3 ಗಂಟೆ ನಂತರ ಕೆಆರ್‌ಎಸ್ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಲಾಯಿತು.

ಶ್ರೀ ಸದ್ಗುರು ಸೇವಾ ಟ್ರಸ್ಟ್ ಉದ್ಘಾಟನೆ, ಉಚಿತ ಆರೋಗ್ಯ ತಪಾಸಣೆ ಶಿಬಿರ



ಮೈಸೂರು, ಮಾ.18– ನಗರದ ಬೃಂದಾವನ ಬಡಾವಣೆಯ ಶ್ರೀ ಸದ್ಗುರು ಸೇವಾ ಟ್ರಸ್ಟ್‌ನ ಉದ್ಘಾಟನೆ ಮತ್ತು ಉಚಿತ ಆರೋಗ್ಯ ತಪಾಸಣೆ ಶಿಬಿರವು ಪಡುವಾರಹಳ್ಳಿಯ ಶ್ರೀ ವರಸಿದ್ಧಿ ಮಹದೇಶ್ವರಸ್ವಾಮಿ ದೇವಸ್ಥಾನದಲ್ಲಿ ಸೋಮವಾರ ಯಶಸ್ವಿಯಾಗಿ ನೆರವೇರಿತು.

ವೇದಬ್ರಹ್ಮ ಶ್ರೀ ಡಾ.ವಿ. ಭಾನುಪ್ರಕಾಶ್ ಶರ್ಮಾ, ಸುಯೋಗ್ ಆಸ್ಪತ್ರೆ ಮಾಲೀಕ ಡಾ.ಎಸ್.ಪಿ. ಯೋಗಣ್ಣ, ಶ್ರೀ ಸದ್ಗುರು ಸೇವಾ ಟ್ರಸ್ಟ್ ಅಧ್ಯಕ್ಷ ರಾಘವೇಂದ್ರ ಶಾಸ್ತ್ರಿ, ಡಾ. ಸೀಮಾ ಯೋಗಣ್ಣ ಭಾಗವಹಿಸಿ, ಟ್ರಸ್ಟ್ ಉದ್ಘಾಟಿಸಿ, ಆರೋಗ್ಯ ತಪಾಸಣೆಗೆ ಚಾಲನೆ ನೀಡಿದರು. ಇದೇ ವೇಳೆ ನೂರಾರು ಮಂದಿ ಉಚಿತವಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಂಡರು. ಟ್ರಸ್ಟ್ ವತಿಯಿಂದ ಇನ್ನೂ ಹೆಚ್ಚಿನ ಸಮಾಜ ಮುಖಿ ಸೇವೆ ಮಾಡಲು ಎಲ್ಲ ಸದಸ್ಯರು ತೀರ್ಮಾನ ಮಾಡಿರುವುದಾಗಿ ಟ್ರಸ್ಟ್ ಅಧ್ಯಕ್ಷ ರಾಘವೇಂದ್ರ ಶಾಸ್ತ್ರಿ ತಿಳಿಸಿದರು. ಟ್ರಸ್ಟ್‌ನ ಎಲ್ಲ ಸದಸ್ಯರು ಭಾಗವಹಿಸಿದ್ದರು.

ಐಕ್ಯಂ ತಂಡದಿಂದ ಚಾಮುಂಡಿ ಬೆಟ್ಟದಲ್ಲಿ ಸ್ವಚ್ಛತಾ ಕಾರ್ಯ



ಮೈಸೂರಿನ ಐಕ್ಯಂ ತಂಡದಿಂದ ಚಾಮುಂಡಿ ಬೆಟ್ಟದಲ್ಲಿ ಭಾನುವಾರದಂದು ಸ್ವಚ್ಛತಾ ಅಭಿಯಾನವನ್ನು ಹಮ್ಮಿಕೊಳ್ಳಲಾಗಿತ್ತು. ಯುವರಾಜ ಕಾಲೇಜಿನ ಎನ್‌ಸಿಸಿ (ನೇವಿ) ವಿದ್ಯಾರ್ಥಿಗಳು ಭಾಗಿಯಾಗಿದ್ದರು. ಚಾಮುಂಡಿ ಬೆಟ್ಟದಲ್ಲಿ ನಡೆದ ಈ ಸ್ವಚ್ಛತಾ ಅಭಿಯಾನದಲ್ಲಿ ಸಂಗ್ರಹಿಸಿ ಪ್ಲಾಸ್ಟಿಕ್ ತ್ಯಾಜ್ಯವನ್ನು ಜಾಗೃತ್ ಟೆಕ್ ಪ್ರೈವೇಟ್ ಲಿಮಿಟೆಡ್‌ಗೆ ನೀಡಲಾಯಿತು. ವಿದ್ಯಾರ್ಥಿಗಳು ಚಾಮುಂಡಿಬೆಟ್ಟದ ಮೆಟ್ಟಿಲುಗಳ ಬಳಿ ಬಿದ್ದ ಪ್ಲಾಸ್ಟಿಕ್ ತ್ಯಾಜ್ಯ ಬೇರ್ಪಡಿಸಿ ಅದನ್ನು ಮರುಬಳಕೆ ಮಾಡುವ ಕಾರ್ಯಕ್ಕೆ ಸಾಕ್ಷಿಯಾಗಿದ್ದಾರೆ.

ಮರಣದ ನಂತರವೂ ಜೀವಿಸಿರುವ ಪುನೀತ್

ಡಾ.ರಾಜಕುಮಾರ್ ಸಂಘದ ಸಂಸ್ಥಾಪಕ ಅಧ್ಯಕ್ಷ ರಾಮೇಗೌಡ ಬಣ್ಣನೆ



ಮೈಸೂರು, ಮಾ. 18– ಭುವನೇಶ್ವರಿ ಸೇವಾ ಟ್ರಸ್ಟ್ ಹಾಗೂ ಪುನೀತ್ ರಾಜ ಕುಮಾರ್ ಅಭಿಮಾನಿ ಬಳಗದ ವತಿಯಿಂದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿರುವ ಡಾ.ರಾಜಕುಮಾರ್ ಉದ್ಯಾನವನದಲ್ಲಿ ವಿವಿಧ ಜಾತಿಯ ಸಸಿಗಳನ್ನು ನೆಡುವ ಮೂಲಕ ಕರುನಾಡು ರತ್ನ ಡಾಕ್ಟರ್ ಪುನೀತ್ ರಾಜ್‌ಕುಮಾರ್ ರವರ 49ನೇ ಜನ್ಮದಿನಾಚರಣೆ ಆಚರಿಸಲಾಯಿತು.

ಈ ವೇಳೆ ಡಾ.ರಾಜಕುಮಾರ್ ಸಂಘದ ಸಂಸ್ಥಾಪಕ ಅಧ್ಯಕ್ಷ ರಾಮೇಗೌಡ ಮಾತನಾಡಿ, ಜನನವಾದ ಮೇಲೆ ಮರಣ ನಿಶ್ಚಿತ. ಮರಣಿಸಿದ ನಂತರವೂ ಜನರ ಮನಸ್ಸಿನಲ್ಲಿ ಜೀವಂತವಾಗಿರುವಂತೆ ಬದುಕಬೇಕು. ಅಂಥ ಬದುಕು ಪುನೀತ್ ರಾಜ್‌ಕುಮಾರ್ ಅವರದ್ದಾಗಿತ್ತು ಎಂದು ಅಭಿಪ್ರಾಯಪಟ್ಟರು.

ಶ್ರೀಮಂತಿಕೆ, ಜೀವಿತಾವಧಿ ಮುಖ್ಯವಲ್ಲ. ಹೇಗೆ ಬದುಕಿದ್ದರು ಎಂಬುದೇ ಮುಖ್ಯ. ಸಂತ ಕಬೀರರು ಹೇಳಿದಂತೆ ನಾವು ಮರಣಿಸಿದಾಗ ಜನರಿಗೆ ದುಃಖವಾದರೆ ಅದು ಸಾರ್ಥಕ ಬದುಕಾಗುತ್ತದೆ. ಬದುಕಿನ ದಿನಗಳಲ್ಲಿ ಪುನೀತ್ ಸಾವಿರಾರು ಜನರಿಗೆ ಆಸರೆಯಾಗಿದ್ದರು. ಅನೇಕ ವೃದ್ಧಾಶ್ರಮ, ಅನಾಥಾಶ್ರಮಗಳಿಗೆ ಧನ ಸಹಾಯ ಮಾಡಿದ್ದರು. ಪ್ರಚಾರ ಬಯಸದೇ ಕರ್ಣನ ರೀತಿಯಲ್ಲಿ ಕೊಡುಗೈ ದಾನಿಯಾಗಿದ್ದರು ಎಂದರು.

ಸಮಾಜ ಸೇವಕರಾದ ವಿದ್ಯಾ, ಸೇತುರಾಮ್, ಚಂದ್ರು, ಗಂಗಪ್ಪ, ಬೇಗೂರು ಮೂರ್ತಿ, ವಿಶ್ವಮಾನವ ಡಾ.ರಾಜ ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ರಾಘವೇಂದ್ರ ರಾವ್, ಸೌಮ್ಯರಾವ್, ಕಾರ್ಯದರ್ಶಿ ರಮೇಶ್, ಶ್ರೀ ಭುವನೇಶ್ವರಿ ಸೇವಾ ಟ್ರಸ್ಟ್ ಅಧ್ಯಕ್ಷರಾದ ನಾಗಶ್ರೀ ಸುಚೇಂದ್ರ, ಗಂಧದಗುಡಿ ಅಪ್ಪು ಅಭಿಮಾನಿಗಳ ಬಳಗ ಅಧ್ಯಕ್ಷ ರವಿ, ಆಟೋ ಶಿವ, ಕೃಷ್ಣಣ್ಣ, ರಾಜೇಂದ್ರ, ಜಯರಾಮ್, ಚಕ್ರಪಾಣಿ, ಅರಿವು ಸಂಸ್ಥೆ ಅಧ್ಯಕ್ಷ ಶ್ರೀಕಾಂತ್ ಕಶ್ಯಪ್, ಸುಚೇಂದ್ರ, ಹಾಗೂ ಇನ್ನಿತರರು ಭಾಗವಹಿಸಿದ್ದರು.

ಮೈಸೂರು ರೈಲು ನಿಲ್ದಾಣದಲ್ಲಿ ಹಾಪ್‌ಕಾಮ್ಸ್ ಮಳಿಗೆ



ಮೈಸೂರಿನ ರೈಲು ನಿಲ್ದಾಣದಲ್ಲಿ ಹೊಸ ಹಾಪ್‌ಕಾಮ್ಸ್ ಮಳಿಗೆಯನ್ನು ಕರ್ನಾಟಕ ರಾಜ್ಯ ಸಹಕಾರ ತೋಟಗಾರಿಕಾ ಮಾರುಕಟ್ಟೆ ಒಕ್ಕೂಟದ ಅಧ್ಯಕ್ಷ ಡಾ.ಬಿ.ಡಿ.ಭೂಕನಾಥ್ ಮತ್ತು ಜಿಲ್ಲಾ ಹಾಪ್‌ಕಾಮ್ಸ್ ಅಧ್ಯಕ್ಷ ಮಿರ್ಲೆ ಅಣ್ಣೇಗೌಡ ಪ್ಲಾಟ್‌ಫಾರಂ–1ರಲ್ಲಿ ಇತ್ತೀಚೆಗೆ ಉದ್ಘಾಟಿಸಿದರು. ಹಾಪ್‌ಕಾಮ್ಸ್ ಉಪಾಧ್ಯಕ್ಷ ಆರ್.ಸರ್ವೇಶ್, ನಿರ್ದೇಶಕರಾದ ಸೂರ್ಯಕುಮಾರ್, ಬಿ.ವಿ.ಬೋರೇಗೌಡ, ಹೊಸಹುಂಡಿ ರಘು, ಬಿ.ಎನ್.ಪ್ರಭುಸ್ವಾಮಿ, ಟಿ.ರಾಮೇಗೌಡ, ವೈಜಿ.ಮಹೇಂದ್ರ, ಹೆಚ್.ಎಸ್.ಚಂದ್ರೇಗೌಡ, ಡಿ.ಪದ್ಮನಾಭ, ಜೆ.ಮಹದೇವ, ಕೆ.ಸುಜಾತ, ಎಸ್.ಜೆ.ನಳಿನಿ ಸೇರಿದಂತೆ ಇನ್ನಿತರರು ಈ ವೇಳೆ ಉಪಸ್ಥಿತರಿದ್ದರು.



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ನೂತನ ಕುಲಸಚಿವರಾಗಿ ಆಡಳಿತ ವಿಭಾಗಕ್ಕೆ ನೇಮಕವಾಗಿರುವ ಪ್ರೊ.ಕೆ.ಬಿ.ಪ್ರವೀಣ ಅವರನ್ನು ಜನಪರ ಸಾಹಿತ್ಯ ಪರಿಷತ್ತಿ ರಾಜ್ಯಾಧ್ಯಕ್ಷ ಡಾ.ಎಂ.ಮಹೇಶ ಚಿಕ್ಕಲ್ಲೂರು, ವಿನೋದ್ ದೊಡ್ಡಕೊಪ್ಪಲು, ಡಾ.ಪಿ.ಮಹದೇವಸ್ವಾಮಿ, ಡಾ.ಎಸ್.ದಿಲೀಪ್, ಡಾ.ಮಾದಪ್ಪ ಅಭಿನಂದಿಸಿದರು.



ಮೈಸೂರಿನ ಶ್ರೀ ಚಾಮುಂಡೇಶ್ವರಿ ಯುವಕರ ಬಳಗದ ವತಿಯಿಂದ ಚಾಮುಂಡಿ ಬೆಟ್ಟದ ಪಾದದಲ್ಲಿ ಪವರ್ ಸ್ಟಾರ್ ಪುನೀತ್ ರಾಜಕುಮಾರ್‌ರವರ ಹುಟ್ಟುಹಬ್ಬವನ್ನು ಸಿಹಿ ವಿತರಿಸುವ ಮೂಲಕ ಆಚರಿಸಲಾಯಿತು. ಈ ವೇಳೆ ಜೆಡಿಎಸ್ ನಗರ ಉಪಾಧ್ಯಕ್ಷ ಯದುನಂದನ್, ಶ್ರೀ ಚಾಮುಂಡೇಶ್ವರಿ ಯುವಕರ ಬಳಗದ ಸದಸ್ಯರಾದ ಭಾಸ್ಕರ್, ಚಂದ್ರು, ರವಿ, ಹೇಮಂತ್, ಅಜಯ್, ಶೇಖರ್, ಸಾಗರ್, ಮಹದೇವಸ್ವಾಮಿ ಹಾಗೂ ಇನ್ನಿತರ ಅಭಿಮಾನಿಗಳು ಹಾಜರಿದ್ದರು.

ಸ್ತ್ರೀ ಸ್ವಾತಂತ್ರ್ಯ ಕೇವಲ ಮಾತಿಗೆ ಮಾತ್ರ ಸೀಮಿತವಾಗಿದೆ

ಲೋಕಸೇವಾ ಆಯೋಗದ ಸದಸ್ಯೆ ಪ್ರೊ. ಆರ್.ಕಾವಲಮ್ಮ ವಿಷಾದ

ಮೈಸೂರು,ಮಾ.18(ಎಂಟಿವೈ)– ಪುರುಷರು ಹೇಳುವ ಸ್ತ್ರೀ ಸ್ವಾತಂತ್ರ್ಯದ ಮಾತುಗಳು ಕೇವಲ ನೆರೆ ಹೊರೆಯ ಹೆಣ್ಣು ಮಕ್ಕಳಿಗೆ ಮಾತ್ರ ಅನ್ವಯಿಸುವಂತೆ ಕಾಣುತ್ತಿದ್ದು, ತಮ್ಮ ಮನೆಯ ಹೆಣ್ಣು ಮಕ್ಕಳನ್ನು ಈಗಲೂ ನಿಯಂತ್ರಿಸುತ್ತಲೇ ಇರುವುದು ಕಂಡು ಬರುತ್ತಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯೆ ಪ್ರೊ.ಆರ್.ಕಾವಲಮ್ಮ ವಿಷಾದಿಸಿದ್ದಾರೆ.

ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದಲ್ಲಿ ಸೋಮವಾರ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಮಹಿಳಾ ಸ್ವಾತಂತ್ರ್ಯದ ಬಗ್ಗೆ ಮಾತನಾಡುವವರ ಸಂಖ್ಯೆ ಹೆಚ್ಚಾಗಿದೆ. ಆದರೆ, ಇದು ಕೇವಲ ಮಾತಿಗೆ ಮಾತ್ರ ಸೀಮಿತಗೊಂಡಿರುವುದನ್ನು ಕಾಣುವಂತಾಗಿದೆ. ನೆರೆ ಹೊರೆಯ ಹೆಣ್ಣು ಮಕ್ಕಳಿಗೆ ಮಾತ್ರ ಸ್ತ್ರೀ ಸ್ವಾತಂತ್ರ್ಯದ ಮಾತು ಅನ್ವಯಿಸುತ್ತಿದೆ. ತಮ್ಮ ಮನೆಯ ಹೆಣ್ಣು ಮಕ್ಕಳನ್ನು ನಿಯಂತ್ರಿಸುತ್ತಲೇ ಇರುತ್ತಾರೆ. ಹೆಣ್ಣು ಅವರವರ ಅನುಕೂಲಕ್ಕೆ ಬಳಸಿಕೊಳ್ಳುವ ವಿಷಯ ವಸ್ತುವಾಗಿದ್ದಾಳೆ. ಇಂತಹ ಸಂದರ್ಭದಲ್ಲಿ ಮಹಿಳೆಯರು ತಮ್ಮ ಸ್ವಾತಂತ್ರ್ಯ ಮತ್ತು ಆಯ್ಕೆಯ ಬಗ್ಗೆ ಸ್ಪಷ್ಟತೆಯನ್ನು ಕಂಡುಕೊಳ್ಳಬೇಕು ಎಂದು ಸಲಹೆ ನೀಡಿದರು.



ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವ ವಿದ್ಯಾನಿಲಯದಲ್ಲಿ ಸೋಮವಾರ ಆಯೋಜಿಸಿದ್ದ ಅಂತಾ ರಾಷ್ಟ್ರೀಯ ಮಹಿಳಾ ದಿನಾ ಚರಣೆಯನ್ನು ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯೆ ಪ್ರೊ.ಆರ್. ಕಾವಲಮ್ಮ ಉದ್ಘಾಟಿಸಿದರು.

ಹೆಣ್ಣನ್ನು ಪೂಜಿಸಿದರೆ ಅಲ್ಲಿ ದೇವರು ನೆಲೆಸುತ್ತಾನೆ ಎಂದು ಹೇಳುತ್ತಲೇ ಮಹಿಳೆಯರನ್ನು ವ್ಯವಸ್ಥಿತವಾಗಿ ತುಳಿಯುವ ಸಂಚನ್ನು ಸನಾತನಿಗಳು ನಡೆಸಿಕೊಂಡು ಬರುತ್ತಿದ್ದಾರೆ. ಪುರುಷ ಪ್ರಧಾನ ವ್ಯವಸ್ಥೆ ಮತ್ತು ಸನಾತನ ಧರ್ಮವು ಮೂರು ವರ್ಗದ ಮಹಿಳೆಯರನ್ನು ಸೃಷ್ಟಿಸುತ್ತಿದೆ. ದೇವತೆಯ ರೂಪಕೊಟ್ಟು ಭಾವಚಿತ್ರದ ಮೂಲಕ ಗೋಡೆಗೆ ಮೊಳೆ ಹೊಡೆದು ನೇತು ಹಾಕಿದ್ದಾರೆ. ಬಹುತೇಕ ಮಹಿಳೆಯರನ್ನು ಪತಿ ಭಕ್ತೆಯಾಗಿ ಪರಿವರ್ತಿಸಿದರೇ, ಪ್ರಶ್ನೆ ಮಾಡುವ ಮಹಿಳೆಯರನ್ನು ರಾಕ್ಷಸಿ ಪಟ್ಟ ಕಟ್ಟಿ ಅಪಮಾನಿಸಲಾಗಿದೆ ಎಂದು ಕಿಡಿಕಾರಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವ ವಿದ್ಯಾನಿಲಯದ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟ ಕೋಟೆ, ಕರ್ನಾಟಕ ಸಂಗೀತ, ನೃತ್ಯ ಅಕಾಡೆಮಿ ಅಧ್ಯಕ್ಷೆ ಡಾ.ಕೃಪಾ ಫಡ್ಕೆ, ಅಧಿಕ ಪ್ರಭಾರ ಹಣಕಾಸು ಅಧಿಕಾರಿ ರೇಖಾ ಉಪಸ್ಥಿತರಿದ್ದರು.

ಕೊಡಗಿನ ಹಲವೆಡೆ ಮೊದಲ ವರ್ಷಧಾರೆ

• ನಾಪೋಕ್ಲು ವ್ಯಾಪ್ತಿ ಬಿರುಸಿನ ಮಳೆ • ರೈತರ ಮೊಗದಲ್ಲಿ ಮಂದಹಾಸ

ಮಡಿಕೇರಿ, ಮಾ.18–ಕೊಡಗು ಜಿಲ್ಲೆಯ ಹಲವೆಡೆ ಸೋಮವಾರ ಸಂಜೆ ವರ್ಷದ ಮೊದಲ ಮಳೆ ಬಿರುಸಿನಿಂದ ಸುರಿದಿದ್ದು, ಇದರಿಂದ ಬೆಳೆಗಾರರು ಸಂತಸಗೊಂಡಿದ್ದಾರೆ.

ರಾಜ್ಯದಲ್ಲೇ ಹೆಚ್ಚು ಮಳೆ ಸುರಿಯುವ ಕೊಡಗು ಜಿಲ್ಲೆಯಲ್ಲಿ ಮಳೆ ಇಲ್ಲದೆ ಕುಡಿಯುವ ನೀರಿಗೂ ಪರದಾಡುವಂತೆ ಪರಿಸ್ಥಿತಿ ನಿರ್ಮಾಣವಾಗಿತ್ತು. ಮಳೆಯ ಸಿಂಚನದಿಂದ ತಂಪಾದ ವಾತಾವರಣದೊಂದಿಗೆ ರೈತರ ಮೊಗದಲ್ಲಿ ಮಂದಹಾಸ ಮೂಡಿದರೆ, ಪ್ರಾಣಿ ಪಕ್ಷಿಗಳು ಧಣಿವಾರಿಸಿಕೊಳ್ಳಲು ಅನುಕೂಲವಾಗಿದೆ.

ನಾಪೋಕ್ಲು: ಸಮೀಪದ ಕುಂಜಿಲಗೇರಿ, ಬೊಳ್ಳುಮಾಡು, ಚೆಯ್ಯಂಡಾಣೆ, ಕಡಂಗ, ಕರಡ, ಹರಪಟ್ಟು ನರಿಯಂದಡ, ಗ್ರಾಮಗಳಲ್ಲಿ ಸೋಮವಾರ ಸಂಜೆ ಬಿರುಸಿನ ಮಳೆ ಸುರಿಯಿತು.


ಕರಡ ವ್ಯಾಪ್ತಿಯಲ್ಲಿ ಸುರಿದ ಮಳೆ ನೀರು ರಸ್ತೆಯ ತುಂಬಾ ಹರಿಯಿತು.

ವರ್ಷದ ಮೊದಲ ಮಳೆಯಿಂದ ಬೆಳೆಗಾರರು ಸಂತಸಗೊಂಡರು. ಅರ್ಧ ಗಂಟೆ ಕಾಲ ಬಿರುಸಿನ ಮಳೆ ಸುರಿಯಿತು. ಮಳೆಯಿಂದಾಗಿ ತೋಟಗಳಿಗೆ ತಂಪೆರದಂತಾಯಿತು. ಜೊತೆಗೆ ಬಿಸಿಲಿನಿಂದ ಬಸವಳಿದಿದ್ದ ಜನರು ನಿಟ್ಟುಸಿರಿಟ್ಟರು.

ನರಿಯಂದಡ, ಚೆಯ್ಯಂಡಾಣೆ, ಕಡಂಗ, ಹರಪಟ್ಟು ಗ್ರಾಮ ವ್ಯಾಪ್ತಿಯಲ್ಲೂ ಉತ್ತಮ ಮಳೆಯಾಗಿದೆ. ರಸ್ತೆಯ ತುಂಬೆಲ್ಲಾ ಮಳೆಯ ನೀರು ಹರಿಯಿತು. ಅರ್ಧ ಇಂಚಿಗಿಂತಲೂ ಅಧಿಕ ಪ್ರಮಾಣದಲ್ಲಿ ಮಳೆಯಾಗಿದೆ ಎಂದು ಗ್ರಾಮಸ್ಥರು ತಿಳಿಸಿದರು.

ಸಿದ್ದಾಪುರ: ಮಳೆ ಇಲ್ಲದೆ ಪ್ರಾಣಿಗಳು ಹಾಗೂ ಕೃಷಿ ಭೂಮಿಗೆ ನೀರಿಲ್ಲದಂತಾಗಿದ್ದು, ಸೋಮವಾರ ಸುರಿದ ಮಳೆಯಿಂದ ತಂಪಾದ ವಾತಾವರಣ ವಾಯಿತು. ಕಾವೇರಿ, ಲಕ್ಷ್ಮಣತೀರ್ಥ ನದಿಗಳಲ್ಲೂ ನೀರಿಲ್ಲದೆ ಬರಡಾಗಿತ್ತು. ಅರಣ್ಯದಲ್ಲಿ ಪ್ರಾಣಿ–ಪಕ್ಷಿಗಳಿಗೆ ನೀರಿಲ್ಲದೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿತ್ತು. ಇದೇ ರೀತಿ ಹಲವು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾದ ಹಿನ್ನೆಲೆಯಲ್ಲಿ ಟ್ಯಾಂಕರ್ ಮೂಲಕ ನೀರಿನ ವ್ಯವಸ್ಥೆ ಮಾಡಲಾಗಿತ್ತು. ವಾಡಿಕೆಯಂತೆ ಮಳೆ ಬಾರದ ಹಿನ್ನೆಲೆಯಲ್ಲಿ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದ ಜಿಲ್ಲೆಯ ಹಲವೆಡೆ ಸೋಮವಾರ ಬಿದ್ದ ವರ್ಷದ ಮೊದಲ ಮಳೆಯಿಂದ ಖುಷಿಯಾಗಿದೆ.

ಕೂಜಿಮಲೆ ಅರಣ್ಯ ವ್ಯಾಪ್ತಿ ಶಂಕಿತ ನಕ್ಸಲರ ಸಂಚಾರ

ಮಡಿಕೇರಿ, ಮಾ.18–ಕೊಡಗು ಹಾಗೂ ದಕ್ಷಿಣ ಕನ್ನಡ ಅರಣ್ಯ ಗಡಿ ಪ್ರದೇಶದಲ್ಲಿರುವ ಕೂಜಿಮಲೆ ಅರಣ್ಯ ವ್ಯಾಪ್ತಿಯಲ್ಲಿ ಶಂಕಿತ ನಕ್ಸಲರು ಸಂಚರಿಸಿರುವುದು ತಡವಾಗಿ ವರದಿಯಾಗಿದೆ.

ಶನಿವಾರ ಸಂಜೆ ಕೂಜಿಮಲೆ ಕಡಮಕಲ್ಲು ಅರಣ್ಯ ವ್ಯಾಪ್ತಿಯಲ್ಲಿ ಇಬ್ಬರು ಪುರುಷರು ಮತ್ತು ಇಬ್ಬರು ಮಹಿಳೆಯರು ಸಮವಸ್ತ್ರದಲ್ಲಿ ಕಡಮಕಲ್ಲು ಅಂಗಡಿಯೊಂದಕ್ಕೆ ಬಂದು ನಾವು ಅರಣ್ಯ ಇಲಾಖೆ ಸಿಬ್ಬಂದಿ ಎಂದು ಪರಿಚಯಿಸಿಕೊಂಡಿದ್ದಾರೆ. ಬಳಿಕ ಅಂಗಡಿಯಿಂದ ದಿನಸಿ ವಸ್ತುಗಳನ್ನು ಖರೀದಿಸಿ, ಹಣವನ್ನು ಬೇರೆ ಅರಣ್ಯ ಸಿಬ್ಬಂದಿಗಳು ನೀಡುತ್ತಾರೆ ಎಂದು ಹೇಳಿ ಕೆಲಹೊತ್ತು ಅಲ್ಲೇ ಸುತ್ತಾಡಿ ಬಳಿಕ ಅಲ್ಲಿನ ಅರಣ್ಯದೊಳಗೆ ಮರೆಯಾಗಿದ್ದಾರೆ.

ಭಾನುವಾರ ಅರಣ್ಯ ಇಲಾಖೆ ಗಸ್ತು ಸಿಬ್ಬಂದಿ ಕೂಜಿಮಲೆ ಕಡಮಕಲ್ಲು ಅಂಗಡಿ ಬಳಿ ಬಂದಾಗ ಅಂಗಡಿ ಮಾಲೀಕ ಅರಣ್ಯ ಸಿಬ್ಬಂದಿ ಬಳಿ ದಿನಸಿ ವಸ್ತುಗಳ ಹಣ ಕೇಳಿದ್ದಾರೆ. ಇದರಿಂದ ವಿಚಲಿತರಾದ ಅರಣ್ಯ ಸಿಬ್ಬಂದಿ ನಮ್ಮ ಗಸ್ತು ತಂಡದಲ್ಲಿ ಯಾವುದೇ ಮಹಿಳಾ ಸಿಬ್ಬಂದಿ ಇಲ್ಲ ಎಂದು ಹೇಳಿದ್ದಾರೆ. ನಂತರ ಅಂಗಡಿ ಮಾಲೀಕ, ಇಬ್ಬರು ಪುರುಷರು ಮತ್ತು ಇಬ್ಬರು ಮಹಿಳೆಯರು ಸಮವಸ್ತ್ರದಲ್ಲಿ ಬಂದು ನಾವು ಅರಣ್ಯ ಸಿಬ್ಬಂದಿ ಎಂದು ಹೇಳಿ ದಿನಸಿ ವಸ್ತುಗಳನ್ನು ತೆಗೆದುಕೊಂಡು ಹೋಗಿದ್ದಾರೆ ಎಂದು ಅರಣ್ಯ ಸಿಬ್ಬಂದಿಗೆ ತಿಳಿಸಿದ್ದಾರೆ.


ಶಂಕಿತ ನಕ್ಸಲರು ಬಂದು ಹೋದ ಕೂಜಿಮಲೆ ಅರಣ್ಯ ವ್ಯಾಪ್ತಿಯ ಎಸ್ಟೇಟ್.

ನಂತರ ಅಂಗಡಿಗೆ ಬಂದವರು ನಕ್ಸಲರಾಗಿ ಬಹುದು ಎಂದು ಪೊಲೀಸ್ ಇಲಾಖೆಗೆ ಮಾಹಿತಿ ನೀಡಲಾಯಿತು. ಪಶ್ಚಿಮ ಘಟ್ಟದ ಕೂಜಿಮಲೆ ಅರಣ್ಯ ಪ್ರದೇಶ ಕೊಡಗು, ದಕ್ಷಿಣ ಕನ್ನಡದ ಸುಳ್ಯ, ಗುತ್ತಿಗಾರು, ಕೊಲ್ಲಮೊಗರು, ಕಲ್ಮಕರ್, ಸುಬ್ರಹ್ಮಣ್ಯ ಸೇರಿದಂತೆ ಕೇರಳದ ಅರಣ್ಯ ಮತ್ತು ರಬ್ಬರ್ ಎಸ್ಟೇಟ್‌ಗಳಿಗೂ ವ್ಯಾಪಿಸಿದೆ. ಈ ವ್ಯಾಪ್ತಿಯಲ್ಲಿ ತೀರಾ ವಿರಳ ಜನ ಸಂಖ್ಯೆ ಇದ್ದು, ಶಂಕಿತ ನಕ್ಸಲರು ಕೇರಳ ಅರಣ್ಯ ಗಡಿ ಮೂಲಕ ಕರ್ನಾಟಕದ ಅರಣ್ಯ ಪ್ರದೇಶಕ್ಕೆ ನುಸುಳಿರುವ ಶಂಕೆ ವ್ಯಕ್ತಗೊಂಡಿದೆ. ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಕಾರ್ಕಳದ ನಕ್ಸಲ್ ನಿಗ್ರಹ ದಳದ 3 ತಂಡ, ಕೊಡಗು ಜಿಲ್ಲೆಯ 1 ತಂಡ ಶಂಕಿತ ನಕ್ಸಲರಿಗಾಗಿ ಶೋಧಕಾರ್ಯ ನಡೆಸುತ್ತಿದ್ದು, ಜಿಲ್ಲಾ ಪೊಲೀಸ್ ಇಲಾಖೆ ಗಡಿಪ್ರದೇಶಗಳಲ್ಲಿ ಕಟ್ಟೆಚ್ಚರ ವಹಿಸಿದೆ. ಹಿಂದೆಯೂ ಚುನಾವಣೆ ವೇಳೆ ಕಾಲೂರು, ಸಂಪಾಜೆಯ ಗುಡ್ಡೆಗದ್ದೆ, ಕಕ್ಕಬ್ಬೆ, ಭಾಗಮಂಡಲದ ಮುಂಡ್ರೋಟು ವ್ಯಾಪ್ತಿಯಲ್ಲಿ ನಕ್ಸಲರ ಚಲನವಲನ ಕಂಡು ಬಂದಿತ್ತು.

ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಜಿಲ್ಲಾ ಗುಪ್ತದಳ, ರಾಜ್ಯ ಆಂತರಿಕ ಭದ್ರತಾ ವಿಭಾಗದ ಸಿಬ್ಬಂದಿ, ದಕ್ಷಿಣ ಕನ್ನಡದ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಪರಿಶೀಲನೆ ನಡೆಸುತ್ತಿದ್ದಾರೆ.

ಹೆಜ್ಜೇನು ದಾಳಿ: 12 ಕಾರ್ಮಿಕರಿಗೆ ಗಾಯ


ಸಿದ್ದಾಪುರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕಾರ್ಮಿಕರು.

ಸಿದ್ದಾಪುರ, ಮಾ.18–ಗುಂಪಾಗಿ ವಲಸೆ ಹೋಗುತ್ತಿದ್ದ ಹೆಜ್ಜೇನು ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರ ಮೇಲೆ ದಾಳಿ ಮಾಡಿದ್ದು, ಇದರಿಂದ ಗಾಯಗೊಂಡ 12 ಕಾರ್ಮಿಕರು ಆಸ್ಪತ್ರೆಗೆ ದಾಖಲಾಗಿರುವ ಘಟನೆ ಗುಹ್ಯ ಗ್ರಾಮದ ಸೋಮವಾರ ನಡೆದಿದೆ.

ಗುಹ್ಯ ಗ್ರಾಮದ ಕಾಫಿ ತೋಟವೊಂದರಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಕೆಲಸ ಮುಗಿಸಿ ಮಧ್ಯಾಹ್ನ ಊಟಕ್ಕೆ ತೆರಳುತ್ತಿದ್ದ ವೇಳೆ ಹೆಜ್ಜೇನು ಮೊದಲು ಒಬ್ಬ ಕಾರ್ಮಿಕನಿಗೆ ಕಚ್ಚಿದೆ. ಹೆಜ್ಜೇನು ದಾಳಿಯಿಂದ ತಪ್ಪಿಸಿ ಕೊಳ್ಳಲು ಇತರ ಕಾರ್ಮಿಕರ ಬಳಿ ಈತ ಓಡಿ ಬಂದ ಪರಿಣಾಮ ಅಲ್ಲಿದ್ದ 12 ಕಾರ್ಮಿಕರ ಮೇಲೆ ದಾಳಿ ನಡೆಸಿವೆ.

ಹೆಜ್ಜೇನು ದಾಳಿಯಿಂದ ತಪ್ಪಿಸಿಕೊಳ್ಳಲು ಕಾರ್ಮಿಕರು ಕಾಫಿ ತೋಟದಿಂದ ಓಡಿ ಮುಖ್ಯ ರಸ್ತೆಗೆ ತಲುಪಿದ್ದಾರೆ. ಗಾಯಗೊಂಡ ಕಾರ್ಮಿಕರನ್ನು ಚಾಲಕ ನವಾಜ್ ತಮ್ಮ ಆಟೋದಲ್ಲಿ ಕರೆತಂದು ಸಿದ್ದಾಪುರ ಆಸ್ಪತ್ರೆಗೆ ದಾಖಲಿಸಿದ್ದಾರೆ. ಜೇನುಹುಳ ದಾಳಿಯಿಂದ ಗಾಯಗೊಂಡವರು ಅಸ್ಸಾಂ ಮೂಲದ ಕಾರ್ಮಿಕರು ಎಂದು ಗುರುತಿಸಲಾಗಿದ್ದು, ವೈದ್ಯಾಧಿಕಾರಿ ರಾಘವೇಂದ್ರ ಗಾಯಾಳುಗಳಿಗೆ ಚಿಕಿತ್ಸೆ ನೀಡುತ್ತಿದ್ದಾರೆ.

ಸಿದ್ದಾಪುರ ಠಾಣೆ ಪೊಲೀಸರು ಹಾಗೂ ತೋಟದ ರೈಟರ್ ಪೊನ್ನಪ್ಪ, ಗ್ರಾಮ ಪಂಚಾಯಿತಿ ಸದಸ್ಯ ಜಾಫರ್ ಆಸ್ಪತ್ರೆಗೆ ಭೇಟಿ ಗಾಯಾಳುಗಳ ಆರೋಗ್ಯ ವಿಚಾರಿಸಿದರು.

ಮಲೆತಿರಿಕೆ ಬೆಟ್ಟದ ಉತ್ಸವ ಮೂರ್ತಿ ಮೆರವಣಿಗೆ

ವಿರಾಜಪೇಟೆ, ಮಾ.18–ವಿರಾಜಪೇಟೆಯ ಮಲೆತಿರಿಕೆ ಬೆಟ್ಟದ ಶ್ರೀ ಮಲೆಮಹದೇಶ್ವರ ದೇವಾಲಯದ ವಾರ್ಷಿಕೋತ್ಸವವನ್ನು ಐದು ಗ್ರಾಮಸ್ಥರು ಸೇರಿ ಆರು ದಿನ ವಿಜೃಂಭಣೆಯಿಂದ ಆಚರಿಸಿದರು.

ಸೋಮವಾರ ಸಂಜೆ ನಗರದ ಸುಂಕದ ಕಟ್ಟೆ ಬಳಿ ಉತ್ಸವ ಮೂರ್ತಿಗೆ ಪೂಜೆ ಸಲ್ಲಿಸಿ, ಮೆರವಣಿಗೆ ನಡೆಸಲಾಯಿತು. ಜೈನ ಬೀದಿಯ ಬಸವೇಶ್ವರ ದೇವಲಯದಲ್ಲಿ ಮಹದೇಶ್ವರನಿಗೆ ವಿಶೇಷ ಪೂಜೆ ಸಲ್ಲಿಸಿ, ಪ್ರಸಾದ ವಿತರಿಸಲಾಯಿತು. ನಂತರ ಮಹಾಗಣಪತಿ ದೇವಾಲಯ ಪಕ್ಕದ ಕೃಷ್ಣ ಸ್ಟೋರ್ ಬಳಿ ಪೂಜೆ ಸಲ್ಲಿಸಲಾಯಿತು.

ದೇವಾಂಗಬೀದಿಯ ಚೌಡೇಶ್ವರಿ ಹಾಗೂ ಮಹದೇಶ್ವರ ಉತ್ಸವ ಮೂರ್ತಿಯನ್ನು ಮಲೆತಿರಿಕೆ ದೇವಾಲಯಕ್ಕೆ ತಂದು ಪೂಜೆ ಸಲ್ಲಿಸಲಾಯಿತು. ಬೆಳಗ್ಗೆಯಿಂದ ನೆರಪು, ಎತ್ತ್‌ಪೋರಾಟ, ತೆಂಗಿನಕಾಯಿಗೆ ಗುಂಡು ಹೊಡೆಯುವುದು, ಮಹಾಪೂಜೆ ನಂತರ ಅನ್ನಸಂತರ್ಪಣೆ ನಡೆಯಿತು.

ಮೆರವಣಿಗೆಯಲ್ಲಿ ದೇವತಕ್ಕರಾದ ಕೊಳವಂಡ ಕಾರ್ಯಪ್ಪ, ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ವಟೇರಿರ ಶಂಕರಿ ಪೂವಯ್ಯ, ಕಾರ್ಯದರ್ಶಿ ಬೊಳ್ಳಚಂಡ ಪ್ರಕಾಶ್, ಸಹ ಕಾರ್ಯದರ್ಶಿ ಚೋಕಂಡ ರಮೇಶ್, ಖಜಾಂಚಿ ಚಾರಿಮಂಡ ಗಣಪತಿ, ಸದಸ್ಯರು, ಐಮಂಗಲ, ಮಗ್ಗುಲ, ಚೆಂಬೆ ಬೆಳ್ಳೂರು, ಕುಕ್ಲೂರು ಹಾಗೂ ಮಲೆತಿರಿಕೆ ಕುಂದ್ ಸೇರಿದಂತೆ ಸುತ್ತಲಿನ ಐದು ಗ್ರಾಮ ಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.


ವಿರಾಜಪೇಟೆಯಲ್ಲಿ ಮಲೆತಿರಿಕೆ ಬೆಟ್ಟದ ಮಲೆಮಹದೇಶ್ವರ ಉತ್ಸವ ಮೂರ್ತಿಯನ್ನು ಮೆರವಣಿಗೆ ನಡೆಸಲಾಯಿತು.

ಮಂಗಳವಾರ ಬೆಳಗ್ಗೆ ದೇವರಿಗೆ ವಿಶೇಷ ಪೂಜೆ, ಮಧ್ಯಾಹ್ನ 1 ಗಂಟೆಗೆ ಮಹಾಪೂಜೆ, ಸಂಜೆ 6 ಗಂಟೆಗೆ ದೇವರ ಜಳಕ–ಅವಭೃತ ಸ್ನಾನ ಹಾಗೂ 20ರಂದು 11 ಗಂಟೆಗೆ ಕೊಡಿಮರ ಇಳಿಸಲಾಗುವುದು. ನಂತರ ದೇವರಿಗೆ ಮಹಾಪೂಜೆ ನಡೆಯಲಿದೆ.

ಇಂಡೋ-ಶ್ರೀಲಂಕಾ ಡ್ಯೂಲ್ ಚಾಂಪಿಯನ್‌ಶಿಪ್‌ಗೆ ಪ್ರವೇಶ

ಗೋಣಿಕೊಪ್ಪ, ಮಾ.18–ಉಡುಪಿಯಲ್ಲಿ ನಡೆದ ದಕ್ಷಿಣ ಭಾರತದ 2ನೇ ಮಾಸ್ಟರ್ ಅಥ್ಲೆಟಿಕ್ಸ್ ಮುಕ್ತ ಚಾಂಪಿಯನ್‌ಶಿಪ್‌ನಲ್ಲಿ ಕೊಡಗಿನ ಐದು ಕ್ರೀಡಾಪಟುಗಳು ಇಂಡೋ–ಶ್ರೀಲಂಕಾ ಡ್ಯೂಲ್ ಚಾಂಪಿಯನ್‌ಶಿಪ್‌ಗೆ ಆಯ್ಕೆಯಾಗಿದ್ದಾರೆ.

ತೊರೆನೂರು ಗಣೇಶ್, ಪಾಸುರ ಇಂದಿರಾ ಮುತ್ತಣ್ಣ, ಪಡಿಕಲ್ ಕುಸುಮಾವತಿ ಪಟ್ಟಡ ಮುತ್ತಮ್ಮ ಹಾಗೂ ಮುಲ್ಲೆರ ಪೊನ್ನಮ್ಮ ಪದಕ ಗಳಿಸಿ, ಶ್ರೀಲಂಕಾದ ಕೊಲಂಬೊದಲ್ಲಿ ಜೂನ್‌ನಲ್ಲಿ ನಡೆಯಲಿರುವ ಇಂಡೋ–ಶ್ರೀಲಂಕಾ ಡ್ಯೂಲ್ ಚಾಂಪಿಯನ್‌ಶಿಪ್‌ಗೆ ಪ್ರವೇಶ ಪಡೆದಿದ್ದಾರೆ.

ಅಪ್ರಾಪ್ತ ಚಲಾಯಿಸುತ್ತಿದ್ದ ಕಾರು ಡಿಕ್ಕಿ

ಇಬ್ಬರು ಮಹಿಳೆಯರಿಗೆ ಗಾಯ

ಸುಂಟಿಕೊಪ್ಪ, ಮಾ.18–ಅಪ್ರಾಪ್ತ ಬಾಲಕ ಚಲಾಯಿಸುತ್ತಿದ್ದ ಕಾರು ನಿಯಂತ್ರಣ ತಪ್ಪಿ ಕಾಂಪೌಂಡ್ ಮುಂಭಾಗದ ಸ್ಲ್ಯಾಬ್‌ಗೆ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಮಹಿಳೆಯರು ಗಂಭೀರವಾಗಿ ಗಾಯಗೊಂಡಿರುವ ಘಟನೆ ಸಮೀಪದ ಹೇರೂರು ಜಂಗಲ್ ರೆಸಾರ್ಟ್ ಬಳಿ ಘಟನೆ ನಡೆದಿದೆ.

15 ವರ್ಷದ ಬಾಲಕ ಆಲ್ಟೋ ಕಾರನ್ನು ಬಾಡಿಗೆಗೆ ಪಡೆದು ಬಸವನಹಳ್ಳಿ ಮಾರ್ಗವಾಗಿ ವೇಗವಾಗಿ ಚಲಾಯಿಸಿಕೊಂಡು ಬಂದಿದ್ದಾನೆ. ಆದರೆ, ನಿಯಂತ್ರಣ ತಪ್ಪಿ ಕಾರು ರೆಸಾರ್ಟ್‌ನ ರಸ್ತೆ ಬದಿಯ ಸ್ಲ್ಯಾಬ್‌ಗೆ ಅಪ್ಪಳಿಸಿ ಪಲ್ಟಿಯಾಗಿದೆ.

ಈ ವೇಳೆ ರೆಸಾರ್ಟ್‌ನ ವಾಹನ ಪಾರ್ಕಿಂಗ್ ಮಾಡುವ ಸ್ಥಳದಲ್ಲಿದ್ದ ಇಬ್ಬರು ಮಹಿಳಾ ಸಿಬ್ಬಂದಿಗೆ ಕಾರು ಡಿಕ್ಕಿಯಾಗಿದೆ. ಗಂಭೀರವಾಗಿ ಗಾಯಗೊಂಡ ಮಹಿಳಾ ಸಿಬ್ಬಂದಿಯನ್ನು ಮೈಸೂರಿನ ಆಸ್ಪತ್ರೆಯೊಂದಕ್ಕೆ ದಾಖಲಿಸಲಾಗಿದೆ. ಕಾರಿನಲ್ಲಿ ಚಾಲಕ ಸೇರಿದಂತೆ ನಾಲ್ವರು ಯುವಕರು ಪ್ರಯಾಣಿಸುತ್ತಿದ್ದರು ಎನ್ನಲಾಗಿದ್ದು, ಇವರು ತಲೆ, ಕೈ, ಕಾಲುಗಳಿಗೆ ಸಣ್ಣಪುಟ್ಟ ಗಾಯಗಳಾಗಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಈ ಸಂಬಂಧ ಸುಂಟಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಸುಂಟಿಕೊಪ್ಪ ಸಮೀಪದ ಹೇರೂರು ಜಂಗಲ್ ರೆಸಾರ್ಟ್ ಬಳಿ ಉರುಳಿ ಬಿದ್ದ ಕಾರು ಜಖಂಗೊಂಡಿರುವುದು.

ಮತ್ತೆ ಒಂದಾದ ಎರಡು ಜೋಡಿ

ಚಾಮರಾಜನಗರ, ಮಾ.18–ಸರ್ವರಿಗೂ ನ್ಯಾಯ ಎಂಬ ಪರಿಕಲ್ಪನೆಯಡಿ ನಡೆದ ಲೋಕ್ ಅದಾಲತ್‌ನಲ್ಲಿ ಜಿಲ್ಲೆಯ ನ್ಯಾಯಾಲಯಗಳಲ್ಲಿ ಇತ್ಯರ್ಥಕ್ಕೆ ಬಾಕಿ ಇದ್ದ ರಾಜಿಯೋಗ್ಯ ಪ್ರಕರಣ, ವ್ಯಾಜ್ಯಪೂರ್ವ ಪ್ರಕರಣಗಳನ್ನು ಯಶಸ್ವಿಯಾಗಿ ಇತ್ಯರ್ಥಗೊಳಿಸಲಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸೆಷೆನ್ಸ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷೆ ಬಿ.ಎಸ್.ಭಾರತಿ ತಿಳಿಸಿದ್ದಾರೆ.


ಲೋಕ್ ಅದಾಲತ್‌ನ ನ್ಯಾಯಾಧೀಶರ ಸಮ್ಮುಖದಲ್ಲಿ ಒಂದಾದ ದಂಪತಿ.

ದಾಂಪತ್ಯ ಜೀವನದಲ್ಲಿ ಭಿನ್ನಾಭಿಪ್ರಾಯ ಉಂಟಾದ ಕಾರಣ ಕೌಟುಂಬಿಕ ಮಹಿಳಾ ದೌರ್ಜನ್ಯ ಸಂರಕ್ಷಣಾ ಕಾಯ್ದೆಯಡಿ ಅಂಬಳೆ ಗ್ರಾಮದ ಎಂ.ಚಂದ್ರಕಲಾ ಅವರು ಕೊಳ್ಳೇಗಾಲ ತಾಲೂಕಿನ ಪಾಳ್ಯ ಗ್ರಾಮದ ರಘು ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದರು. ಯಳಂದೂರಿನ ಸಿವಿಲ್ ನ್ಯಾಯಾಲಯದಲ್ಲಿ ನಡೆದ ಲೋಕ್ ಅದಾಲತ್‌ನಲ್ಲಿ ಸದರಿ ಪ್ರಕರಣದಲ್ಲಿನ ದಂಪತಿ ಎಲ್ಲಾ ಭಿನ್ನಾಭಿಪ್ರಾಯ ಮರೆತು ಸಾಂಸಾರಿಕ ಜೀವನ ನಡೆಸುವುದಾಗಿ ಒಪ್ಪಿಕೊಂಡರು. ಪ್ರತ್ಯೇಕವಾಗಿದ್ದ ದಂಪತಿ ಒಂದಾಗುವಂತೆ ಮಾಡಿದ್ದು ಲೋಕ್ ಅದಾಲತ್‌ನ ಪ್ರಮುಖ ವಿಶೇಷವಾಗಿದೆ.

ಚಾಮರಾಜನಗರದ ಜಾಲಹಳ್ಳಿಹುಂಡಿ ಹೊಸಬಡಾವಣೆ ನಿವಾಸಿ ಇಂದ್ರಾಣಿ, ತನ್ನ ಪತಿ ಶಿವಮಲ್ಲೇಶ, ಅತ್ತೆ, ಮಾವ, ಮೈದುನ ವಿರುದ್ಧ ಕಿರುಕುಳ, ಅವಾಚ್ಯ ಶಬ್ದಗಳ ನಿಂದನೆ, ವರದಕ್ಷಿಣೆ ತರುವಂತೆ ಮಾನಸಿಕ ಹಾಗೂ ದೈಹಿಕ ಹಲ್ಲೆ ಮಾಡುತ್ತಿದ್ದು, ಹಿಂಸೆ ನೀಡುತ್ತಿದ್ದಾರೆಂದು ವ್ಯಾಜ್ಯಪೂರ್ವ ಪ್ರಕರಣ ದಾಖಲಿಸಿದ್ದರು. ಈ ಪ್ರಕರಣ ಲೋಕ್ ಅದಾಲತ್‌ನಲ್ಲಿ ಒಮ್ಮತವಾಗಿ ಇತ್ಯರ್ಥಗೊಂಡಿತು. ಇನ್ನುಮುಂದೆ ದಂಪತಿ ಯಾವುದೇ ಮನಸ್ತಾಪವಿಲ್ಲದೆ ಸಾಂಸಾರಿಕ ಜೀವನ ನಡೆಸಿಕೊಂಡು ಹೋಗುವುದಾಗಿ ಒಪ್ಪಿ ಒಂದಾಗಿದ್ದು ಸಹ ರಾಷ್ಟ್ರೀಯ ಲೋಕ್ ಅದಾಲತ್‌ನ ಮತ್ತೊಂದು ವಿಶೇಷವಾಗಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷೆ ಬಿ.ಎಸ್. ಭಾರತಿ ತಿಳಿಸಿದ್ದಾರೆ.

ಪತ್ನಿ ಕೊಂದ ಪತಿಗೆ ಜೀವಾವಧಿ ಶಿಕ್ಷೆ

ಕೊಳ್ಳೇಗಾಲ: ಪತ್ನಿಯನ್ನು ಕೊಲೆ ಮಾಡಿದ ಪತಿರಾಯನಿಗೆ ಜೀವಾವಧಿ ಶಿಕ್ಷೆ ಮತ್ತು 75 ಸಾವಿರ ರೂ. ದಂಡ ವಿಧಿಸಿ, ಕೊಳ್ಳೇಗಾಲ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಎನ್.ಆರ್.ಲೋಕಪ್ಪ ತೀರ್ಪು ನೀಡಿದ್ದಾರೆ.

ಹನೂರು ತಾಲೂಕಿನ ಹುತ್ತೂರು ಗ್ರಾಮದ ನಿವಾಸಿ ನಾಗ (46) ಶಿಕ್ಷೆಗೆ ಗುರಿಯಾದವನಾಗಿದ್ದು, ಈತ 2019ರ ಮಾ.12ರಂದು ರಾತ್ರಿ ತನ್ನ ಹಿರಿಯ ಪತ್ನಿ ಅರಸಮ್ಮ ಅವರ ಬಳಿ ಸಾವಿರ ರೂ. ಕೇಳಿದನೆಂದು ಹೇಳಲಾಗಿದ್ದು, ಈ ವಿಚಾರವಾಗಿ ಇವರಿಬ್ಬರ ನಡುವೆ ಮಧ್ಯರಾತ್ರಿವರೆಗೆ ಗಲಾಟೆ ನಡೆದಿದೆ. ಈ ಸಂದರ್ಭದಲ್ಲಿ ಅರಸಮ್ಮ ನಾಗನನ್ನು ಬೈದಿದ್ದಲ್ಲದೆ, ನಾವಿರುವಾಗಲೇ ಇನ್ನೊಬ್ಬಳನ್ನು ಕಟ್ಟಿಕೊಂಡಿರುವುದಲ್ಲದೆ, ನನಗೆ ಹೊಡೆಯುತ್ತೀಯಾ ಎಂದು ಪ್ರಶ್ನಿಸಿ, ಮನೆ ನನ್ನದು, ನೀನೂ ಮನೆಯಿಂದ ಹೊರ ಹೋಗು ಎಂದಾಗ ಕೆರಳಿದ ನಾಗ ಪತ್ನಿಯನ್ನು ಉಸಿರುಗಟ್ಟಿಸಿ ಹತ್ಯೆ ಮಾಡಿದ್ದಲ್ಲದೆ, ಶವವನ್ನು ಓಣಿಯೊಂದರಲ್ಲಿ ಬಿಸಾಕಿ ಬಂದಿದ್ದ.

ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ಹನೂರು ಠಾಣೆಯ ಅಂದಿನ ಇನ್ಸ್‌ಪೆಕ್ಟರ್ ತನಿಖೆ ನಡೆಸಿ, ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶರು ನಾಗನಿಗೆ ಜೀವಾವಧಿ ಶಿಕ್ಷೆ ಮತ್ತು 75 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕರಾದ ಬಿ.ಪಿ.ಮಂಜುನಾಥ್ ವಾದ ಮಂಡಿಸಿದ್ದರು.

ಶಾಲಾ–ಕಾಲೇಜುಗಳಿಗೆ ಮರಿತಿಬ್ಬೇಗೌಡ ಭೇಟಿ


ಹನೂರು ತಾಲೂಕಿನ ಏಕಲವ್ಯ ವಸತಿ ಶಾಲೆಗೆ ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ ಭೇಟಿ ನೀಡಿ ಶಿಕ್ಷಕರ ಸಮಸ್ಯೆ ಆಲಿಸಿದರು.

ಚಾಮರಾಜನಗರ: ಶಿಕ್ಷಕರು ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕು ಎಂದು ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ ಮನವಿ ಮಾಡಿದರು.

ಹನೂರು ತಾಲೂಕಿನ ಮಂಗಲ ಏಕಲವ್ಯ ವಸತಿ ಶಾಲೆಗೆ ಭೇಟಿ ನೀಡಿ ಶಿಕ್ಷಕರ ಸಮಸ್ಯೆಗಳನ್ನು ಆಲಿಸಿ ಮಾತನಾಡಿದ ಅವರು, ಶಿಕ್ಷಕರ ಸಮಸ್ಯೆಗಳ ನಿವಾರಣೆಗಾಗಿ ಸದನದೊಳಗೆ ನಿರಂತರವಾಗಿ ಹೋರಾಟ ಮಾಡಲಾಗುತ್ತಿದೆ. ಹಂತ ಹಂತವಾಗಿ ಶಾಲೆಗಳಿಗೆ ಮೂಲಸೌಕರ್ಯಗಳನ್ನು ಕಲ್ಪಿಸಿಕೊಡಲು ಒತ್ತು ನೀಡಲಾಗಿದೆ ಎಂದರು.

ನಂತರ ಮಂಗಲ ಸರ್ಕಾರಿ ಪ್ರೌಢಶಾಲೆ, ಮೊರಾರ್ಜಿ ವಸತಿ ಶಾಲೆ, ಹನೂರು ಜಿ.ವಿ.ಗೌಡ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಾಮಗೆರೆ ಮಹದೇಶ್ವರ ಪ್ರೌಢಶಾಲೆ ಸೇರಿದಂತೆ ಇನ್ನಿತರ ಶಾಲಾ–ಕಾಲೇಜುಗಳಿಗೆ ಭೇಟಿ ನೀಡಿ ಶಿಕ್ಷಕರ ಸಮಸ್ಯೆ ಆಲಿಸಿದರು.

ಈ ಸಂದರ್ಭದಲ್ಲಿ ಬಳ್ಳಾರಿಗೌಡ, ಕೆ.ಎಸ್. ಷಡಕ್ಷರಿ ಇತರರು ಹಾಜರಿದ್ದರು.

ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಚಂದ್ರು

ಚಾಮರಾಜನಗರ, ಮಾ.18–ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರಕ್ಕೆ ಯಳಂದೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಚ್.ವಿ.ಚಂದ್ರು ಅವರನ್ನು ಅಧ್ಯಕ್ಷರಾಗಿ ಸೇರಿದಂತೆ ಐವರು ಉಪಾಧ್ಯಕ್ಷರು ಹಾಗೂ 15 ಸದಸ್ಯರನ್ನು ನೇಮಕ ಮಾಡಲಾಗಿದೆ.



ಗ್ಯಾರಂಟಿ ಯೋಜನೆಗಳ ಅರ್ಹ ಫಲಾನುಭವಿಗಳಿಗೆ ಪರಿಣಾಮಕಾರಿಯಾಗಿ ತಲುಪಿಸಲು ಅನುಕೂಲವಾಗುವಂತೆ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಪ್ರಾಧಿಕಾರಕ್ಕೆ ನೇಮಕ ಮಾಡಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಆದೇಶದಲ್ಲಿ ತಿಳಿಸಿದೆ.

ಎಸ್ಸೆಸ್ಸೆಲ್ಸಿ ಪರೀಕ್ಷೆ ಕಾರ್ಯ ಸಮರ್ಪಕವಾಗಿ ನಿರ್ವಹಿಸಿ

ಸಭೆಯಲ್ಲಿ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಶಿಲ್ಪಾನಾಗ್ ಸೂಚನೆ

ಚಾಮರಾಜನಗರ, ಮಾ.18–ಮಾ.25ರಿಂದ ಜಿಲ್ಲಾದ್ಯಂತ ಆರಂಭವಾಗಲಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಎಲ್ಲಾ ಸಿದ್ಧತೆಗಳನ್ನು ಕೈಗೊಂಡು, ಪರೀಕ್ಷಾ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಸಂಬಂಧ ಮುಖ್ಯ ಅಧೀಕ್ಷಕರು, ಮಾರ್ಗಾಧಿಕಾರಿಗಳು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳೊಂದಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈ ಬಾರಿ ಮಾ.25ರಿಂದ ಏ.6ರವರೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಯಲಿದೆ. ಪರೀಕ್ಷೆ ಪ್ರಾರಂಭದಿಂದ ಅಂತ್ಯದವರೆಗೆ ಜಿಲ್ಲೆಯ ಎಲ್ಲಾ ತಾಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಪರೀಕ್ಷಾ ಕಾರ್ಯಕ್ಕೆ ನಿಯೋಜಿತರಾಗಿರುವ ಮುಖ್ಯ ಅಧೀಕ್ಷಕರು ಹಾಗೂ ಮಾರ್ಗಾಧಿಕಾರಿಗಳು ವಹಿಸಿರುವ ಜವಾಬ್ದಾರಿಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು. ಪರೀಕ್ಷಾ ಕಾರ್ಯದಲ್ಲಿ ಯಾವುದೇ ಗೊಂದಲಗಳಿಗೆ ಆಸ್ಪದವಾಗದಂತೆ ಎಚ್ಚರಿಕೆ ವಹಿಸಬೇಕು ಎಂದರು.


ಚಾಮರಾಜನಗರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಸಂಬಂಧ ಡಿಸಿ ಶಿಲ್ಪಾನಾಗ್ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಉತ್ತಮ ಗಾಳಿ, ಬೆಳಕಿನ ವ್ಯವಸ್ಥೆ ಇರಬೇಕು. ಕುಡಿಯುವ ನೀರು, ಶೌಚಾಲಯ, ಸ್ವಚ್ಛತಾ ಕಾರ್ಯಗಳು ವ್ಯವಸ್ಥಿತವಾಗಿರಬೇಕು. ವಿಶೇಷ ಅಗತ್ಯವುಳ್ಳ ವಿದ್ಯಾರ್ಥಿಗಳಿಗೆ ಪರೀಕ್ಷಾ ಕೇಂದ್ರದಲ್ಲಿ ಅವಶ್ಯ ಸೌಲಭ್ಯಗಳನ್ನು ನೀಡಬೇಕು. ಪರೀಕ್ಷಾ ಕೇಂದ್ರಗಳಲ್ಲಿ ಕಡ್ಡಾಯವಾಗಿ ಸಿಸಿ ಕ್ಯಾಮರಾ ಅಳವಡಿಸಬೇಕು. ಈಗಾಗಲೇ ಅಳವಡಿಸಿರುವ ಕ್ಯಾಮರಾಗಳು ಚಾಲ್ತಿಯಲ್ಲಿರುವ ಬಗ್ಗೆ ಖಾತರಿಪಡಿಸಿಕೊಳ್ಳಬೇಕು. ಅಧಿಕಾರಿಗಳು ಪರೀಕ್ಷಾ ಕೇಂದ್ರಗಳಿಗೆ ಖುದ್ದಾಗಿ ಭೇಟಿ ನೀಡಿ, ಪರಿಶೀಲಿಸುವಂತೆ ನಿರ್ದೇಶಿಸಿದರು.

ಪರೀಕ್ಷೆ ಅವಧಿಯಲ್ಲಿ ಪರೀಕ್ಷಾ ಕೇಂದ್ರಗಳಿಗೆ ನಿರಂತರವಾಗಿ ವಿದ್ಯುತ್ ಸರಬರಾಜು ವ್ಯವಸ್ಥೆ ಇರಬೇಕು. ಪರೀಕ್ಷಾ ಕೇಂದ್ರಗಳಲ್ಲಿನ ಯುಪಿಎಸ್‌ಗಳು ಸುಸ್ಥಿತಿಯಲ್ಲಿರುವಂತೆ ನೋಡಿಕೊಳ್ಳಬೇಕು. ಅಕ್ರಮಗಳನ್ನು ತಡೆಯಲು ರಚಿಸಲಾಗಿರುವ ಸ್ಥಾನಿಕ ಜಾಗೃತ ದಳ ಪಾರದರ್ಶಕವಾಗಿ ಕಾರ್ಯಾಚರಣೆ ನಡೆಸಬೇಕು. ಪರೀಕ್ಷಾ ಕೇಂದ್ರಗಳಲ್ಲಿ ಹೆಲ್ಪ್‌ಡೆಸ್ಕ್ ಸ್ಥಾಪಿಸಬೇಕು ಎಂದರು.

ಪರೀಕ್ಷಾ ಕಾರ್ಯಕ್ಕಾಗಿ ಸಾಮಾನ್ಯ ಬಸ್‌ಗಳೊಂದಿಗೆ 33 ಹೆಚ್ಚುವರಿ ಕೆಎಸ್‌ಆರ್‌ಟಿಸಿ ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ. ಬಸ್‌ಗಳು ನಿಗದಿತ ಸಮಯಕ್ಕೆ ವಿದ್ಯಾರ್ಥಿಗಳನ್ನು ಪರೀಕ್ಷಾ ಕೇಂದ್ರಗಳಿಗೆ ಕರೆತರಲು ನೆರವಾಗಬೇಕು ಎಂದು ಸಲಹೆ ನೀಡಿದರು.

ಸಭೆಯಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಚಿದಂಬರ, ಎಲ್ಲಾ ತಾಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಅಧೀಕ್ಷಕರು, ಮಾರ್ಗಾಧಿಕಾರಿಗಳಾಗಿ ನೇಮಕವಾಗಿರುವ ಅಧಿಕಾರಿಗಳು ಇತರರು ಉಪಸ್ಥಿತರಿದ್ದರು.

> ಚಾಮರಾಜನಗರ ತಾಲೂಕಿನ 4019 ವಿದ್ಯಾರ್ಥಿಗಳು, ಗುಂಡ್ಲುಪೇಟೆಯ 2722, ಹನೂರಿನ 2507, ಕೊಳ್ಳೇಗಾಲದ 2180 ಹಾಗೂ ಯಳಂದೂರಿನ 975 ಸೇರಿದಂತೆ ಜಿಲ್ಲೆಯಲ್ಲಿ ಒಟ್ಟು 12,403 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲಿದ್ದಾರೆ. ಚಾಮರಾಜನಗರ ತಾಲೂಕಿನಲ್ಲಿ 15, ಗುಂಡ್ಲುಪೇಟೆ 9, ಹನೂರು 9, ಕೊಳ್ಳೇಗಾಲ 8 ಹಾಗೂ ಯಳಂದೂರು ತಾಲೂಕಿನಲ್ಲಿ 4 ಸೇರಿದಂತೆ ಜಿಲ್ಲೆಯಲ್ಲಿ ಒಟ್ಟು 45 ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.
> –ರಾಮಚಂದ್ರರಾಜೇ ಅರಸ್, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ

ದೊಡ್ಡಮೋಳೆಯಲ್ಲಿ ಅಪ್ಪು ಜನ್ಮ ದಿನಾಚರಣೆ


ಚಾಮರಾಜನಗರ ತಾಲೂಕಿನ ದೊಡ್ಡಮೋಳೆ ಬಡಾವಣೆಯಲ್ಲಿ ಡಾ.ಪುನೀತ್ ರಾಜ್‌ಕುಮಾರ್ ಜನ್ಮದಿನ ಆಚರಿಸಲಾಯಿತು.

ಚಾಮರಾಜನಗರ, ಮಾ.18–ಪವರ್ ಸ್ಟಾರ್ ಡಾ.ಪುನೀತ್ ರಾಜ್‌ಕುಮಾರ್ ಹುಟ್ಟುಹಬ್ಬ ಅಂಗವಾಗಿ ಅವರ ಅಭಿಮಾನಿ ಬಳಗದ ವತಿಯಿಂದ ತಾಲೂಕಿನ ದೊಡ್ಡಮೋಳೆ ಬಡಾವಣೆಯಲ್ಲಿ ಮಟನ್ ಬಿರಿಯಾನಿ ವಿತರಿಸುವ ಮೂಲಕ ಅಪ್ಪು ಜನ್ಮದಿನ ಆಚರಿಸಲಾಯಿತು.

ಅಭಿಮಾನಿಗಳು ಬಿರಿಯಾನಿಯನ್ನು ಬಡಾವಣೆ ನಿವಾಸಿಗಳಿಗೆ ಹಂಚಿದರು. ಇದೇ ವೇಳೆ ಹೂವಿನಿಂದ ಅಲಂಕೃತಗೊಂಡ ತೆರೆದ ಆಟೋ ಮೇಲೆ ಅಪ್ಪು ಭಾವಚಿತ್ರವನ್ನು ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಬಳಿಕ ಶಾಲಾ ಮಕ್ಕಳಿಗೆ ಬ್ಯಾಗ್ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಅಪ್ಪು ಅಭಿಮಾನಿ ಬಳಗದ ಬಸವಶೆಟ್ಟಿ, ಡಿ.ಎಂ.ಗಣೇಶ, ರಾವಳೇಶ, ಮಣಿ, ಕೃಷ್ಣ ಇದ್ದರು.

ಅಪ್ಪು ಅಭಿಮಾನಿಗಳಿಂದ ಪುಸ್ತಕ ವಿತರಣೆ

ಚಾಮರಾಜನಗರ: ನಗರದ ಪೌರ ಕಾರ್ಮಿಕರ ಕಾಲೋನಿಯಲ್ಲಿ ಡಾ.ಪುನೀತ್ ರಾಜ್‌ಕುಮಾರ್ ಜನ್ಮದಿನ ಆಚರಿಸಲಾಯಿತು.



ಪುನೀತ್ ಅವರ 49ನೇ ಜನ್ಮದಿನಾಚರಣೆ ಅಂಗವಾಗಿ ಅವರ ಭಾವಚಿತ್ರಕ್ಕೆ ಪೌರಕಾರ್ಮಿಕರ ಅಪ್ಪು ಅಭಿಮಾನಿ ಬಳಗದಿಂದ ಪುಷ್ಪ ನಮನ ಸಲ್ಲಿಸಲಾಯಿತು. ನಂತರ ಪುನೀತ್ ರಾಜ್‌ಕುಮಾರ್ ಪರ ಘೋಷಣೆ ಕೂಗಿದ ಅಭಿಮಾನಿಗಳು, ಕೇಕ್ ಕತ್ತರಿಸಿ, ಸಿಹಿ ಹಂಚಿ, ಪಟಾಕಿ ಸಿಡಿಸಿ ಹುಟ್ಟುಹಬ್ಬ ಆಚರಿಸಿದರು.

ಇದೇ ಸಂದರ್ಭದಲ್ಲಿ ಪೌರಕಾರ್ಮಿಕರ ಮಕ್ಕಳಿಗೆ ಪುಸ್ತಕ ಹಾಗೂ ಪರೀಕ್ಷಾ ಪ್ಯಾಡ್‌ಗಳನ್ನು ವಿತರಿಸಲಾಯಿತು. ಎಂ.ಪ್ರಶಾಂತ್, ಆರ್.ಅಜಿತ್, ಸಿ.ಎನ್.ಸಾಗರ್ ತಿಲಕ್, ಮನೋಹರ್ ಎಂ.ನಾಗೇಶ, ಎನ್.ಮಹೇಶ್ ಕುಮಾರ್, ಎಂ.ಅರ್ಜುನ್, ಎಂ.ರಾಜೇಂದ್ರ ಎಂ.ಯದುನಂದನ್ ಜಿ.ಕಾರ್ತಿಕ್, ಕಾಲೋನಿಯ ನಿವಾಸಿಗಳು ಹಾಗೂ ಮಕ್ಕಳು ಇದ್ದರು.


ಚಾಮರಾಜನಗರ ತಾಲೂಕಿನ ಮಂಗಲ ಗ್ರಾಮದಲ್ಲಿ 12 ವರ್ಷಕ್ಕೊಮ್ಮೆ ನಡೆಯುವ ಶ್ರೀ ಬೀರೇಶ್ವರಸ್ವಾಮಿಯ ಹಿರಿ–ಕಿರಿಯ ಜಾತ್ರಾ ಮಹೋತ್ಸವದಲ್ಲಿ ವಿವಿಧ ಗ್ರಾಮಸ್ಥರು ಬೀರೇಶ್ವರ ದೇವರನ್ನು ಹೂ, ಹೊಂಬಾಳೆಯೊಂದಿಗೆ ಉತ್ಸವ ನಡೆಸಿದರು.

ಒಂದನೇ ಪುಟದಿಂದ

ನಾನೇ ನಿಮ್ಮ ಬಳಿ ಬರುತ್ತೇನೆ

ನನ್ನ ಆಲೋಚನೆ ಹಾಗೂ ಬಿಜೆಪಿ ಆಲೋಚನೆ ಒಂದೇ ರೀತಿಯಾಗಿದೆ. ಈ ಕಾರಣಕ್ಕೆ ನಾನು ಬಿಜೆಪಿ ಆಯ್ಕೆ ಮಾಡಿಕೊಂಡಿದ್ದೇನೆ. ಆದರೆ ಲೋಕಸಭಾ ಚುನಾವಣೆಗೆ ನಾನು ಟಿಕೆಟ್ ಕೇಳಿಲ್ಲ, ಬಿಜೆಪಿಯವರೇ ನನಗೆ ಟಿಕೆಟ್ ನೀಡಿದ್ದಾರೆ ಎಂದು ಯದುವೀರ್ ಸ್ಪಷ್ಟಪಡಿಸಿದರು. ನಮ್ಮ ತಂದೆ ನಾಲ್ಕು ಬಾರಿ ಸಂಸದರಾಗಿದ್ದರು. ಎಲ್ಲಾ ಪಕ್ಷದವರ ಜೊತೆಗೆ ನಮಗೆ ಸಂಬಂಧವಿದೆ. ಜೊತೆಗೆ ಜನರಿಗೆ ಮೈಸೂರು ಅರಮನೆ ಬಗ್ಗೆ ಭಾವನಾತ್ಮಕ ಸಂಬಂಧವಿದೆ. ಜ್ಯಾತ್ಯಾತೀತ ಹಾಗೂ ಧರ್ಮಾತೀತವಾಗಿ ಎಲ್ಲರ ಬೆಂಬಲ ಕೇಳುತ್ತೇನೆ. ಅವರು ಕೂಡ ನನ್ನನ್ನು ಬೆಂಬಲಿಸುತ್ತಾರೆ ಎಂಬ ವಿಶ್ವಾಸವಿದೆ ಎಂದು ತಿಳಿಸಿದರು. ಮಾಧ್ಯಮ ಗೋಷ್ಠಿಯಲ್ಲಿ ಸಂಸದ ಪ್ರತಾಪ್ ಸಿಂಹ, ಮಾಜಿ ಸಚಿವ ಎಸ್.ಎ.ರಾಮದಾಸ್, ಬಿಜೆಪಿ ರಾಜ್ಯ ಉಪಾಧ್ಯಕ್ಷರಾದ ರಾಜೇಂದ್ರ, ಮಾಳವಿಕ ಅವಿನಾಶ್, ನಗರಾಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಮಹದೇವಸ್ವಾಮಿ ಉಪಸ್ಥಿತರಿದ್ದರು.

ಅರಮನೆ ಆಸ್ತಿ ವಿವಾದದ ಬಗ್ಗೆ ಕಾನೂನಾತ್ಮಕ ಹೋರಾಟ

ಮೈಸೂರು ಲೋಕಸಭಾ ಕ್ಷೇತ್ರಕ್ಕೆ ಬಿಜೆಪಿ ಅಭ್ಯರ್ಥಿಯಾಗಿ ಘೋಷಣೆಯಾದ ನಂತರ ರಾಜಮನೆತನದ ಆಸ್ತಿ ಸಂಬಂಧ ರಾಜ್ಯ ಸರ್ಕಾರ ತೆಗೆದುಕೊಂಡ ತೀರ್ಮಾನದ ಬಗ್ಗೆ ಕಾನೂನು ಹೋರಾಟ ಮಾಡುತ್ತೇವೆ ಎಂದು ಯದುವೀರ್ ತಿಳಿಸಿದರು. ರಸ್ತೆ ಅಗಲೀಕರಣಕ್ಕಾಗಿ ಬೆಂಗಳೂರು ಅರಮನೆಯ 15.5 ಎಕರೆ ಭೂಮಿ ಸ್ವಾಧೀನಪಡಿಸಿಕೊಳ್ಳಲು ರಾಜ್ಯ ಸರ್ಕಾರ ತೀರ್ಮಾನ ಮಾಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಯದುವೀರ್, ಸರ್ಕಾರ ತೆಗೆದುಕೊಂಡ ನಿರ್ಧಾರದ ವಿರುದ್ಧ ಹೋರಾಟ ಮಾಡುತ್ತೇವೆ ಎಂದು ಹೇಳಿದರು. ರಾಜ ಮನೆತನದ ಆಸ್ತಿಗಳು ನಮ್ಮ ತಾಯಿ ಪ್ರಮೋದಾದೇವಿ ಒಡೆಯರ್ ಹೆಸರಿನಲ್ಲಿ ಇದೆ. ಈಗ ಆಸ್ತಿ ಸಂಬಂಧ ಸರ್ಕಾರ ತೆಗೆದುಕೊಂಡಿರುವ ತೀರ್ಮಾನದ ವಿರುದ್ಧ ನಮ್ಮ ತಾಯಿ ಕಾನೂನಾತ್ಮಕವಾಗಿ ಹೋರಾಟ ಮಾಡುತ್ತಾರೆ ಎಂದು ಸ್ಪಷ್ಟಪಡಿಸಿದರು.

ಇದು ಚುನಾವಣೆಗಾಗಿ ಮಾಡುತ್ತಿರುವ ನಾಟಕವಲ್ಲ

ಚುನಾವಣೆಯ ಕಾರಣದಿಂದ ಬಹಳಷ್ಟು ನಾಯಕರ ಮನೆಗೆ ಭೇಟಿ ನೀಡುತ್ತಿದ್ದೇನೆ, ಸಾಮಾನ್ಯನಂತೆ ಬೆರೆಯುತ್ತಿದ್ದೇನೆ. ಇದೆಲ್ಲಾ ಚುನಾವಣೆಯಲ್ಲಿ ಗೆಲ್ಲಲು ಮಾಡುತ್ತಿರುವ ನಾಟಕ ಎಂಬ ಆರೋಪ ಶುದ್ಧ ಸುಳ್ಳು ಎಂದು ಯದುವೀರ್ ಖಾರವಾಗಿ ಪ್ರತಿಕ್ರಿಯೆ ನೀಡಿದರು. ನಾನು ಈ ಮೊದಲು ಕೂಡ ಅರಮನೆಯಿಂದ ಹೊರಗೆ ಬಂದು ಸಾಮಾನ್ಯ ಜನರ ಜೊತೆ ಬೆರೆಯುತ್ತಿದ್ದೆ. ಹಲವು ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಿದ್ದೆ ಎಂದರು. ಆದರೆ ಆಗ ಸಾಮಾನ್ಯನಂತೆ ನಾನು ಇರುವಾಗ ಸೆರೆ ಹಿಡಿಯಲು ಕ್ಯಾಮರಾ ಇರಲಿಲ್ಲ. ಆದರೆ ಈಗ ಕ್ಯಾಮರಾ ಇದೆ. ಇದರಿಂದ ಈಗ ಇದೆಲ್ಲಾ ಪ್ರದರ್ಶನವಾಗುತ್ತಿದೆ ಎಂದು ತಿಳಿಸಿದರು. ನಾನು ಚುನಾವಣೆಗೂ ಮೊದಲು ಹೇಗೆ ಇದ್ದೆನೋ, ಈಗಲೂ ಕೂಡ ಹಾಗೆ ಇದ್ದೇನೆ. ಯಾವುದೇ ವ್ಯತ್ಯಾಸವಿಲ್ಲ. ನಾನು ಕೂಡ ಸಾಮಾನ್ಯ ವ್ಯಕ್ತಿ ಎಂಬುವುದನ್ನು ಮರೆಯಬೇಡಿ ಎಂದು ಯದುವೀರ್ ಸಲಹೆ ನೀಡಿದರು.

ಯದುವೀರ್ ಗೆಲ್ಲಿಸುವುದು ನನ್ನ ಗುರಿ; ಇಲ್ಲಿ ಯಾವ ಒಳೇಟು ಇಲ್ಲ

ಸಂಸದ ಪ್ರತಾಪ್ ಸಿಂಹ ಸ್ಪಷ್ಟನೆ



ಮೈಸೂರು, ಮಾ.18(ಬಿಎಲ್‌ಯು)– ಬಿಜೆಪಿ ನನಗೆ ತಾಯಿ ಇದ್ದ ಹಾಗೆ, ಎಂದಿಗೂ ಪಕ್ಷಕ್ಕೆ ದ್ರೋಹ ಬಗೆಯುವುದಿಲ್ಲ. ಯದುವೀರ್ ಗೆಲ್ಲಿಸುವುದು ನನ್ನ ಗುರಿಯಾಗಿದ್ದು, ಒಳೇಟು ಏನು ಇಲ್ಲ ಎಂದು ಸಂಸದ ಪ್ರತಾಪ್ ಸಿಂಹ ಸ್ಪಷ್ಟಪಡಿಸಿದರು.

ಮೈಸೂರಿನ ಗ್ರೀನ್ ಹೆರಿಟೇಜ್ ಹೋಟೆಲ್‌ನಲ್ಲಿ ಇಂದು ಬಿಜೆಪಿ ಆಯೋಜಿಸಿದ್ದ ಮಾಧ್ಯಮ ಸಂವಾದದಲ್ಲಿ ಯದುವೀರ್ ಪಕ್ಕದಲ್ಲಿ ಕುಳಿತಿದ್ದ ಅವರು, ಮೈಸೂರು–ಕೊಡಗು ಜಿಲ್ಲೆಗಳಲ್ಲಿ ಜನಪರ ಕೆಲಸ ಮಾಡಿದ್ದೇನೆ. ಕಳೆದ ಬಾರಿ ಬಿಜೆಪಿ ನನಗೆ ಟಿಕೆಟ್ ನೀಡಿ ಗೆಲ್ಲಿಸಿತ್ತು. ಪಕ್ಷ ನನಗೆ ತಾಯಿ ಇದ್ದ ಹಾಗೆ, ಹೀಗಿರುವಾಗ ನಾನು ಒಳೇಟು ಹೊಡೆಯುವ ಪ್ರಶ್ನೆಯೇ ಇಲ್ಲ ಎಂದರು.

ಸಂಸದರಾಗಿ ಆಯ್ಕೆಯಾದರೆ ರಾಜ ಅರಮನೆ ಬಿಟ್ಟು ಹೊರಗೆ ಬಂದು ಜನರ ಪ್ರತಿನಿಧಿಯಾಗಿ ಕೆಲಸ ಮಾಡಬೇಕಾಗುತ್ತದೆ ಎಂದು ಯದುವೀರ್ ಅವರಿಗೆ ಉದ್ದೇಶಿಸಿ ಹೇಳಿರುವುದು ನಿಜ ಎಂದು ಸಮರ್ಥನೆ ಮಾಡಿಕೊಂಡ ಪ್ರತಾಪ್ ಸಿಂಹ, ರಾಜರಾಗಿ ನಾಡಿಗೆ ಪರಿಚಯವಾಗಿದ್ದರೂ ಅಭ್ಯರ್ಥಿಯಾಗಿ ಮನವರಿಕೆ ಮಾಡಿಕೊಡಬೇಕಿದೆ. ಈ ನಿಟ್ಟಿನಲ್ಲಿ ಯದುವೀರ್ ಎಲ್ಲರೊಡನೆ ಬೆರೆಯುತ್ತಿದ್ದಾರೆ ಎಂದರು. ಯದುವೀರ್ ಅವರಿಗೆ ಬಿಜೆಪಿ ಟಿಕೆಟ್ ಘೋಷಣೆ ಮಾಡುತ್ತಿದ್ದಂತೆ ಫೋನ್ ಮಾಡಿ ಅವರಿಗೆ ಶುಭಾಶಯ ತಿಳಿಸಿದೆ. ಬಿಜೆಪಿ ನಿಮಗೆ ಟಿಕೆಟ್ ನೀಡಿರುವ ಕಾರಣ ನಾನು ಚುನಾವಣಾ ಏಜೆಂಟ್ ಅಂತೆ ಕೆಲಸ ಮಾಡಿ ನಿಮ್ಮನ್ನು ಗೆಲ್ಲಿಸುತ್ತೇನೆ ಎಂದು ಭರವಸೆ ನೀಡಿದ್ದೇನೆ ಎಂದು ಪ್ರತಾಪ್ ಸಿಂಹ ಹೇಳಿದರು.

ಮಧು ಮಗನನ್ನು ಬಿಟ್ಟು ನನ್ನೆ ಕೇಳ್ತೀರಲ್ಲ...

ಯದುವೀರ್ ಮಾತಿನ ನಂತರ ಪ್ರತಾಪ್ ಸಿಂಹಗೆ ಪತ್ರಕರ್ತರು ಸರಣಿ ಪ್ರಶ್ನೆಗಳನ್ನು ಹಾಕಿದರು. ಸಾಮಾನ್ಯವಾಗಿ ಪತ್ರಕರ್ತರ ಪ್ರಶ್ನೆಗಳಿಗೆ ಖಡಕ್ ಉತ್ತರ ನೀಡುತ್ತಿದ್ದ ಪ್ರತಾಪ್ ಸಿಂಹ, ಇಂದು ಮಾತನಾಡಲು ಹಿಂದೆ ಮುಂದೆ ನೋಡಿದರು. ಬಿಜೆಪಿ ನಿಮಗೆ ಟಿಕೆಟ್ ನೀಡದಿರಲು ಕಾರಣವೇನು, ಕಾಂಗ್ರೆಸ್ ಸೇರಲು ಆಹ್ವಾನ ಬಂದಿತ್ತೆ... ಎಂದು ಕೇಳಿದ್ದಕ್ಕೆ ಮಧು ಮಗನ(ಯದುವೀರ್) ಬಿಟ್ಟು ನನ್ನೆ ಎಲ್ಲಾ ಕೇಳುತ್ತಿದ್ದೀರಲ್ಲ ಎಂದು ಹಾಸ್ಯ ಚಟಾಕಿ ಹಾರಿಸಿದರು.

ಇಷ್ಟೆಲ್ಲಾ ಜನಪರ ಕೆಲಸ ಮಾಡಿರುವ ನಿಮಗೆ ಬಿಜೆಪಿ ಟಿಕೆಟ್ ನೀಡದಿರುವುದಕ್ಕೆ ಕಾರಣವೇನು ಎಂಬ ಪ್ರಶ್ನೆಗೆ, 2014 ರಲ್ಲಿ ಟಿಕೆಟ್ ಕೊಟ್ಟಾಗ ಯಾವ ಕಾರಣಕ್ಕೆ ಟಿಕೆಟ್ ನೀಡಲಾಗಿದೆ ಎಂದು ಬಿಜೆಪಿ ಹೇಳಲಿಲ್ಲ. ಹಾಗೆಯೇ ಈಗ ಯಾವ ಕಾರಣಕ್ಕೆ ಟಿಕೆಟ್ ನೀಡಿಲ್ಲ ಎಂದು ತಿಳಿಸಿಲ್ಲ. ಯಾವ ಕಾರಣದಿಂದ ಟಿಕೆಟ್ ನೀಡಿಲ್ಲವೆಂದು ನಾನು ಕೂಡ ಕೇಳಿಲ್ಲ ಎಂದು ತಿಳಿಸಿದರು.

ಈಗ ಪಕ್ಷ ಸಂಘಟನೆಯ ಜವಾಬ್ದಾರಿ ನೀಡಿದೆ. ಅದರಂತೆ ಯದುವೀರ್ ಗೆಲ್ಲಿಸಲು ಬ್ಯಾನರ್, ಬಂಟಿಂಗ್ಸ್ ಕಟ್ಟುತ್ತೇನೆ. ಪಕ್ಷಕ್ಕೆ ನಿಷ್ಠನಾಗಿ ಕೆಲಸ ಮಾಡುವೆ. ಆದರೆ ಎಂದಿಗೂ ಒಳೇಟು ಹೊಡೆಯುವುದಿಲ್ಲ, ಇದರ ಅವಶ್ಯಕತೆಯೂ ನನಗಿಲ್ಲ ಎಂದು ಪ್ರತಾಪ್ ಸಿಂಹ ಪುನರ್ ಸ್ಪಷ್ಟಪಡಿಸಿದರು. ಬಿಜೆಪಿ ಟಿಕೆಟ್ ವಂಚಿತರಾಗಿರುವ ನಿಮಗೆ ಕಾಂಗ್ರೆಸ್ ಏನಾದರೂ ಟಿಕೆಟ್ ನೀಡುವುದಾಗಿ ಹೇಳಿದೆಯೇ ಎಂಬ ಪ್ರಶ್ನೆಗೆ ಪ್ರತಾಪ್ ಸಿಂಹ ಹಾರಿಕೆ ಉತ್ತರ ನೀಡಿದರು. ಈ ಪ್ರಶ್ನೆ ಈಗ ಅಪ್ರಸ್ತುತವಾಗಿದ್ದು, ಯದುವೀರ್ ಗೆಲ್ಲಿಸುವುದು ಮಾತ್ರ ನನ್ನ ಗುರಿ. ಇದು ನನ್ನ ಮನಸಿನ ಮಾತು ಎಂದು ಹೇಳಿದರು. ಈಗ ದೇಶಕ್ಕೆ ನರೇಂದ್ರ ಮೋದಿ ಬೇಕು. ಮೋದಿ ಪರವಾಗಿ ಕೈ ಎತ್ತಲು ಮೈಸೂರಿನಿಂದ ಒಬ್ಬ ಪ್ರತಿನಿಧಿ ಬೇಕು. ಇದಷ್ಟೆ ಮುಖ್ಯವಾಗಿದ್ದು, ಬೇರೆ ಪ್ರಶ್ನೆಗಳು ಈಗ ಪ್ರಸ್ತುತವಲ್ಲ. ಕಾಂಗ್ರೆಸ್ ಆಹ್ವಾನದ ಬಗ್ಗೆ ಹೌದು ಅಥವಾ ಇಲ್ಲ ಎನ್ನದೆ ಅಡ್ಡ ಗೋಡೆ ಮೇಲೆ ದೀಪ ಇಟ್ಟಂತೆ ಹೇಳಿದರು.

ಮಂಡ್ಯದಲ್ಲಿ 99 ಲಕ್ಷ ವಶ

ಕೊಳ್ಳಲಾಗಿದೆ. ಭಾನುವಾರದವರೆಗೆ 15.34 ಕೋಟಿ ಮೌಲ್ಯದ 4.93 ಲಕ್ಷ ಲೀಟರ್ ಮದ್ಯ ವಶಕ್ಕೆ ಪಡೆಯಲಾಗಿತ್ತು. ಭಾನುವಾರದಿಂದ ಸೋಮವಾರದವರೆಗೆ 15.37 ಕೋಟಿ ಮೌಲ್ಯದ 4.94 ಲಕ್ಷ ಲೀಟರ್ ಮದ್ಯ ವಶಪಡಿಸಿಕೊಳ್ಳಲಾಗಿದೆ. ಇದರಲ್ಲಿ ಚಾಮರಾಜನಗರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲೇ ಚುನಾವಣಾ ಅಕ್ರಮದ 14.07 ಕೋಟಿ ಮೌಲ್ಯದ ಮದ್ಯ ವಶಕ್ಕೆ ಪಡೆಯಲಾಗಿದೆ ಎಂದು ರಾಜ್ಯದ ಮುಖ್ಯ ಚುನಾ ವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದ್ದಾರೆ.

ಚಾಮರಾಜನಗರ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರುವ ಮೈಸೂರು ಜಿಲ್ಲೆಯ ಆನೆ ಹೊಸೂರ್ ಬುಷ್ ಇನ್ವೆವ್ ಇಂಡಿಯಾ ಲಿಮಿಟೆಡ್‌ನಿಂದ ಅಬಕಾರಿ ಅಧಿಕಾರಿಗಳ ಅನುಪಸ್ಥಿತಿಯಲ್ಲಿ ಉಗ್ರಾಣಗಳಿಗೆ ಸಾಗಿಸುತ್ತಿದ್ದ 7.84 ಕೋಟಿ ಮೌಲ್ಯದ 3.35 ಲಕ್ಷ ಲೀಟರ್ ಬಿಯರ್ ಹಾಗೂ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಯುನೈಟೆಡ್ ಸ್ಪಿರಿಟ್ಸ್‌ನ ಉಪ ಗುತ್ತಿಗೆ ಹೊಂದಿರುವ ಕೆಬಿಡಿ ಶುಗರ್ಸ್‌ನ ಬಾಟ್ಲಿಂಗ್ ಘಟಕದಲ್ಲಿ ದಾಸ್ತಾನು ಮಾಡಿದ್ದ 6.23 ಕೋಟಿ ಮೌಲ್ಯದ 1.26 ಲಕ್ಷ ಲೀಟರ್ ಮದ್ಯವನ್ನು ಅಬಕಾರಿ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ ಎಂದು ಅವರು ಮಾಹಿತಿ ನೀಡಿದ್ದಾರೆ. ಪೊಲೀಸರು, ಚುನಾವಣಾ ಕಾರ್ಯಪಡೆಗಳು ಮತ್ತು ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ರಾಜ್ಯದ ವಿವಿಧೆಡೆ 24 ಗಂಟೆಗಳ ಅವಧಿಯಲ್ಲಿ 45.76 ಲಕ್ಷ ನಗದು ವಶಪಡಿಸಿಕೊಂಡಿದ್ದಾರೆ. ಅಲ್ಲದೆ 5.66 ಲಕ್ಷ ಮೌಲ್ಯದ 7.3 ಕೆ.ಜಿ. ಮಾದಕ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ರಾಜ್ಯಾದ್ಯಂತ 87,212 ಬ್ಯಾನರ್, ಪೋಸ್ಟರ್ ಮತ್ತು ಗೋಡೆ ಬರಹಗಳನ್ನು ತೆರವುಗೊಳಿಸಲಾಗಿದೆ. ಇದರೊಂದಿಗೆ ತೆರವುಗೊಳಿಸಲಾದ ಬ್ಯಾನರ್, ಪೋಸ್ಟರ್ ಮತ್ತು ಗೋಡೆ ಬರಹಗಳ ಸಂಖ್ಯೆ 1.34 ಲಕ್ಷವಾಗಿದೆ ಎಂದು ತಿಳಿಸಿದ್ದಾರೆ.

ಬಿಜೆಪಿ ಟಿಕೆಟ್ ವಂಚಿತ ಸದಾನಂದಗೌಡರಿಗೆ ಕಾಂಗ್ರೆಸ್ ಗಾಳ

ಮೈಸೂರು–ಕೊಡಗು ಕ್ಷೇತ್ರದಲ್ಲಿ ಸ್ಪರ್ಧಿಸುವಂತೆ ಆಹ್ವಾನ?

- ಸದಾನಂದಗೌಡರಿಗೆ 72 ನೇ ಹುಟ್ಟುಹಬ್ಬ
- ಶುಭಾಶಯ ಕೋರುವ ನೆಪದಲ್ಲಿ ಕಾಂಗ್ರೆಸ್ ನಾಯಕರ ಭೇಟಿ
- ಮೈಸೂರಿನಲ್ಲಿ ಕಾಂಗ್ರೆಸ್ ರಣತಂತ್ರ; ಗೌಡರಿಂದ ಕಾದು ನೋಡುವ ತಂತ್ರ



ಮೈಸೂರು, ಮಾ.18(ಬಿಎಲ್‌ಯು)– ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಟಿಕೆಟ್ ವಂಚಿತರಾಗಿರುವ ಮಾಜಿ ಮುಖ್ಯಮಂತ್ರಿ ಸದಾನಂದ ಗೌಡರು, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಲಿದ್ದಾರೆ ಎಂಬ ವಿಚಾರ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಬೆಂಗಳೂರು ಉತ್ತು ಲೋಕಸಭಾ ಕ್ಷೇತ್ರದಲ್ಲಿ ಶೋಭಾ ಕರಂದ್ಲಾಜೆಗೆ ಟಿಕೆಟ್ ನೀಡಿರುವ ಕಾರಣ ಸಹಜವಾಗಿಯೇ ಸದಾನಂದ ಗೌಡರು ಅಸಮಾಧಾನಗೊಂಡಿದ್ದಾರೆ.

ಬೆಂಗಳೂರು ಉತ್ತರ ಬಿಟ್ಟರೆ ಸದಾನಂದಗೌಡರಿಗೆ ಉಡುಪಿ–ಚಿಕ್ಕಮಗಳೂರು ಹಾಗೂ ದಕ್ಷಿಣ ಕನ್ನಡ (ಮಂಗಳೂರು) ಲೋಕಸಭಾ ಕ್ಷೇತ್ರದಲ್ಲಿ ಹಿಡಿತವಿದೆ. ಆದರೆ ಆ ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿ ಘೋಷಿಸಿದೆ. ಈ ಮಧ್ಯೆ ಕಾಂಗ್ರೆಸ್ ಗಾಳ ಹಾಕಿದೆ ಎಂದು ತಿಳಿದು ಬಂದಿದೆ.

ಇಂದು ಸದಾನಂದಗೌಡರು 72 ನೇ ವರ್ಷಕ್ಕೆ ಕಾಲಿಟ್ಟಿದ್ದಾರೆ. ಹುಟ್ಟುಹಬ್ಬಕ್ಕೆ ಶುಭಾಶಯ ಕೋರುವ ನೆಪದಲ್ಲಿ ಕೆಲವು ಕಾಂಗ್ರೆಸ್ ಮುಖಂಡರು ಸದಾನಂದಗೌಡರನ್ನು ಭೇಟಿ ಮಾಡಿ ಪಕ್ಷಕ್ಕೆ ಆಹ್ವಾನ ನೀಡಿದ್ದಾರೆ.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಯದುವೀರ್ ಒಡೆಯರ್ ಅವರಿಗೆ ಟಿಕೆಟ್ ನೀಡಿದೆ. ಸದ್ಯ ಕಾಂಗ್ರೆಸ್, ಯದು ವೀರ್‌ಗೆ ಪೈಪೋಟಿ ನೀಡುವ ಸಮರ್ಥ ಅಭ್ಯರ್ಥಿ ಹುಡುಕಾಟದಲ್ಲಿದೆ. ಇಂತಹ ಸಂದರ್ಭದಲ್ಲಿ ಸದಾನಂದಗೌಡರಿಗೆ ಟಿಕೆಟ್ ಕೊಟ್ಟರೆ ಕಾಂಗ್ರೆಸ್‌ಗೆ ಲಾಭವಾಗಬಹುದು ಎಂಬುದು ಕಾಂಗ್ರೆಸ್ ಲೆಕ್ಕಾಚಾರ.

ಸದಾನಂದಗೌಡರು ಒಕ್ಕಲಿಗ ಸಮುದಾಯದವರಾಗಿದ್ದು, ಇನ್ನು ಸದಾನಂದಗೌಡರ ಪತ್ನಿ ಡಾಟಿ ಮೂಲತಃ ಕೊಡಗು ಜಿಲ್ಲೆಯವರು. ಮುಖ್ಯಮಂತ್ರಿ ಆಗಿದ್ದ ಸದಾನಂದಗೌಡರು ಮೈಸೂರು ಹಾಗೂ ಕೊಡಗು ಜಿಲ್ಲೆಗೆ ಪರಿಚಿತರು. ಇನ್ನು ಕಾಂಗ್ರೆಸ್‌ಗೆ ಅದರದೆ ಆದ ಸಾಂಪ್ರದಾಯಿಕ ಮತಗಳಿವೆ. ಈ ಎಲ್ಲಾ ಸಮೀಕರಣದಿಂದ ಸದಾನಂದಗೌಡರು ಗೆಲ್ಲುತ್ತಾರೆ ಎಂದು ಲೆಕ್ಕಾಚಾರ ಹಾಕಿರುವ ಕಾಂಗ್ರೆಸ್ ಟಿಕೆಟ್ ನೀಡುವುದಾಗಿ ಸದಾನಂದಗೌಡರ ಆಹ್ವಾನಿಸಿದೆ.

ಮೈಸೂರು, ಕೊಡಗಿನಂತೆ ಬೆಂಗಳೂರು ಉತ್ತರ ಹಾಗೂ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಲ್ಲಿ ಕೂಡ ಕಾಂಗ್ರೆಸ್‌ಗೆ ಸಮರ್ಥ ಅಭ್ಯರ್ಥಿಗಳಿಲ್ಲ. ಬೆಂಗಳೂರು ಉತ್ತರದಲ್ಲಿ ಸ್ಪರ್ಧೆ ಮಾಡಲು ಕೃಷ್ಣಭೈರೇಗೌಡ ನಿರಾಕರಿಸಿದ್ದಾರೆ. ಈ ಕಾರಣದಿಂದ ಮೈಸೂರು–ಕೊಡಗು ಸಾಧ್ಯವಾಗಲಿಲ್ಲವೆಂದರೆ ನೀವು ಪ್ರತಿನಿಧಿಸುತ್ತಿರುವ ಬೆಂಗಳೂರು ಉತ್ತರ, ತಪ್ಪಿದರೆ ಚಿಕ್ಕಬಳ್ಳಾಪುರದಿಂದ ಸ್ಪರ್ಧೆ ಮಾಡಿ ಎಂದು ಕಾಂಗ್ರೆಸ್ ಸದಾನಂದಗೌಡರಿಗೆ ಆಯ್ಕೆ ಮುಂದಿಟ್ಟಿದೆಯಂತೆ.

ಸದಾನಂದಗೌಡರ ಹುಟ್ಟುಹಬ್ಬದ ದಿನವಾದ ಇಂದು ಬೆಳಿಗ್ಗೆ ನಡೆದಿರುವ ದಿಢೀರ್ ರಾಜಕೀಯ ಬೆಳವಣಿಗೆಯಾಗಿದ್ದು, ಗೌಡರು ಕಾದು ನೋಡುವ ತಂತ್ರ ಅನುಸರಿಸಿದ್ದಾರೆ.

ಮೈಸೂರು–ಕೊಡಗು, ಬೆಂಗಳೂರು ಉತ್ತರ ಅಥವಾ ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ನನ್ನ ಗೆಲುವಿಗೆ ಯಾವುದು ಸೂಕ್ತ ಎಂಬ ಲೆಕ್ಕಾಚಾರದಲ್ಲಿ ಸದಾನಂದಗೌಡರು ತೊಡಗಿದ್ದಾರೆ.

ಈ ತನಕ ಬಿಜೆಪಿಯಲ್ಲೇ ಇದ್ದು ಸಂಘ ಪರಿವಾರದ ಜೊತೆ ಗುರುತಿಸಿಕೊಂಡಿರುವ ತಮಗೆ ಕಾಂಗ್ರೆಸ್ ಸಂಸ್ಕೃತಿ ಒಗ್ಗುವುದೇ ಎಂದು ಸದಾನಂದಗೌಡರು ಯೋಚನೆ ಮಾಡುತ್ತಿದ್ದಾರೆ ಎಂದು ತಿಳಿದು ಬಂದಿದೆ. ಈಗಾಗಲೇ ಬಿಜೆಪಿ ಬಿಟ್ಟು ಕಾಂಗ್ರೆಸ್ ಸೇರಿದ್ದ ಜಗದೀಶ್ ಶೆಟ್ಟರ್ ಮತ್ತೆ ತವರು ಪಕ್ಷಕ್ಕೆ ಮರಳಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಸೇರುವುದು ಎಷ್ಟರ ಮಟ್ಟಿಗೆ ಸರಿ ಎಂಬ ಪ್ರಶ್ನೆ ಸದಾನಂದಗೌಡರನ್ನು ಕಾಡುತ್ತಿದೆ ಎನ್ನಲಾಗಿದೆ.

ಕಳೆದ ಎರಡು ದಿನದ ಹಿಂದೆ ಶೋಭಾ ಕರಂದ್ಲಾಜೆ ಸೇರಿದಂತೆ ಕೆಲವು ಬಿಜೆಪಿ ನಾಯಕರು ಸದಾನಂದಗೌಡರನ್ನು ಭೇಟಿ ಮಾಡಿ ಸಮಾಧಾನಪಡಿಸಿದ್ದಾರೆ. ಯಾವುದೇ ದುಡುಕಿನ ನಿರ್ಧಾರ ತೆಗೆದುಕೊಳ್ಳಬೇಡಿ ಎಂದು ಸಲಹೆ ನೀಡಿದ್ದಾರೆ ಎಂದು ತಿಳಿದು ಬಂದಿದೆ.

ಸಿಟ್ಟಾದ ಸದಾನಂದಗೌಡರು

ಕಾಂಗ್ರೆಸ್ ಸೇರುವ ಸಂಬಂಧಿತ ಸುದ್ದಿಯ ಬಗ್ಗೆ ಪ್ರತಿಕ್ರಿಯೆ ನೀಡಲು ಸದಾನಂದಗೌಡರು ನಿರಾಕರಿಸಿದರು, ಮಾತ್ರವಲ್ಲ ಸಿಟ್ಟಾದರು.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧೆ ಸುದ್ದಿ ಬಗ್ಗೆ 'ಮೈಸೂರು ಮಿತ್ರ' ಸಂಪರ್ಕಿಸಿದಾಗ, ನಾನು ಕಾಂಗ್ರೆಸ್ ಸೇರುತ್ತಿದ್ದೇನೆ, ಮೈಸೂರಿನಿಂದ ಸ್ಪರ್ಧೆ ಮಾಡುತ್ತಿದ್ದೇನೆ ಎಂದು ನಿಮಗೆ ಹೇಳಿದವರು ಯಾರು ಎಂದು ಖಾರವಾಗಿ ಪ್ರಶ್ನಿಸಿದರು. ನೀವು ಕಾಂಗ್ರೆಸ್ ಸೇರುತ್ತೀರೆಂಬ ಬಗ್ಗೆ ಸುದ್ದಿ ಹರಿದಾಡುತ್ತಿದೆಯಲ್ಲ ಎಂಬ ಪ್ರಶ್ನೆಗೆ, ಸುದ್ದಿ ಮಾಡಲೇ ಮಾಧ್ಯಮಗಳು ಇರುವುದು. ಹಾಗೆಯೇ ಇಂತಹ ಸುದ್ದಿಗಳಾಗುತ್ತಿದೆ ಅಷ್ಟೆ ಎಂದು ಕರೆ ಕಡಿತಮಾಡಿದರು.

ಮೈಸೂರು ಜಿಲ್ಲೆಯಲ್ಲಿ 1994 ಶತಾಯುಷಿ ಮತದಾರರು

ಮೈಸೂರು, ಮಾ. 18(ಆರ್‌ಕೆ)– ಮೈಸೂರು ಜಿಲ್ಲೆಯಲ್ಲಿ 1,245 ಮಹಿಳೆಯರು ಸೇರಿದಂತೆ ಒಟ್ಟು 1,994 ಶತಾಯುಷಿಗಳು 2024ರ ಲೋಕಸಭಾ ಚುನಾವಣೆಯಲ್ಲಿ ಮತದಾನ ಮಾಡಲಿದ್ದಾರೆ.



ಅದೇ ರೀತಿ 85ರಿಂದ 99 ವರ್ಷದ 23,075 ಮಹಿಳೆಯರು ಸೇರಿ ಒಟ್ಟು 41,617 ಮಂದಿ ವೃದ್ಧರೂ ಸಹ ತಮ್ಮ ಹಕ್ಕು ಚಲಾಯಿಸಲಿದ್ದು, ಜಿಲ್ಲಾಡಳಿತದಿಂದ ಶತಾಯುಷಿಗಳು ಮತ್ತು ವೃದ್ಧರು ಮನೆಯಲ್ಲೇ ಮತದಾನ ಮಾಡುವ ವ್ಯವಸ್ಥೆ ಮಾಡಲಾಗುವುದು ಎಂದು ಜಿಲ್ಲಾ ಚುನಾವಣಾಧಿಕಾರಿ ಡಾ. ಕೆ.ವಿ. ರಾಜೇಂದ್ರ ತಿಳಿಸಿದ್ದಾರೆ.

ಶತಾಯುಷಿಗಳು ಹಾಗೂ ವೃದ್ಧರು ವಯೋಸಹಜ ಆರೋಗ್ಯ ಸಮಸ್ಯೆಯಿಂದಾಗಿ ಮತಗಟ್ಟೆಗೆ ಬಂದು ಮತ ಚಲಾಯಿಸಲು ಸಾಧ್ಯವಾಗದ ಕಾರಣ ನಿಯೋಜಿತ ಅಧಿಕಾರಿಗಳು ಹಾಗೂ ಸಿಬ್ಬಂದಿ ಅವರ ಮನೆಗಳಿಗೆ ತೆರಳಿ ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮಾರ್ಗಸೂಚಿಯನ್ವಯ ಮತ ಹಾಕಿಸಿಕೊಂಡು ಬಂದು ಜಿಲ್ಲಾ ಚುನಾವಣಾಧಿಕಾರಿಗಳಿಗೆ ವರದಿ ನೀಡುವರು.

ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ 164, ಕೆಆರ್‌ನಲ್ಲಿ 208, ಎನ್‌ಆರ್‌ನಲ್ಲಿ 76, ಚಾಮುಂಡೇಶ್ವರಿಯಲ್ಲಿ 197, ನಂಜನಗೂಡಿನಲ್ಲಿ 191, ಹೆಚ್.ಡಿ.ಕೋಟೆಯಲ್ಲಿ 240, ಹುಣಸೂರಲ್ಲಿ 230, ಪಿರಿಯಾಪಟ್ಟಣದಲ್ಲಿ 131, ಕೆ.ಆರ್.ನಗರದಲ್ಲಿ 156, ವರುಣದಲ್ಲಿ 216 ಹಾಗೂ ತಿ.ನರಸೀಪುರ ಕ್ಷೇತ್ರದಲ್ಲಿ 185 ಸೇರಿ ಜಿಲ್ಲೆಯಲ್ಲಿ ಒಟ್ಟು 1,994 ಮಂದಿ ಶತಾಯುಷಿಗಳಿದ್ದಾರೆ.

85ರಿಂದ 99 ವರ್ಷದೊಳಗಿನ ಮತದಾರರ ಪೈಕಿ ಚಾಮರಾಜದಲ್ಲಿ 4,708, ಕೆ.ಆರ್.ನಲ್ಲಿ 5,880, ಎನ್‌ಆರ್‌ನಲ್ಲಿ 2,857, ಚಾಮುಂಡೇಶ್ವರಿ 4,409, ನಂಜನಗೂಡು 3,671, ಹೆಚ್.ಡಿ.ಕೋಟೆ 3,473, ಹುಣಸೂರು 3,698, ಪಿರಿಯಾಪಟ್ಟಣ 2,664, ಕೆಆರ್ ನಗರ 3,551, ವರುಣ 3,565 ಹಾಗೂ ತಿ.ನರಸೀಪುರದಲ್ಲಿ 3,141 ಮಂದಿ ಲೋಕಸಭಾ ಚುನಾವಣೆಯಲ್ಲಿ ಮತ ಚಲಾಯಿಸಲು ಗುರ್ತಿಸಲಾಗಿದೆ.

ವೃದ್ಧರು ಹಾಗೂ ಅಂಗವಿಕಲ ಮತದಾರರ ಮನೆಗಳಿಗೇ ಹೋಗಿ ಮತ ಚಲಾಯಿಸಿಕೊಂಡು ಬರಬೇಕೆಂದು ಭಾರತ ಚುನಾವಣಾ ಆಯೋಗವು ನಿರ್ದೇಶನ ನೀಡಿರುವುದರಿಂದ ಈಗಾಗಲೇ ಜಿಲ್ಲಾಡಳಿತವು ಜಿಲ್ಲೆಯಾದ್ಯಂತ ಅಂತಹ ಮತದಾರರನ್ನು ಗುರ್ತಿಸಿ ಮತದಾನ ಮಾಡಿಕೊಳ್ಳಲು ಸಿದ್ಧತೆ ನಡೆಸಿದೆ.



ಮೈಸೂರಿನ ಪಡುವಾರಹಳ್ಳಿಯಲ್ಲಿ ಇತ್ತೀಚೆಗೆ ನಿಧನರಾದ ಮಾಜಿ ಶಾಸಕ ವಾಸು ಅವರ ಭಾವಚಿತ್ರದ ಮುಂದೆ ಕ್ಯಾಂಡಲ್ ಹಚ್ಚುವ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ವೇಳೆ ಯಜಮಾನ ಬಾಯಪ್ಪನವರ ತಿಮ್ಮಯ್ಯ, ಮುಖಂಡ ಮಹದೇವಸ್ವಾಮಿ, ಗಣಪತಿ ದೇವಾಲಯದ ಅಧ್ಯಕ್ಷ ರಾಮಚಂದ್ರ, ವಿಕ್ರಾಂತ್ ನಾಗಣ್ಣ, ಶಿವು, ಮಂಜಪ್ಪ, ಜನತಾ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕರು, ಯುವಕರು ಹಾಗೂ ಇನ್ನಿತರರಿದ್ದರು.

ಮೊಹಮ್ಮದ್ ಅಕ್ಮಲ್ ಕೊಲೆ ಪ್ರಕರಣ

ಕೆಎಂಡಿಸಿ ಅಧ್ಯಕ್ಷ ಅಲ್ತಾಫ್ ಖಾನ್ ಬಂಧಿಸುವಲ್ಲಿ ಪೊಲೀಸರ ನಿರ್ಲಕ್ಷ್ಯ

ಹತ್ಯೆಗೀಡಾದ ಅಕ್ಮಲ್ ಸಹೋದರ ಆರೋಪ

ಮೈಸೂರು,ಮಾ.18(ಎಂಟಿವೈ)– ರಾಜೀವ್‌ನಗರದಲ್ಲಿ ಇತ್ತೀಚೆಗೆ ನಡೆದ ಮುಸ್ಲಿಂ ಧರ್ಮಗುರು ಮೊಹಮದ್ ಅಕ್ಮಲ್ ಕೊಲೆ ಪ್ರಕರಣದ ಆರೋಪಿಯಾಗಿರುವ ಕೆಎಂಡಿಸಿ ಅಧ್ಯಕ್ಷ ಬಿ.ಕೆ.ಅಲ್ತಾಫ್ ಖಾನ್ ಅವರನ್ನು ಪೊಲೀಸರು ಬಂಧಿಸದೇ ನಿರ್ಲಕ್ಷಿಸುತ್ತಿದ್ದಾರೆ ಎಂದು ಮೃತರ ಸಹೋದರ ಸಿರಾಜ್ ಪಾಷ ಆರೋಪಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊಲೆಯಾಗುವ ಮೊದಲು ಮೊಹಮದ್ ಅಕ್ಮಲ್ ಅವರಿಗೆ ಬಿ.ಕೆ.ಅಲ್ತಾಫ್ ಸಾರ್ವಜನಿಕರ ಸಮ್ಮುಖದಲ್ಲಿಯೇ ಕೊಲೆ ಬೆದರಿಕೆ ಹಾಕಿದ್ದರು. ಇದಕ್ಕೆ ಸಂಬಂಧಿಸಿದ ವಿಡಿಯೋಗಳು ಇದ್ದರೂ ಸರ್ಕಾರವೇ ಕೊಲೆ ಆರೋಪಿಗಳನ್ನು ರಕ್ಷಿಸುತ್ತಿದೆ. ಮೊಹಮದ್ ಅಕ್ಮಲ್ ಪಾಷ ಸಾಮಾಜಿಕ ಕಾರ್ಯಕರ್ತರಾಗಿದ್ದರು. ಯಾರೇ ತಪ್ಪು ಮಾಡಿದರು ಖಂಡಿಸುತ್ತಿದ್ದರು. ಅಲ್ತಾಫ್ ಮೈಸೂರಿಗೆ ಮಾ.6ರಂದು ಭೇಟಿ ನೀಡಿದ ವೇಳೆ ವಿವಿಧೆಡೆ ಹಾಕಿದ್ದ ಫ್ಲೆಕ್ಸ್ ಮತ್ತು ಬ್ಯಾನರ್‌ಗಳ ಬಗ್ಗೆ ಟೀಕೆ ಮಾಡಿದ್ದರು. ಇದೇ ಅವರ ಕೊಲೆಗೆ ಕಾರಣವಾಗಿದೆ. ಅಲ್ತಾಫ್ ಖಾನ್ ರಾಜಕೀಯವಾಗಿ ಪ್ರಭಾವಿಯಾಗಿರುವ ಕಾರಣ ಬಂಧಿಸುತ್ತಿಲ್ಲ. ಹೀಗಾಗಿ ಸಂಬಂಧಿಸಿದವರು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮೃತರ ಇನ್ನಿತರ ಸಹೋದರರಾದ ನಯಾಜ್ ಪಾಷ, ಮೊಹಮದ್ ಆದಿಲ್, ಮೊಹಮದ್ ಅಜಲ್, ಇಲಿಯಾಸ್ ಪಾಷ ಇದ್ದರು

ನಾಳೆ ರೇರಾ ಕುರಿತು ವಿಚಾರ ಸಂಕಿರಣ

ಮೈಸೂರು,ಮಾ.18(ಎಂಟಿವೈ)– ರಿಯಲ್ ಎಸ್ಟೇಟ್ ಕ್ಷೇತ್ರದ ಪ್ರಮುಖ ಶಾಸನ 'ರೇರಾ' ಕುರಿತಂತೆ ಮಾಹಿತಿ ನೀಡಲು ಮಾ.20 ರಂದು ಸಂಜೆ 6.30ಕ್ಕೆ ನಗರದ ಹೆಬ್ಬಾಳ್ ಪ್ರದೇಶದಲ್ಲಿನ ನಾರ್ಥ್ ಅವೆನ್ಯೂ ಮೈಸೂರು ಯೂನಿಯನ್ ಸಭಾಂಗಣದಲ್ಲಿ ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ರಾಷ್ಟ್ರೀಯ ರಿಯಲ್ ಎಸ್ಟೇಟ್ ಅಭಿವೃದ್ಧಿ ಮಂಡಳಿ(ನರೆಡ್ಕೋ) ಅಧ್ಯಕ್ಷ ವಿ.ಸಿ.ರವಿಕುಮಾರ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೇರಾದಲ್ಲಿರುವ ಅನೇಕ ನಿಯಮಗಳ ಬಗ್ಗೆ ಬಿಲ್ಡರ್ಸ್ ಹಾಗೂ ನಿರ್ಮಾಣ ಕ್ಷೇತ್ರದಲ್ಲಿ ತೊಡಗಿರುವವರಿಗೆ ಅರಿವು ಮೂಡಿಸುವ ಉದ್ದೇಶದಿಂದ ಈ ವಿಚಾರ ಸಂಕಿರಣ ಆಯೋಜಿಸಲಾಗಿದೆ. ಈ ವಿಚಾರ ಸಂಕಿರಣದಲ್ಲಿ ನರೆಡ್ಕೋ ಕಾನೂನು ಸಮಿತಿ ಅಧ್ಯಕ್ಷ ಧೀರೇಂದ್ರ ಕುಮಾರ್ ಮೆಹ್ತಾ, ಟಿ.ಜಿ. ಆದೇಶನ್ ಗೌಡ, ಪಿ.ವಿನಯ್‌ಕುಮಾರ್, ರಾಘವೇಂದ್ರ ಪ್ರಸಾದ್, ಎ.ಪಿ. ನಾಗೇಶ್ ಇನ್ನಿತರರು ಸಹ ಮಾಹಿತಿ ನೀಡಲಿದ್ದಾರೆ. ಕೆ.ಮಂಜು ಹಾಗೂ ಎಸ್.ಫಣಿರಾಜ್ ಉಪಸ್ಥಿತರಿರುವರು. ಡೆವಲಪರ್‌ಗಳಿಗೆ ರೇರಾ ತತ್ವ ಮತ್ತು ನಿಯಮಗಳ ಸಮಗ್ರ ಮಾಹಿತಿ, ನಿಯಂತ್ರಕ ಮಾರ್ಗಸೂಚಿ, ಉತ್ತಮ ಅನುಸರಣೆಗಳನ್ನು ತಜ್ಞ ಶಿವರುದ್ರಪ್ಪ ವಿವರಿಸಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಡಾ.ಧೀರೇಂದ್ರ ಕುಮಾರ್ ಮೆಹ್ತಾ, ಎ.ಪಿ.ನಾಗೇಶ್, ಎಸ್.ಫಣಿರಾಜ್ ಇದ್ದರು.

ಗಣಪತಿ ಸಚ್ಚಿದಾನಂದ ಶ್ರೀಗಳ ಆಶೀರ್ವಾದ ಪಡೆದ ಮೈಸೂರು–ಕೊಡಗು ಬಿಜೆಪಿ ಅಭ್ಯರ್ಥಿ ಯದುವೀರ್

ಮೈಸೂರು, ಮಾ.18(ಎಸ್‌ಬಿಡಿ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಅವರು ವಿವಿಧ ಮಠಾಧೀಶರ ಭೇಟಿಯಾಗುತ್ತಿದ್ದು, ಸೋಮವಾರ ಅವಧೂತ ದತ್ತ ಪೀಠಾಧಿಪತಿ ಶ್ರೀ ಗಣಪತಿ ಸಚ್ಚಿದಾನಂದ ಶ್ರೀಗಳನ್ನು ಭೇಟಿ ಮಾಡಿ, ಆಶೀರ್ವಾದ ಪಡೆದರು.

ಈ ವೇಳೆ ಶಾಸಕ ಶ್ರೀವತ್ಸ, ಮಾಜಿ ಶಾಸಕ ಎಸ್.ಎ.ರಾಮದಾಸ್, ಬಿಜೆಪಿ ಗ್ರಾಮಾಂತರ ಜಿಲ್ಲಾಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ, ನಗರ ಪ್ರಧಾನ ಕಾರ್ಯದರ್ಶಿಗಳಾದ ಕೇಬಲ್ ಮಹೇಶ್, ಬಿ.ಎಂ. ರಘು ಮತ್ತಿತರರು ಉಪಸ್ಥಿತರಿದ್ದರು.

ಮಂಗಳವಾರ ಸುತ್ತೂರು ಮಠಕ್ಕೆ: ಯದುವೀರ್ ಅವರು ಮಂಗಳವಾರ ಬೆಳಗ್ಗೆ 9ಕ್ಕೆ ಚಾಮುಂಡಿಬೆಟ್ಟ ತಪ್ಪಲಿನಲ್ಲಿನ ಸುತ್ತೂರು ಮಠಕ್ಕೆ ಭೇಟಿ ನೀಡಿ, ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಯವರನ್ನು ಭೇಟಿಯಾಗಿ, ಆಶೀರ್ವಾದ ಪಡೆಯಲಿದ್ದಾರೆ ಎಂದು ಬಿಜೆಪಿ ಮುಖಂಡ ಡಾ.ಕೆ.ವಸಂತ ಕುಮಾರ್ ತಿಳಿಸಿದ್ದಾರೆ.



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯನ್ನು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ ಬಿಜೆಪಿ ಅಭ್ಯರ್ಥಿ ಯದುವೀರ್ ಸೋಮವಾರ ಭೇಟಿ ಮಾಡಿ, ಆಶೀರ್ವಾದ ಪಡೆದರು.

ಸುತ್ತೂರು ಮಠಕ್ಕೆ ಭೇಟಿ ಸಂಬಂಧ ಸುದ್ದಿವಾಹಿನಿಗೆ ಪ್ರತಿಕ್ರಿಯಿಸಿರುವ ಯದುವೀರ್, ಗುರುಗಳು ಐದು ದಿನ ಪ್ರವಾಸದಲ್ಲಿದ್ದು, ಸೋಮವಾರ ರಾತ್ರಿ ಬರುವುದಾಗಿ ಮಠದವರು ತಿಳಿಸಿದ್ದಾರೆ. ಹಾಗಾಗಿ ನಾಳೆ ಮಠಕ್ಕೆ ಭೇಟಿ ನೀಡುತ್ತೇನೆ ಎಂದು ಸ್ಪಷ್ಟಪಡಿಸಿದ್ದಾರೆ.



ಮೈಸೂರು ಮಹಾರಾಣಿ ವಿಜ್ಞಾನ ಕಾಲೇಜು ಬಳಿ ಇನ್ನೋವಾ ಕಾರೊಂದು ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದ ಪರಿಣಾಮ ಕಂಬ ಮುರಿದು ಬೀಳುವ ಹಂತದಲ್ಲಿದೆ. ಅದೃಷ್ಟವಶಾತ್ ಚಾಲಕ ಸಣ್ಣ ಪುಟ್ಟ ಗಾಯಗಳಿಂದ ಪಾರಾಗಿದ್ದಾನೆ

ಮತದಾರರಲ್ಲಿ 'ನೈತಿಕ ಮತದಾನ' ಜಾಗೃತಿ ಮೂಡಿಸಲು ಜಿಪಂ ಸಿಇಓ ಸೂಚನೆ

ವಿವಿಧ ಇಲಾಖೆ ಅಧಿಕಾರಿಗಳೊಂದಿಗೆ ಮುಕ್ತ-ನ್ಯಾಯಸಮ್ಮತ ಚುನಾವಣೆ ಸಂಬಂಧ ಚರ್ಚೆ

ಮೈಸೂರು, ಮಾ.18(ಎಸ್‌ಬಿಡಿ)– ಜಿಲ್ಲೆಯಲ್ಲಿ ಪ್ರಜಾಪ್ರಭುತ್ವದ ಉತ್ಸವ ಸೃಷ್ಟಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗುವಂತೆ ಜಿಲ್ಲಾ ಸ್ವೀಪ್ ಸಮಿತಿ ನೋಡಲ್ ಅಧಿಕಾರಿಯೂ ಆದ ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಸಮಿತಿ ಅಧಿಕಾರಿಗಳಿಗೆ ಸೂಚನೆ ನೀಡಿದರು.



ಮೈಸೂರು ಜಿಲ್ಲಾ ಸ್ವೀಪ್ ಸಮಿತಿ ನೋಡಲ್ ಅಧಿಕಾರಿಯೂ ಆದ ಜಿಪಂ ಸಿಇಓ ಕೆ.ಎಂ.ಗಾಯತ್ರಿ ಸೋಮವಾರ ಅಧಿಕಾರಿಗಳ ಸಭೆ ನಡೆಸಿದರು.

ಸ್ವೀಪ್ ಸಮಿತಿ ಕಾರ್ಯಕ್ರಮ ರೂಪಿಸುವ ಸಂಬಂಧ ಜಿಪಂ ಸಭಾಂಗಣದಲ್ಲಿ ವಿವಿಧ ಇಲಾಖೆ ಅಧಿಕಾರಿಗಳೊಂದಿಗೆ ಸೋಮವಾರ ಸಭೆ ನಡೆಸಿದ ಅವರು, ಲೋಕಸಭಾ ಚುನಾವಣೆಯಲ್ಲಿ ಜಿಲ್ಲೆಯಲ್ಲಿ ಮತದಾನದ ಶೇಕಡವಾರು ಪ್ರಮಾಣ ಹೆಚ್ಚಿಸುವುದು ಹಾಗೂ ಮತದಾರರಲ್ಲಿ ನೈತಿಕ ಮತದಾನದ ಬಗ್ಗೆ ಜಾಗೃತಿ ಮೂಡಿಸಲು ವಿವಿಧ ಕಾರ್ಯಕ್ರಮಗಳನ್ನು ರೂಪಿಸುವಂತೆ ತಿಳಿಸಿದರು.


ಮತದಾರರ ನೋಂದಣಿಗೆ ಇನ್ನೂ ಅವಕಾಶವಿರುವುದರಿಂದ ವಿಶೇಷಚೇತನರು, ಹಿರಿಯ ನಾಗರಿಕರು, ತೃತೀಯಲಿಂಗಿಗಳು ಹಾಗೂ ವಲಸೆ ಕಾರ್ಮಿಕರು ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡಿಕೊಳ್ಳುವಂತೆ ಜಾಗೃತಿ ಮೂಡಿಸಬೇಕು. ಕಡಿಮೆ ಮತದಾನವಾಗಿರುವ ಮತಗಟ್ಟೆಗಳನ್ನು ಗುರುತಿಸಿ ಆ ಭಾಗದಲ್ಲಿ ಮತದಾನ ಪ್ರಮಾಣ ಹೆಚ್ಚಿಸಲು ಪರಿಣಾಮಕಾರಿಯಾದ ಯೋಜನೆಗಳನ್ನು ರೂಪಿಸಬೇಕು ಎಂದು ಸೂಚನೆ ನೀಡಿದರು.

ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು, ಎಲ್ಲಾ ಇಲಾಖೆಗಳು ಕೈಗೊಳ್ಳುವ ಸ್ವೀಪ್ ಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ಹೆಚ್ಚು ಪ್ರಚಾರ ಮಾಡಬೇಕು. ಮೈಸೂರು ಆಕಾಶವಾಣಿಯಲ್ಲಿ ಸಂದರ್ಶನ, ಕತೆ, ಹಾಡುಗಳ ಮೂಲಕ ಸಾರ್ವಜನಿಕರಿಗೆ ಮತದಾನದ ಮಹತ್ವ ತಿಳಿಸಿಕೊಡಬೇಕು. ಬಿಸಿಎಂ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಮತದಾನ ಕುರಿತ ರಸಪ್ರಶ್ನೆ, ಪ್ರಬಂಧ ಸ್ಪರ್ಧೆ ನಡೆಸುವ ಮೂಲಕ ಯುವ ಮತದಾರರು ಮತದಾನದಲ್ಲಿ ಹೆಚ್ಚು ಪಾಲ್ಗೊಳ್ಳುವಂತೆ ಜಾಗೃತಗೊಳಿಸಬೇಕು. ಹೆಚ್ಚು ಜನಸಂದಣಿ ಇರುವ ಸ್ಥಳದಲ್ಲಿ ಮತದಾನ ಕುರಿತ ಬೀದಿ ನಾಟಕ, ಕಿರು ನಾಟಕಗಳನ್ನು ಪ್ರದರ್ಶಿಸಬೇಕು ಎಂದು ಸಲಹೆ ನೀಡಿದರು.

ಘೋಷವಾಕ್ಯ: ಅಂಗನವಾಡಿ ಕಾರ್ಯಕರ್ತೆಯರ ಮೂಲಕ ಮನೆ ಮನೆಗೆ ತೆರಳಿ ಮತದಾನದ ಮಹತ್ವದ ಬಗ್ಗೆ ಅರಿವು ಮೂಡಿಸಬೇಕು. ಸಮಿತಿಯ ಎಲ್ಲಾ ಸದಸ್ಯರು ಪ್ರತಿನಿತ್ಯ ಸ್ವೀಪ್ ಚಟುವಟಿಕೆಗಳನ್ನು ಕೈಗೊಳ್ಳಬೇಕು. ಕಾರ್ಯಕ್ರಮಗಳನ್ನು ಆಲ್ಬಂ ಮಾಡಿಟ್ಟುಕೊಳ್ಳಬೇಕು. 'ಚುನಾವಣಾ ಪರ್ವ ದೇಶದ ಗರ್ವ', 'ಯಾವೊಬ್ಬ ಮತದಾರನೂ ಮತದಾನದಿಂದ ಹೊರಗುಳಿಯಬಾರದು', 'ಮತದಾನಕ್ಕಿಂತ ಇನ್ನೊಂದಿಲ್ಲ, ನಾನು ಖಚಿತವಾಗಿ ಮತದಾನ ಮಾಡುವೆ' ಘೋಷವಾಕ್ಯದೊಂದಿಗೆ ಮತದಾರರಲ್ಲಿ ಜಾಗೃತಿ ಮೂಡಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ಶುಭ, ಕೇಂದ್ರ ಪ್ರಚಾರ ಇಲಾಖೆ ಉಪನಿರ್ದೇಶಕಿ ಶೃತಿ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ರಷ್ಯಾ ಅಧ್ಯಕ್ಷೀಯ ಚುನಾವಣೆ: ಪುಟಿನ್‌ಗೆ ಮತ್ತೆ ಗೆಲುವು



ಮಾಸ್ಕೊ: ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಅಧ್ಯಕ್ಷೀಯ ಚುನಾವಣೆಯಲ್ಲಿ ಮತ್ತೆ ಗೆಲುವು ಸಾಧಿಸಿದ್ದಾರೆ. ಚುನಾವಣೆಯಲ್ಲಿ ಪುಟಿನ್ ಅವರು ಶೇ. 87.17 ರಷ್ಟು ಮತಗಳನ್ನು ಪಡೆದಿದ್ದಾರೆ ಎಂದು ಒಕ್ಕೂಟದ ಕೇಂದ್ರ ಚುನಾವಣಾ ಆಯೋಗದ ದತ್ತಾಂಶ ಉಲ್ಲೇಖಿಸಿ ಟಾಸ್ ಸುದ್ದಿಸಂಸ್ಥೆ ವರದಿ ಮಾಡಿದೆ.

ಕಮ್ಯೂನಿಸ್ಟ್ ಪಾರ್ಟಿ ಆಫ್ ರಷ್ಯನ್ ಫೆಡರೇಶನ್ ಅಭ್ಯರ್ಥಿ ನಿಕೊಲಾಯ್ ಖರಿಟೋನೊವ್ ಶೇ. 4.1 ರಷ್ಟು ಮತಗಳೊಂದಿಗೆ ಎರಡನೇ ಸ್ಥಾನ ಪಡೆದಿದ್ದಾರೆ. ನ್ಯೂ ಪೀಪಲ್ ಪಾರ್ಟಿ ಅಭ್ಯರ್ಥಿ ವ್ಲಾಡಿಸ್ಲಾವ್ ದಾವಂಕೋವ್ ಶೇ. 4.8 ರಷ್ಟು ಮತಗಳೊಂದಿಗೆ ಮೊರನೇ ಸ್ಥಾನದಲ್ಲಿದ್ದಾರೆ. ಲಿಬರಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ರಷ್ಯಾ ಅಭ್ಯರ್ಥಿ ಲಿಯೊನಿಡ್ ಸ್ಲಟ್ಸ್ಕಿ ಶೇ. 3.15 ರಷ್ಟು ಮತಗಳನ್ನು ಪಡೆದಿದ್ದಾರೆ.

ಭಾನುವಾರ ಸಂಜೆ ಮತದಾನ ಮುಕ್ತಾಯವಾಗಿದ್ದು, ಮಾರ್ಚ್ 15–17 ರಿಂದ ಮೂರು ದಿನ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಮತದಾನದ ಪ್ರಮಾಣವು ಶೇಕಡಾ 74.22 ರಷ್ಟಿದೆ. 2018ರಲ್ಲಿ ನಡೆದ ಚುನಾವಣೆಯಲ್ಲಿ ಶೇ.67.54 ರಷ್ಟು ಮತದಾನವಾಗಿತ್ತು. 2018 ರ ಚುನಾವಣೆಗಳಿಗೆ ಹೋಲಿಸಿದರೆ ಪುಟಿನ್ ಹೆಚ್ಚಿನ ಮತಗಳನ್ನು ಪಡೆದಿದ್ದಾರೆ.

ಗೆಲುವು ಸಾಧಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಪುಟಿನ್, ರಷ್ಯಾ ಮತ್ತು ಯುಎಸ್ ನೇತೃತ್ವದ ನ್ಯಾಟೋ ಒಕ್ಕೂಟದ ನಡುವಿನ ಯಾವುದೇ ನೇರ ಸಂಘರ್ಷವು ಪೂರ್ಣ ಪ್ರಮಾಣದ ಮೂರನೇ ವಿಶ್ವ ಯುದ್ಧದಿಂದ ಒಂದು ಹೆಜ್ಜೆ ದೂರ ಎಂಬ ಅರ್ಥ ಎಂದು ಪಾಶ್ಚಿಮಾತ್ಯ ಶಕ್ತಿಗಳಿಗೆ ಎಚ್ಚರಿಕೆ ನೀಡಿದರು. ಆದರೆ, ಈ ಬಗ್ಗೆ ಯಾರೊಬ್ಬರೂ ಆಸಕ್ತಿ ತೋರುವುದು ಅಸಂಭವ ಎಂದೂ ಅವರು ಹೇಳಿದ್ದಾರೆ. ಪುಟಿನ್ ರಷ್ಯಾದ ಅಧ್ಯಕ್ಷರಾಗಿ ನಾಲ್ಕು ಬಾರಿ ಸೇವೆ ಸಲ್ಲಿಸಿದ್ದಾರೆ. ಮೊದಲ ಬಾರಿಗೆ 2000 ರಲ್ಲಿ ಮತ್ತು 2004, 2012 ಮತ್ತು 2018 ರಲ್ಲಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು.

ಮೈಸೂರು ಪ್ರಾಂತ್ಯ ನಿಮ್ಮಿಂದ ಸರ್ವತೋಮುಖ ಅಭಿವೃದ್ಧಿಯಾಗಲಿ

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್‌ಗೆ ಕ್ರೈಸ್ತ ಧರ್ಮಗುರುಗಳ ಆಶೀರ್ವಾದ





ಬಿಷಪ್ ಹೌಸ್(ಸನ್ಮಾರ್ಗಿ)ಗೆ ಸೋಮವಾರ ಭೇಟಿ ನೀಡಿದ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಅವರನ್ನು ಆತ್ಮೀಯವಾಗಿ ಸ್ವಾಗತಿಸಿದ ಮೈಸೂರು ಕ್ರೈಸ್ತ ಧರ್ಮ ಪ್ರಾಂತ್ಯದ ಆಡಳಿತಾಧಿಕಾರಿ ಬರ್ನಾರ್ಡ್ ಮೋರಸ್ ಅಭಿನಂದಿಸಿ, ಆಶೀರ್ವದಿಸಿದರು.

ಮೈಸೂರು, ಮಾ.18(ಎಂಕೆ)– ನಾವೆಂದು ನಿಮ್ಮೊಂದಿಗೆ ಇರುತ್ತೇವೆ. ನಿಮ್ಮಿಂದ ಮೈಸೂರು ಪ್ರಾಂತ್ಯದ ಸರ್ವತೋಮುಖ ಅಭಿವೃದ್ಧಿಯಾಗಲೀ ಎಂದು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ತಲೆಯ ಮೇಲೆ ಕೈ ಇಟ್ಟು ಮೈಸೂರು ಕ್ರೈಸ್ತ ಧರ್ಮ ಪ್ರಾಂತ್ಯದ ಆಡಳಿತಾಧಿಕಾರಿ ಬರ್ನಾರ್ಡ್ ಮೋರಸ್ ಆಶೀರ್ವದಿಸಿದರು.

ನಗರದ ಬನ್ನಿಮಂಟಪದಲ್ಲಿರುವ ನೂತನ ಬಿಷಪ್ ಹೌಸ್(ಸನ್ಮಾರ್ಗಿ)ಗೆ ಸೋಮವಾರ ಭೇಟಿ ನೀಡಿದ ಯದುವೀರ್ ಅವರನ್ನು ಆತ್ಮೀಯವಾಗಿ ಸ್ವಾಗತಿಸಿ, ಅಭಿನಂದಿಸಿ, ಆಶೀರ್ವದಿಸಿ ಮಾತನಾಡಿದ ಅವರು, ಹಿಂದೆ ಮಹಾರಾಜರ ಬಳಿ ಜನರು ಹೋಗುತ್ತಿದ್ದರು. ಈಗ ರಾಜರೇ ಜನಸೇವೆ ಮಾಡಲು ಅರಮನೆಯಿಂದ ಹೊರಗೆ ಬಂದಿರುವುದು ಒಳ್ಳೆಯ ಬೆಳವಣಿಗೆ. ಗುರುಗಳಾಗಲೀ, ಬಿಷಪ್‌ಗಳಾಗಲೀ, ರಾಜಕಾರಣಿಗಳಾಗಲೀ ಜನರ ಸೇವೆ ಮಾಡುವುದು ಮುಖ್ಯ. ಈ ನಿಟ್ಟಿನಲ್ಲಿ ರಾಜಕೀಯ ಕ್ಷೇತ್ರಕ್ಕೆ ಬಂದಿರುವ ನಿಮಗೆ ಯಶಸ್ಸು ದೊರೆಯಲಿ. ನಗರದಲ್ಲಿ ಒಳ್ಳೆಯ ಇಂಡಸ್ಟ್ರಿಗಳು ಬರಬೇಕಿದೆ. ಯುವಕರಿಗೆ ಹೆಚ್ಚಿನ ಉದ್ಯೋಗ ಅವಕಾಶಗಳು ಸಿಗಬೇಕಿದೆ. ಅದಕ್ಕಾಗಿ ಶ್ರಮಿಸುವಂತೆ ತಿಳಿಸಿದರು.

ಮೈಸೂರು ಮಹಾರಾಜರ ಕುಟುಂಬಕ್ಕೆ ಒಳ್ಳೆಯ ಹೆಸರಿದೆ. ಸೇವೆಯ ಮನೋಭಾವನೆ ಉಳ್ಳವರಾಗಿದ್ದಾರೆ. ಮುಂದಿನ ದಿನಗಳಲ್ಲಿ ನಿಮ್ಮಿಂದ ಮೈಸೂರು ಮತ್ತಷ್ಟು ಹೆಸರು ಪಡೆಯುವಂತಾಗಲೀ. ಈಗಾಗಲೇ ಎಕ್ಸ್‌ಪ್ರೆಸ್ ವೇ ನಿಂದಾಗಿ ಮೈಸೂರು, ಬೆಂಗಳೂರಿಗೆ ಹತ್ತಿರವಾಗಿದೆ. ಜನರಿಗೆ ಒಳ್ಳೆಯ ಸವಲತ್ತುಗಳು ದೊರೆಯಬೇಕು. ಹಾಗಾಗಿ ಮೈಸೂರು ಕ್ರೈಸ್ತ ಧರ್ಮ ಪ್ರಾಂತ್ಯ ನಿಮಗೆ ಯಶಸ್ಸನ್ನು ಬಯಸುತ್ತದೆ. ಹಾಗೆಯೇ ನಾವಿರುವುದು ಕೂಡ ರಾಜಮಾರ್ಗದಲ್ಲೇ ಎಂದರು.

ಮೈಸೂರು ಅರಮನೆ ನೋಡಲು ಬರುವ ಪ್ರವಾಸಿಗರು ತಪ್ಪದೆ ಸೆಂಟ್ ಫಿಲೋಮಿನಾ ಚರ್ಚ್ ನೋಡಲು ಸಹ ಬರುತ್ತಾರೆ. ಅರಮನೆ ಮತ್ತು ಚರ್ಚ್ ಮೈಸೂರಿನ ಹೆಮ್ಮೆಯಾಗಿದೆ. ಸೆಂಟ್ ಫಿಲೋಮಿನಾ ಚರ್ಚ್ ಹಾಗೂ ಸೆಂಟ್ ಫಿಲೋಮಿನಾ ಕಾಲೇಜು ನಿರ್ಮಾಣದ ಶಂಕುಸ್ಥಾಪನೆ ನೆರವೇರಿಸಿದ್ದು ಕೂಡ ಮೈಸೂರು ಒಡೆಯರೇ. ಚರ್ಚ್‌ನ ಸಣ್ಣ–ಪಟ್ಟ ರಿಪೇರಿ ಕೆಲಸಗಳು ನಡೆಯುತ್ತಿದ್ದು, ಒಮ್ಮೆ ಚರ್ಚ್‌ಗೆ ಭೇಟಿ ನೀಡಿ, ದೇವರ ಆಶೀರ್ವಾದ ಪಡೆದರೆ ನಿಮಗೆ ಒಳ್ಳೆಯದಾಗಲಿದೆ ಎಂದರು.

ಅವಿನಾಭಾವ ಸಂಬಂಧ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ನಾಡಿನ ಅಭಿವೃದ್ಧಿ ವಿಚಾರವಾಗಿ ಕ್ರೈಸ್ತ ಸಮುದಾಯದವರ ಜೊತೆ ಅರಮನೆ ಅವಿನಾಭಾವ ಸಂಬಂಧ ಹೊಂದಿತ್ತು. ಈಗಲೂ ಅದೇ ರೀತಿ ಒಟ್ಟಾಗಿ ಸೇರಿ ಕೆಲಸ ಮಾಡೋಣ. ಮೈಸೂರು ಸಂಸ್ಥಾನದ ಮಹಾರಾಜರುಗಳು ನಾಡಿನ ಶೈಕ್ಷಣಿಕ, ಆರೋಗ್ಯ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಸಂಬಂಧಿಸಿದಂತೆ ಕ್ರೈಸ್ತರೊಂದಿಗೆ ಸೇರಿ ಕೆಲಸ ಮಾಡಿದ್ದಾರೆ. ಈಗಲೂ ನಾವು ಒಟ್ಟಿಗೆ ಕೆಲಸ ಮಾಡೋಣ. ಅದಕ್ಕಾಗಿ ನಾನೂ ಅರಮನೆಯಿಂದ ಹೊರ ಬಂದಿದ್ದೇನೆ. ಶ್ರೇಷ್ಠ ಭಾರತ ನಿರ್ಮಾಣಕ್ಕಾಗಿ ನಾವೆಲ್ಲರೂ ಒಟ್ಟಿಗೆ ಸೇರಿ ಕೆಲಸ ಮಾಡಲು, ನಿಮ್ಮ ಆಶೀರ್ವಾದ ಬಯಸಿ ಬಂದಿದ್ದೇನೆ ಎಂದು ಹೇಳಿದರು.

ಕ್ರೈಸ್ತ ಧರ್ಮ ಗುರುಗಳಾದ ಜೇಮ್ಸ್ ಡೊಮಿನಿಕ್, ಆಲ್‌ಫ್ರೆಡ್ ಜಾನ್ ಮೆಂಡೋಸಾ, ಜೇಮ್ಸ್ ಭಾಗ್ಯರಾಜ್, ಮಾಜಿ ಸಚಿವ ಎಸ್. ಎ.ರಾಮದಾಸ್, ಕರ್ನಾಟಕ ವಸ್ತುಪ್ರದರ್ಶನದ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತ ಕುಮಾರ್ ಗೌಡ, ಬಿಜೆಪಿ ಅಲ್ಪಸಂಖ್ಯಾತರ ಮೋರ್ಚಾ ರಾಜ್ಯಾಧ್ಯಕ್ಷ ಡಾ.ಅನಿಲ್ ಥಾಮಸ್, ನಗರ ಪ್ರಧಾನ ಕಾರ್ಯದರ್ಶಿ ಸಂತೋಷ್ ಕುಮಾರ್ ಪಾಲ್, ಉಪಾಧ್ಯಕ್ಷ ಅಂತೋಣಿ ರಾಬರ್ಟ್, ಕಾರ್ಯದರ್ಶಿ ವಿಲಿಯಂ ವಿನೋದ್ ಮತ್ತಿತರು ಉಪಸ್ಥಿತರಿದ್ದರು.

ಚುನಾವಣಾ ಅಕ್ರಮಕ್ಕೆ ಕಡಿವಾಣ

ಮೈಸೂರು ಜಿಲ್ಲಾದ್ಯಂತ 42 ಚೆಕ್‌ಪೋಸ್ಟ್; ಕಟ್ಟೆಚ್ಚರ



ಮೈಸೂರು, ಮಾ.18(ಎಂಕೆ)– ಲೋಕಸಭಾ ಚುನಾವಣೆ ಹಿನ್ನಲೆ ಮೈಸೂರು ನಗರ ಸೇರಿದಂತೆ ಜಿಲ್ಲೆಯಾದ್ಯಂತ 42 ಚೆಕ್‌ಪೋಸ್ಟ್‌ಗಳನ್ನು ನಿರ್ಮಿಸಿದ್ದು, ಕಟ್ಟುನಿಟ್ಟಿನ ತಪಾಸಣೆ ನಡೆಸಲಾಗುತ್ತಿದೆ.

ಪಿರಿಯಾಪಟ್ಟಣ ತಾಲೂಕು ವ್ಯಾಪ್ತಿಯಲ್ಲಿ 3(ಕೆಲ್ಲೂರು, ಕಿತ್ತೂರು, ಹಲಗನಹಳ್ಳಿ), ಕೆ.ಆರ್.ನಗರ ಮತ್ತು ಸಾಲಿಗ್ರಾಮ ವ್ಯಾಪ್ತಿಯಲ್ಲಿ 4(ದೊಡ್ಡೆಕೊಪ್ಪಲು, ಭೇರ್ಯ, ಹನಸೋಗೆ, ಹರದಹಳ್ಳಿ), ಹುಣಸೂರು ವ್ಯಾಪ್ತಿಯಲ್ಲಿ 4(ಕರ್ಣಕುಪ್ಪೆ ಉಮ್ಮತ್ತೂರು, ಮನುಗನಹಳ್ಳಿ, ಗಾವಡಗೆರೆ), ಹೆಚ್.ಡಿ.ಕೋಟೆ ವ್ಯಾಪ್ತಿಯಲ್ಲಿ 3(ಕಾಂಚಮಳ್ಳಿ, ಚಾಮಹಳ್ಳಿ ಹುಂಡಿ, ಬಾವಲಿ), ನಂಜನಗೂಡು ವ್ಯಾಪ್ತಿಯಲ್ಲಿ 3(ಹಡಿಯಾಳ, ಯಲಚಗೆರಿ, ಕೆ.ಆರ್.ಪುರ), ಟಿ.ನರಸೀಪುರ ವ್ಯಾಪ್ತಿಯ 7(ಅರುವತ್ತೊಕ್ಲಪ್ಪಲು, ಯಾಚೇನಹಳ್ಳಿ, ಹೆಗ್ಗೂರು, ಮಡವಾಡಿ, ಟಿ.ಬೆಟ್ಟಹಳ್ಳಿ, ಬೊಮ್ಮನಹಳ್ಳಿ) ಹಾಗೂ ವರುಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 3(ತಾಂಡವಪುರ, ಹದಜನ, ಮಾದೇಗೌಡನಹುಂಡಿ)ಕಡೆಗಳಲ್ಲಿ ಚೆಕ್ ಪೋಸ್ಟ್ ನಿರ್ಮಿಸಲಾಗಿದೆ.

ಹಾಗೆಯೇ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 6(ಮೈದನಹಳ್ಳಿ, ಜೆ.ಕೆ.ಟೈರ್ಸ್, ಹಾರೋಹಳ್ಳಿ, ಕಡಕೋಳ, ರಮ್ಮನಹಳ್ಳಿ, ಏಟ್ರಿಯಾಮ್ ಹೋಟೆಲ್), ಕೃಷ್ಣರಾಜ ಕ್ಷೇತ್ರ ವ್ಯಾಪ್ತಿ 3(ಮೈಸೂರು–ನಂಜನಗೂಡು, ಮೈಸೂರು–ಹೆಚ್.ಡಿ.ಕೋಟೆ, ಮೈಸೂರು–ಟಿ.ನರಸೀಪುರ), ಚಾಮರಾಜ ಕ್ಷೇತ್ರ ವ್ಯಾಪ್ತಿ 3(ಬೋಗಾದಿ, ರೈಲ್ವೆ ನಿಲ್ದಾಣ, ಬಿಇಎಂಎಲ್, ಸಬರ್‌ಬನ್) ಹಾಗೂ ನರಸಿಂಹರಾಜ ಕ್ಷೇತ್ರ ವ್ಯಾಪ್ತಿ 3(ಮೈಸೂರು–ಬನ್ನೂರು, ಮೈಸೂರು–ಮಹದೇವಪುರ, ಮೈಸೂರು–ಬೆಂಗಳೂರು) ಕಡೆಗಳಲ್ಲಿ ಸೇರಿ 42 ಪ್ರಮುಖ ಸ್ಥಳಗಲ್ಲಿ ಚೆಕ್ ಪೋಸ್ಟ್ ಹದ್ದಿನ ಕಣ್ಣಿರಿಸಲಾಗಿದೆ.

ಚುನಾವಣಾ ಬಾಂಡ್: ಹೈದರಾಬಾದ್ ಮೂಲದ ಕಂಪನಿಯಿಂದ ಜೆಡಿಎಸ್‌ಗೆ ಹರಿದು ಬಂದಿದೆ ಕೋಟಿ ಕೋಟಿ ದೇಣಿಗೆ!

ಬೆಂಗಳೂರು: ಚುನಾವಣಾ ಬಾಂಡ್‌ಗಳಿಗೆ ಸಂಬಂಧಿಸಿದಂತೆ ಭಾರತೀಯ ಚುನಾವಣಾ ಆಯೋಗವು ಭಾನುವಾರ ಹೊಸ ವಿವರಗಳನ್ನು ಪ್ರಕಟಿಸಿದೆ. ಮುಚ್ಚಿದ ಲಕೋಟೆಯಲ್ಲಿ ರಾಜಕೀಯ ಪಕ್ಷಗಳು ಚುನಾವಣಾ ಆಯೋಗಕ್ಕೆ ಸಲ್ಲಿಸಿದ ಚುನಾವಣಾ ಬಾಂಡ್ ಮಾಹಿತಿ ಇದಾಗಿದೆ.

ಈಗಾಗಲೇ ಹಲವು ಪಕ್ಷಗಳು ತಮ್ಮ ಚುನಾವಣಾ ಬಾಂಡ್ ದಾನಿಗಳ ಗುರುತನ್ನು ಬಹಿರಂಗಪಡಿಸಿವೆ. ಇದರ ಜೊತೆಗೆ ಜಾತ್ಯತೀತ ಜನತಾ ದಳ ಕೂಡ ತಮಗೆ ಒಟ್ಟು 89.75 ಕೋಟಿ ದೇಣಿಗೆ ಬಂದಿರುವ ಬಗ್ಗೆ ಘೋಷಿಸಿದೆ. ಮಾರ್ಚ್ 20, 2018 ರಿಂದ ಸೆಪ್ಟೆಂಬರ್ 30, 2023 ರವರೆಗೆ ಕಂಪನಿಗಳಿಂದ ಪಡೆದ ಹಣದ ಕುರಿತು ವಿವರ ನೀಡಿದೆ.

ಈ ದಾನಿಗಳ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿ ಇರೋದು ಹೈದರಾಬಾದ್ ಮೂಲದ ಕಂಪನಿ. ಜೆಡಿಎಸ್‌ಗೆ ಹೈದರಾಬಾದ್ ಮೂಲದ ಮೇಘಾ ಇಂಜಿನಿಯರಿಂಗ್ ಮತ್ತು ಇನ್ಫ್ರಾಸ್ಟ್ರಕ್ಚರ್ಸ್ ಲಿಮಿಟೆಡ್ ಒಂದೇ ಕಂಪನಿ ಅದರ ಒಟ್ಟು 89.75 ಕೋಟಿ ದೇಣಿಗೆಯ ಅರ್ಧಕ್ಕಿಂತ ಹೆಚ್ಚು ನೀಡಿದೆ.

ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷರಾದ ಎಚ್‌ಡಿ ದೇವೇಗೌಡ ಅವರು ಭಾರತದ ಚುನಾವಣಾ ಆಯೋಗಕ್ಕೆ ಸಲ್ಲಿಸಿದ ವಿವರಗಳ ಪ್ರಕಾರ, ಮೇಘಾ ಇಂಜಿನಿಯರಿಂಗ್ ಮತ್ತು ಇನ್ಫ್ರಾಸ್ಟ್ರಕ್ಚರ್ಸ್ ಲಿಮಿಟೆಡ್‌ನಿಂದ 50 ಕೋಟಿ ರೂಪಾಯಿ ಎಲೆಕ್ಟೋರಲ್ ಬಾಂಡ್ ದೇಣಿಗೆ ಸಂಗ್ರಹಿಸಲಾಗಿದೆ ಎಂದಿದೆ. ಕೃಷ್ಣಾ ರೆಡ್ಡಿ ನಡೆಸುತ್ತಿರುವ, ಎಂಇಐಎಲ್ ಕಂಪನಿ ತೆಲಂಗಾಣ ಸರ್ಕಾರದ ಮಾರ್ಕ್ಯೂ ಯೋಜನೆಗಳಾದ ಕಾಳೇಶ್ವರಂ ಅಣೆಕಟ್ಟು ಯೋಜನೆಗಳಲ್ಲಿ ತೊಡಗಿಸಿಕೊಂಡಿದೆ.

ಹೆಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ 2019 ರ ಮಾರ್ಚ್ 19 ರಂದು ಮೇಘಾ ಕನ್ಸ್ಟ್ರಕ್ಷನ್ಸ್ 10 ಕೋಟಿ ರೂ. ನೀಡಿದೆ. ಅದೇ ಕಂಪನಿ 2023 ರ ಏಪ್ರಿಲ್ 18 ರಂದು ಕರ್ನಾಟಕದಲ್ಲಿ ಅಸೆಂಬ್ಲಿ ಚುನಾವಣೆಗೆ ಮುನ್ನ 40 ಕೋಟಿ ರೂಪಾಯಿಗಳನ್ನು ದೇಣಿಗೆ ನೀಡಿದೆ.

ರಾಯಭಾರ ಕಚೇರಿ ಡೆವಲಪರ್‌ಗಳು 2018 ರ ಅಸೆಂಬ್ಲಿ ಚುನಾವಣೆಯ ಮೊದಲು JD(S) ಗೆ 22 ಕೋಟಿ ರೂ.ಗಳನ್ನು ದೇಣಿಗೆ ನೀಡಿವೆ ಮತ್ತು ಮೇ 17, 2018 ರಂದು 10 ಕೋಟಿ ರೂ. ದೇಣಿಗೆಯನ್ನು ಕಂಪನಿ ನೀಡಿದೆ.

ಮಾಜಿ ಶಾಸಕ ದಿವಂಗತ ವಾಸು ಅವರಿಗೆ ಶ್ರದ್ಧಾಂಜಲಿ



ಮೈಸೂರಿನ ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿ ಸೋಮವಾರ ಮಾಜಿ ಶಾಸಕ ದಿವಂಗತ ವಾಸು ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರು,ಮಾ.18(ಪಿಎಂ)– ಮೈಸೂರಿನ ಟಿಕೆ ಲೇಔಟ್‌ನಲ್ಲಿರುವ ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ ವತಿಯಿಂದ ಸೋಮವಾರ ಮಾಜಿ ಶಾಸಕ ದಿವಂಗತ ವಾಸು ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಸಂಸ್ಥೆಯಲ್ಲಿ ನಡೆದ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ನುಡಿ ನಮನ ಸಲ್ಲಿಸಿದ ವಿಶ್ರಾಂತ ಕುಲಪತಿ ಡಾ.ಎನ್.ಎಸ್.ರಾಮೇಗೌಡ, ವಾಸು ಅವರು ಸರಳ–ಸಜ್ಜನಿಕೆ ಹಾಗೂ ಅಪರೂಪದ ರಾಜಕಾರಣಿ. ಅವರು ಇನ್ನಷ್ಟು ಕಾಲ ನಮ್ಮ ಜೊತೆಯಲ್ಲಿ ಇರಬೇಕಿತ್ತು. ಆ ಮೂಲಕ ಅವರ ಸೇವೆ ಸಮಾಜಕ್ಕೆ ಇನ್ನಷ್ಟು ಲಭಿಸಬೇಕಿತ್ತು ಎಂದು ಹೇಳಿದರು.

ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಪಿ.ವಿಶ್ವನಾಥ್ ಮಾತನಾಡಿ, ಮೈಸೂರು ನಗರಕ್ಕೆ ಅವರು ನೀಡಿದ ಕೊಡುಗೆಗಳು ಅಪಾರ. ವಿಧಾನಸಭಾ ಸದಸ್ಯರಾಗಿ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಿ ನಗರದ ಅಭಿವೃದ್ಧಿಗೆ ಕಾರಣರಾದರು ಎಂದರು.


ಡಾ.ಪಿ.ಬೋರೇಗೌಡ ಮಾತನಾಡಿ, ವಾಸು ಅವರು ಸಾಮಾಜಿಕ ಕಳಕಳಿ ಹೊಂದಿದ್ದ ಮೇರು ವ್ಯಕ್ತಿತ್ವದವರು. ಅವರ ಪ್ರಾಮಾಣಿಕತೆ ಇತರರಿಗೆ ಮಾದರಿ ಎಂದು ಸ್ಮರಿಸಿದರು.

ಗದಗ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಡಿ.ಆರ್.ಪಾಟೀಲ್, ವಿಚಾರ ಸಂಸ್ಥೆಯ ಸರೋಜ ತುಳಸಿದಾಸ್, ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗಾಂಧಿವಾದಿ ಶಿವರಾಜ್, ನಿವೃತ್ತ ಪೊಲೀಸ್ ಅಧಿಕಾರಿ ಬಿ.ಪಿ.ಸುರೇಶ್, ಎಲ್‌ಐಸಿ ನಿವೃತ್ತ ಅಭಿವೃದ್ಧಿ ಅಧಿಕಾರಿ ಬೂಕನಕೆರೆ ವಿಜೇಂದ್ರ ಮತ್ತಿತರರು ಹಾಜರಿದ್ದರು.

ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಮೈಸೂರು ವಿಭಾಗ ಉಸ್ತುವಾರಿ ಪುಷ್ಪಾ ಅಮರ್‌ನಾಥ್




ಮೈಸೂರು, ಮಾ.18– ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರುಗಳಿಗೆ ವಿಭಾಗಗಳ ಉಸ್ತುವಾರಿ ವಹಿಸಿ ರಾಜ್ಯ ಸರ್ಕಾರ ಆದೇಶಿಸಿದೆ. ಪ್ರಾಧಿಕಾರದ ಉಪಾಧ್ಯಕ್ಷರಾದ ಪುಷ್ಪಾ ಅಮರ್‌ನಾಥ್ ಅವರಿಗೆ ಮೈಸೂರು, ಸೂರಜ್ ಹೆಗಡೆಗೆ ಬೆಂಗಳೂರು, ಎಸ್.ಆರ್.ಪಾಟೀಲ್‌ಗೆ ಬೆಳಗಾವಿ ಹಾಗೂ ಮೆಹರೋಜ್ ಖಾನ್‌ಗೆ ಕಲಬುರಗಿ ವಿಭಾಗದ ಉಸ್ತುವಾರಿ ಜವಾಬ್ದಾರಿ ವಹಿಸಿ, ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಡಾ.ಬಿ.ಸಿ.ಪ್ರಕಾಶ್ ಆದೇಶಿಸಿದ್ದಾರೆ.



ಡಾ. ಪುನೀತ್ ರಾಜ್‌ಕುಮಾರ್ ಹುಟ್ಟುಹಬ್ಬದ ಪ್ರಯುಕ್ತ ದಾಸಪ್ಪ ವೃತ್ತದಲ್ಲಿ ಮ್ಯಾಜಿಕ್ ಆಟೋ ಚಾಲಕರು ಮತ್ತು ಮಾಲೀಕರ ಸಂಘದ ವತಿಯಿಂದ ಸಿಹಿ ಹಂಚಲಾಯಿತು.

ಬಿಜೆಪಿ ಮೈಸೂರು–ಕೊಡಗು ಕ್ಷೇತ್ರಕ್ಕೆ ಅನಿವಾರ್ಯವಾಗಿ ಯದುವೀರ್ ಕಣಕ್ಕಿಳಿಸಿದೆ

- ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕೆ
- ನಮ್ಮಲ್ಲಿ ಮೂರ್‍ನಾಲ್ಕು ಜನರಿರುವುದರಿಂದ ಆಯ್ಕೆ ಸಮಸ್ಯೆ ಉಂಟಾಗಿದೆ



ಬೆಂಗಳೂರು, ಮಾ.18– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರಕ್ಕೆ ಅಭ್ಯರ್ಥಿ ಇಲ್ಲವೆಂದೇ ಬಿಜೆಪಿಯವರು ಯದುವೀರ್ ಅವರನ್ನು ಕಣಕ್ಕಿಳಿಸಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದ್ದಾರೆ.

ಗೃಹಕಚೇರಿ ಕೃಷ್ಣಾದಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ಮೈಸೂರು–ಕೊಡಗು ಸೇರಿದಂತೆ ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲೂ ಕಾಂಗ್ರೆಸ್‌ನಲ್ಲಿ ಹೆಚ್ಚು ಆಕಾಂಕ್ಷಿಗಳು ಇರುವುದರಿಂದ ಆಯ್ಕೆ ಕಗ್ಗಂಟಾಗಿದೆ. ಒಂದೊಂದು ಕಡೆ ಮೂರು ನಾಲ್ಕು ಜನ ಟಿಕೆಟ್ ಆಕಾಂಕ್ಷಿಗಳಿದ್ದಾರೆ. ಆದರೆ ಬಿಜೆಪಿಯವರು ಮೈಸೂರಿನಲ್ಲಿ ಹಾಲಿ ಇರುವ ಅಭ್ಯರ್ಥಿಯನ್ನು ಬದಲಾವಣೆ ಮಾಡಿದ್ದಾರೆ. ಯದುವೀರ್ ಅವರನ್ನು ಈಗ ಸ್ಪರ್ಧೆ ಮಾಡಿಸಿದ್ದಾರೆ. ನನಗೆ ಮೈಸೂರು ಮಾತ್ರ ಅಲ್ಲ. ಇಡೀ ರಾಜ್ಯವೇ ನನ್ನ ಸ್ವಕ್ಷೇತ್ರ. ನಾನು ಮೈಸೂರು ಜಿಲ್ಲೆಯ ಒಂದು ಹಳ್ಳಿಯವನು, ನಾನು ಓದಿದ್ದು ಮೈಸೂರಿನಲ್ಲಿ ಅಷ್ಟೇ. ಆದರೆ 28 ಕ್ಷೇತ್ರಗಳೂ ನಮ್ಮದೇ ಎಂದರು.

ಸದಾನಂದ ಗೌಡ ನನ್ನನ್ನು ಸಂಪರ್ಕಿಸಿಲ್ಲ: ಮಾಜಿ ಮುಖ್ಯಮಂತ್ರಿ ಡಿ.ವಿ ಸದಾನಂದ ಗೌಡರಿಗೆ ಕಾಂಗ್ರೆಸ್ ಸಂಪರ್ಕ ಮಾಡಿದೆ ಅನ್ನೋ ವಿಚಾರ ನನಗೆ ಗೊತ್ತಿಲ್ಲ. ಯಾರು ಸಂಪರ್ಕ ಮಾಡಿದ್ದಾರೋ ಅವರನ್ನೇ ಕೇಳಿ. ಸದಾನಂದ ಗೌಡ ನನ್ನ ಹೆಸರು ಹೇಳಿದ್ದಾರಾ?. ನನ್ನ ಸಂಪರ್ಕದಲ್ಲಂತೂ ಸದಾನಂದ ಗೌಡ ಇಲ್ಲ. ಕಾಂಗ್ರೆಸ್ ನಾಯಕರು ಯಾರನ್ನಾದ್ರೂ ಸಂಪರ್ಕ ಮಾಡಿರಬಹುದು. ನಾನು ಊಹಾಪೋಹದ ಪ್ರಶ್ನೆಗಳಿಗೆ ಉತ್ತರಿಸಲ್ಲ ಎಂದು ಸಿದ್ದರಾಮಯ್ಯ ಹೇಳಿದರು.

ಕನಿಷ್ಠ 20 ಗೆಲ್ಲುತ್ತೇವೆ: ಈ ಬಾರಿ ಲೋಕಸಭೆ ಚುನಾವಣೆಯಲ್ಲಿ ನಾವು ಕನಿಷ್ಠ 20 ಸ್ಥಾನಗಳನ್ನು ಗೆದ್ದೇ ಗೆಲ್ಲುತ್ತೇವೆ. ಕಾಂಗ್ರೆಸ್ ನುಡಿದಂತೆ ನಡೆದುಕೊಂಡಿರುವುದರಿಂದ ನಮಗೆ ಗೆಲ್ಲುವ ವಿಶ್ವಾಸ ಗಟ್ಟಿಯಾಗಿದೆ. ಪ್ರಧಾನಿ ಮೋದಿ ಕಳೆದ ವಿಧಾನಸಭೆ ಚುನಾವಣೆಯಲ್ಲೂ ರಾಜ್ಯಾದ್ಯಂತ ಓಡಾಡಿದ್ದರು. ಆದರೆ ನಾವು 135 ಸ್ಥಾನಗಳನ್ನು ಗೆದ್ದಿದ್ದೇವೆ. ಬಿಜೆಪಿಯವರು ಕರ್ನಾಟಕ ರಾಜ್ಯವನ್ನು ಲೂಟಿ ಮಾಡಿದ್ದಾರೆ ಎಂದು ಆರೋಪಿಸಿದರು.

ಬರಗಾಲ ಬಂದು ಐದು ತಿಂಗಳಾದರೂ ಮೋದಿಯವರು ಕೇಂದ್ರ ಸರ್ಕಾರದಿಂದ ಒಂದೇ ಒಂದು ಪೈಸೆ ಕೊಟ್ಟಿಲ್ಲ ಏಕೆ?. 18,171 ಕೋಟಿ ರೂ. ಬರ ಪರಿಹಾರ ಹಣ ಕೇಳಿದ್ದೇವೆ. ಒಂದು ರೂಪಾಯಿಯನ್ನೂ ಕೊಡಲಿಲ್ಲ. 48 ಸಾವಿರ ಹೆಕ್ಟೇರ್‌ನಲ್ಲಿ ಬೆಳೆ ಹಾನಿ ಆಗಿದೆ. ಮತ್ತೆ ಮೋದಿಯವರಿಗೆ ನಮ್ಮಲ್ಲಿ ಹಣ ಇಲ್ಲ ಎಂದು ಹೇಳುವ ಯಾವ ನೈತಿಕತೆ ಇದೆ. ನಾವು ರಾಜ್ಯ ಬೊಕ್ಕಸದಿಂದಲೇ ರೈತರ ಖಾತೆಗೆ ಬರ ಪರಿಹಾರ ಹಾಕಿದ್ದೇವೆ. ಬರಗಾಲದಲ್ಲಿ ನರೇಗಾ ದಿನಗಳನ್ನು ಹೆಚ್ಚಿಸಿಲ್ಲ. ಕೇಂದ್ರ ಸರ್ಕಾರ ಅಂದರೆ ಕೇವಲ ಜಿಎಸ್‌ಟಿ ಮತ್ತು ತೆರಿಗೆ ಸಂಗ್ರಹಿಸಿ ತಮ್ಮಲ್ಲಿ ಇಟ್ಟುಕೊಂಡು ರಾಜ್ಯಗಳಿಗೆ ಅನ್ಯಾಯ ಮಾಡೋಕೆ ಮಾತ್ರ ಇರೋದಾ? ಎಂದು ವಾಗ್ದಾಳಿ ನಡೆಸಿದರು.

ಲೋಕಸಭಾ ಚುನಾವಣೆ ಹಿನ್ನೆಲೆ

ವಿಜಯನಗರ ಠಾಣಾ ವ್ಯಾಪ್ತಿಯಲ್ಲಿ ರೂಟ್ ಮಾರ್ಚ್



ವಿಜಯನಗರ ಪೊಲೀಸ್ ಠಾಣೆ ವ್ಯಾಪ್ತಿಯ ಹಿನಕಲ್‌ನಲ್ಲಿ ರೂಟ್ ಮಾರ್ಚ್ ನಡೆಸಲಾಯಿತು.

ಮೈಸೂರು, ಮಾ.18(ಎಂಕೆ)– ಲೋಕಸಭೆ ಚುನಾವಣೆ ಹಿನ್ನಲೆ ಮೈಸೂರಿನ ವಿಜಯನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಸೋಮವಾರ ರೂಟ್ ಮಾರ್ಚ್ ನಡೆಸಲಾಯಿತು.

ವಿಜಯನಗರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಬಿ.ಆರ್.ಪ್ರದೀಪ್ ನೇತೃತ್ವದಲ್ಲಿ ಠಾಣೆ ವ್ಯಾಪ್ತಿಯ ಹಿನಕಲ್ ಗ್ರಾಮದ ಹುಣಸೂರು ಮುಖ್ಯ ರಸ್ತೆ, ಫ್ಲೇ ಓವರ್ ಕೆಳಗಿನ ರಿಂಗ್ ರಸ್ತೆ ಜಂಕ್ಷನ್ ಹಾಗೂ ಗ್ರಾಮದ ಪ್ರಮುಖ ಬೀದಿಗಳಲ್ಲಿ 18 ಮಂದಿ ಪೊಲೀಸರು, 49 ಮಂದಿ ಕಮಾಂಡ್‌ಗಳೊಂದಿಗೆ ರೂಟ್ ಮಾರ್ಚ್ ನಡೆಸುವ ಮೂಲಕ ಸಮಾಜದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸುಸ್ಥಿತಿಯಲ್ಲಿದ್ದು, ಸಾರ್ವಜನಿಕರು ಭಯಪಡುವ ಅಗತ್ಯವಿಲ್ಲ ಎಂಬ ಧೈರ್ಯ ತುಂಬಿದರು.

ಹಿನಕಲ್ ಫ್ಲೇ ಓವರ್ ಕೆಳಗಿನ ರಿಂಗ್ ರಸ್ತೆ ಜಂಕ್ಷನ್‌ನಿಂದ ಆರಂಭಿಸಿ, ಹಿನಕಲ್‌ನ ಪ್ರಮುಖ ರಸ್ತೆಗಳು ಸೇರಿ ಸುಮಾರು 3 ಕಿ.ಮೀಗಳಷ್ಟು ಪೊಲೀಸ್ ಬ್ಯಾಂಡ್‌ನೊಂದಿಗೆ ಶಸ್ತ್ರಾಸ್ತ್ರಗಳನ್ನಿಡುವ ಹೆಜ್ಜೆ ಹಾಕಿದರು. ವಿಜಯನಗರ ಪೊಲೀಸ್ ಠಾಣೆ ಸಬ್ ಇನ್ಸ್‌ಪೆಕ್ಟರ್‌ಗಳಾದ ಕೆ.ವಿಶ್ವನಾಥ, ಕೆ.ನಾರಾಯಣ, ಕೃಷ್ಣ, ವನಜಾಕ್ಷಿ ಉಪಸ್ಥಿತರಿದ್ದರು.

ಸಾಧನೆ ಹಾದಿಯಲ್ಲಿ ಮೈಸೂರು ಹಿನಕಲ್‌ನ ಯುವ ಕಲಾವಿದ ಬಸವರಾಜು

● ಎಂ.ಟಿ.ಯೋಗೇಶ್ ಕುಮಾರ್



ಪ್ರಶಸ್ತಿಗೆ ಭಾಜನವಾದ 'ಇನ್ ಸರ್ಚ್ ಆಫ್ ಸೇಫ್ಟಿ' ಕಲಾಕೃತಿ



ಸರ್ವಜ್ಞ ವಿಗ್ರಹದೊಂದಿಗೆ ಕಲಾವಿದ ಬಸವರಾಜು

ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಕಲಾಪರಂಪರೆ ವೈಭವ ಮುಂದುವರೆದಿದೆ. ಹಿರಿಯ ಕಲಾವಿದರ ಸಾಧನೆಯ ಹಾದಿಯಲ್ಲಿ ಹೊಸ ತಲೆಮಾರಿನ ಕಲಾವಿದರು ಸಾಗುವ ಮೂಲಕ ಕಲಾ ಶ್ರೀಮಂತಿಕೆಯನ್ನು ಸಂರಕ್ಷಿಸುತ್ತಿದ್ದಾರೆ. ಇಂತಹ ಕಲಾವಿದರಲ್ಲಿ ಹಿನಕಲ್ ನಿವಾಸಿ ಎಲ್. ಬಸವರಾಜು ಒಬ್ಬರು. ಮೈಸೂರಿನ ಪ್ರತಿಷ್ಠಿತ ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿ(ಕಾವಾ)ಯಲ್ಲಿ ಮಾಸ್ಟರ್ ಆಫ್ ಫೈನ್ ಆರ್ಟ್ಸ್(ಎಂಎಫ್‌ಎ) ಪದವಿ ಪಡೆದಿರುವ ಬಸವರಾಜು 20 ವರ್ಷದಿಂದ ಕಲ್ಲು ಕೆತ್ತನೆ, ಮರಕೆತ್ತನೆ, ಉಬ್ಬುಕಲೆ, ಫೈಬರ್ ಕಲೆ, ಮಣ್ಣಿನ ಕಲಾಕೃತಿ, ಗೋಡೆ ಮೇಲಿನ ಕೆತ್ತನೆ, ಸಿಮೆಂಟ್ ಕಲಾಕೃತಿಗಳ ನಿರ್ಮಾಣ, ಮ್ಯೂರಲ್ ಆರ್ಟ್, ಹೀಗೆ ವಿವಿಧ ಕಲೆಗಳಲ್ಲಿ ನೈಪುಣ್ಯತೆ ಗಳಿಸಿಕೊಂಡು ಸಾಧನೆಯ ಹಾದಿಯಲ್ಲಿ ಸದ್ದಿಲ್ಲದೆ ಸಾಗುತ್ತಿದ್ದಾರೆ.

ಕೋವಿಡ್ ಜಗತ್ತನ್ನೇ ತಲ್ಲಣಗೊಳಿಸಿದ್ದ ಸಂದರ್ಭದಲ್ಲಿ ಮಾಸ್ಕ್ ಕಡ್ಡಾಯಗೊಳಿಸಿದ್ದ ನಿಯಮವನ್ನು ಪ್ರತಿಪಾದಿಸುವಂತೆ ನಾಲ್ಕು ಮಕ್ಕಳೊಂದಿಗೆ ಪತಿ–ಪತ್ನಿ ಮಾಸ್ಕ್ ಧರಿಸಿ ಸ್ಕೂಟರ್‌ನಲ್ಲಿ ಹೋಗುತ್ತಿರುವ(ಇನ್ ಸರ್ಚ್ ಆಫ್ ಸೇಫ್ಟಿ) ಕಲಾಕೃತಿಗೆ 'ಶಿಲ್ಪಕಲಾ ಅಕಾಡೆಮಿ ಪ್ರಶಸ್ತಿ' ಲಭಿಸಿದ್ದು ಗಮನಾರ್ಹ. ಕೆತ್ತನೆಯಲ್ಲಿ ಲಯ, ನುಣುಪು, ನಯ, ನಾಜೂಕು, ಕೆತ್ತನೆಗೆ ಅಗತ್ಯವಾದ ಗುಣ, ತಾಳ್ಮೆ ಹೊಂದಿರುವ ಬಸವರಾಜು, ಕಲೆಯಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ.

ಅರಳಿದ ಪ್ರತಿಮೆಗಳು: ಕಂಕುಳಲ್ಲಿ ಮಗು, ತಲೆ ಮೇಲೆ ಹಣ್ಣಿನ ಬುಟ್ಟಿ ಹೊತ್ತು ಸಾಗುವ ಮಮತಾಮಯಿ ತಾಯಿಯನ್ನು ಕಲ್ಲಿನಲ್ಲಿ ಪಡಿಮೂಡಿಸಿರುವುದು ಅತ್ಯಾಕರ್ಷಕವಾಗಿದೆ. ಚೆಲುವಾಂಬ ಆಸ್ಪತ್ರೆ ಆವರಣದ 'ಕನ್ಯಾ ಸುರಕ್ಷಾ ವೃತ್ತ'ದಲ್ಲಿರುವ ಮಗುವನ್ನು ಎರಡೂ ಕೈಗಳಲ್ಲಿ ಎತ್ತಿಕೊಂಡಿರುವ ತಾಯಿಯ ಆಕೃತಿಯೂ ಬಸವರಾಜು ನೈಪುಣ್ಯತೆಯಿಂದ ಅರಳಿರುವುದು. ಸಾಹು ಮಹಾರಾಜರ ಕಲ್ಲಿನ ಆಕೃತಿ, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿ, ಈಶ್ವರನ ವಿಗ್ರಹ, ಗೌರಿ ವಿಗ್ರಹ, ಸರ್ವಜ್ಞ ಪ್ರತಿಮೆ, ಅಣ್ಣಮ್ಮಾಚಾರ್ಯ ಪ್ರತಿಮೆ, ಬುದ್ಧ, ಕಾಡಿನಲ್ಲಿ ಬೇಟೆಗಾಗಿ ತೆರಳುವ ಬುಡಕಟ್ಟು ಜನರು, ಪೆರಿಯರ್ ಸೇರಿದಂತೆ ಹತ್ತು–ಹಲವು ವಿಭಿನ್ನ ಕೆತ್ತನೆಗಳು ಇವರ ಕಲಾಪ್ರತಿಭೆಯ ಕುರುಹುಗಳಾಗಿವೆ.

ಉಬ್ಬು ಕಲೆಯಲ್ಲೂ ಬಸವರಾಜು ಪರಿಣಿತರು. ಮನೆಗಳ ಗೋಡೆ ಮೇಲೆ ಹಸು–ಕರು, ಕಾಮಧೇನು ಇನ್ನಿತರ ಆಕೃತಿಗಳನ್ನು ಸೃಷ್ಟಿಸಿದ್ದಾರೆ. ದೇವಾಲಯಗಳ ಮುಂದೆ ಪ್ರತಿಷ್ಠಾಪಿಸುವ ಕಲ್ಲಿನ ಪಾದುಕೆಗಳನ್ನೂ ಸೊಗಸಾಗಿ ಕೆತ್ತಿದ್ದಾರೆ. ಕಟ್ಟಡಗಳ ಮುಂದೆ ಅಲಂಕಾರಕ್ಕೆ ಇಡುವ ಕಲ್ಲಿನ ಫೌಂಟೇನ್ ಕೆತ್ತನೆಯೂ ಮನಮೋಹಕ. 3ಡಿ, 2ಡಿ ಕೆತ್ತನೆ, ಸಿಮೆಂಟ್ ಪ್ರತಿಮೆ ನಿರ್ಮಾಣದಲ್ಲೂ ಸೈ ಎನಿಸಿಕೊಂಡಿದ್ದು ಈಗಾಗಲೇ ರಾಜ್ಯದ ವಿವಿಧೆಡೆಗೆ ಸಿಮೆಂಟ್‌ನಿಂದ ನಿರ್ಮಿಸಿದ ವಿವಿಧ ಪ್ರತಿಮೆಗಳನ್ನು ನೀಡಿದ್ದಾರೆ. ಶಿಲ್ಪಕಲಾ ಅಕಾಡೆಮಿ ಆಯೋಜಿಸುವ ರಾಷ್ಟ್ರ ಹಾಗೂ ರಾಜ್ಯ ಮಟ್ಟದ ಶಿಲ್ಪಕಲಾ ಶಿಬಿರದಲ್ಲಿ ಪಾಲ್ಗೊಂಡು ಸ್ಥಳದಲ್ಲೇ ವಿವಿಧ ಪ್ರತಿಮೆ, ಆಕೃತಿ ಕೆತ್ತನೆ ಮಾಡಿರುವ ಕಲಾವಿದ ಬಸವರಾಜು, ಹಲವು ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಚಿಕ್ಕಂದಿನಿಂದಲೂ ಕಲೆಯ ಬಗ್ಗೆ ಅತೀವ ಆಸಕ್ತಿ ಕಾವಾದಲ್ಲಿ ಕಲಾ ಶಿಕ್ಷಣ ಪಡೆದು, ಶಿಲ್ಪ ಕಲಾ ಅಕಾಡೆಮಿ ಆಯೋಜಿಸುವ ಎಲ್ಲಾ ಶಿಬಿರಗಳಲ್ಲೂ ಪಾಲ್ಗೊಂಡು ವಿವಿಧ ಕಲಾ ಪ್ರಕಾರಗಳನ್ನು ಕಲಿತಿದ್ದೇನೆ. ಕಲಾಸಕ್ತರ ಬೇಡಿಕೆ ಹಾಗೂ ಅಭಿರುಚಿಗೆ ಅನುಗುಣವಾಗಿ ಕಲ್ಲು ಮರ ಹಾಗೂ ಮಣ್ಣಿನ ಕಲಾಆಕೃತಿಗಳನ್ನು ಮಾಡಿಕೊಟ್ಟಿದ್ದೇನೆ. ಮಹನೀಯರ ಪ್ರತಿಮೆಗಳ ಬಗ್ಗೆ ಸಾಕಷ್ಟು ಜನ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಮೈಸೂರಿನ ಕಲಾ ಪರಂಪರೆಗೆ ಅಳಿಲು ಸೇವೆ ಸಲ್ಲಿಸುತ್ತಿರುವುದು ಸಾರ್ಥಕವೆನಿಸಿದೆ.

-ಎಲ್.ಬಸವರಾಜು, ಯುವ ಕಲಾವಿದ

ಆದಿವಾಸಿ ಮಹಿಳೆಯರ ಮೇಲೆ ಹಲ್ಲೆಗೆ ಯತ್ನಿಸಿದ ಪಾನಮತ್ತ ಕೇರಳಿಗ

ಬಾವಲಿ ಹಾಡಿಯಲ್ಲಿ ಮದ್ಯದಂಗಡಿ ತೆರವಿಗಾಗಿ ಪ್ರತಿಭಟನೆ ವೇಳೆ ಘಟನೆ

ಹೆಚ್.ಡಿ.ಕೋಟೆ, ಮಾ.18– ಕೇರಳದಿಂದ ಮದ್ಯ ಸೇವಿಸಲು ಕರ್ನಾಟಕಕ್ಕೆ ಆಗಮಿಸಿದ್ದ ವ್ಯಕ್ತಿಯೋರ್ವ ಪಾನಮತ್ತನಾಗಿ ಆದಿವಾಸಿ ಮಹಿಳೆಯರ ಮೇಲೆ ಹಲ್ಲೆ ಮಾಡಲು ಮುಂದಾದ ಘಟನೆ ಕೇರಳ ಮತ್ತು ಕರ್ನಾಟಕ ಗಡಿಭಾಗ ಬಾವಲಿ ಹಾಡಿಯಲ್ಲಿ ಸೋಮವಾರ ನಡೆದಿದೆ.

ಇಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದು, ಇದರಿಂದ ಕೇರಳಿಗರ ಹಾವಳಿ ಹೆಚ್ಚಾಗಿದೆ ಎಂದು ಆರೋಪಿಸಿರುವ ಬಾವಲಿ ಹಾಡಿಯ ಆದಿವಾಸಿಗಳು ಈ ಮದ್ಯದ ಅಂಗಡಿ ತೆರವುಗೊಳಿಸಬೇಕು ಎಂದು ಪ್ರತಿಭಟನೆ ನಡೆಸುತ್ತಿದ್ದ ವೇಳೆ ಈ ಘಟನೆ ನಡೆದಿದ್ದು, ರೊಚ್ಚಿಗೆದ್ದ ಆದಿವಾಸಿ ಮಹಿಳೆಯರು, ಕುಡಿದ ಅಮಲಿನಲ್ಲಿದ್ದ ಕೇರಳ ನಿವಾಸಿಗಳಿಗೆ ಚಳಿ ಬಿಡಿಸಿದರು.



ಆದಿವಾಸಿ ಮಹಿಳೆ ಜಯಮ್ಮ ಮಾತನಾಡಿ, ಆದಿವಾಸಿಗಳು ವಾಸಿಸುವ ಮನೆಗಳ ಪಕ್ಕದಲ್ಲಿ ಮದ್ಯದ ಅಂಗಡಿ ತೆರೆದಿದ್ದಾರೆ. ಕೇರಳಿಗರು ಕುಡಿದು ಇಲ್ಲಿನ ಮನೆಗಳಿಗೆ ನುಗ್ಗುತ್ತಿದ್ದಾರೆ. ಈಗ ಬಾರ್ ಓಪನ್ ಮಾಡಿರುವ ಸ್ಥಳದಿಂದ ಕೇವಲ 100 ಮೀಟರ್ ದೂರದಲ್ಲಿ ದೇವಾಲಯವಿದೆ. ಅಲ್ಲದೇ ಶಾಲೆ ಕೂಡ ಇದೆ. ಆದರೂ ಸಹ ಇಲ್ಲಿ ಎಗ್ಗಿಲ್ಲದೇ ಮದ್ಯ ಮಾರಾಟ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಹಾಡಿಯ ನಿವಾಸಿ ನಾಗೇಶ್ ಮಾತನಾಡಿ, ಹಿಂದೆ ಶಿಖಾ ಅವರು ಜಿಲ್ಲಾಧಿಕಾರಿಯಾಗಿದ್ದ ವೇಳೆ ಆದಿವಾಸಿ ಮಹಿಳೆಯರ ಮೇಲೆ ಕೇರಳಿಗರು ಕುಡಿದು ದೌರ್ಜನ್ಯ ಎಸಗಿದ ಕಾರಣ ಇಲ್ಲಿನ ಬಾರ್ ಅನ್ನು ಬಂದ್ ಮಾಡಿದ್ದರು. ಅಲ್ಲದೇ ಅರಣ್ಯದಲ್ಲಿ ಮದ್ಯ ಮಾರಾಟ ಮಾಡಬಾರದು ಎಂದು ಕಾನೂನನ್ನು ಜಾರಿಗೊಳಿಸಲಾಗಿತ್ತು. ಆದರೆ ಈಗ ಆದಿವಾಸಿಗಳಾದ ನಮ್ಮ ಮನೆಗಳ ಮುಂದೆಯೇ ನೂತನ ಮದ್ಯದ ಅಂಗಡಿ ತೆರೆಯಲಾಗಿದೆ. ಕೇರಳದಲ್ಲಿ ಮದ್ಯ ಸಿಗದ ಕಾರಣ ಅಲ್ಲಿನ ನಿವಾಸಿಗಳು ಇಲ್ಲಿಗೆ ಬಂದು ಮದ್ಯ ಸೇವಿಸಿ ದಾಂಧಲೆ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಮದ್ಯದಂಗಡಿ ತೆರವಿಗಾಗಿ ನಡೆದ ಪ್ರತಿಭಟನೆಯಲ್ಲಿ ಆದಿವಾಸಿಗಳಾದ ಸುಬ್ರಹ್ಮಣ್ಯ, ರಾಜು ಸಿ.ಕೆ., ಮನೋಜ್, ಮಹೇಶ, ರಾಜೇಶ್, ಸಜ್ಜಪ್ಪ, ಸುಬ್ಬು, ಚಂದ್ರು, ಚಿನ್ನಪ್ಪ, ಲೀಲಾ, ಸರೋಜಿನಿ, ಅಮ್ಮಣ್ಣಿ, ಸುಂದ್ರಿ, ರುಕ್ಮಿಣಿ, ದೀಪು, ಸುನಿದ, ಜಾನಕಿ, ಸುಮತಿ, ಕಾಳಿ, ಜಂದು, ಪೋನ್ನೆ, ನಂಜ, ತಂಗೆ, ಸಾಂಡ, ಲಕ್ಷ್ಮಿ, ಪಾರು, ಪ್ರೇಮ ಇನ್ನಿತರರಿದ್ದರು.

ಈ ಮದ್ಯದ ಅಂಗಡಿ ವಿಚಾರದಲ್ಲಿ ಇಲ್ಲಿನ ಗ್ರಾಪಂ ಅಧ್ಯಕ್ಷರು, ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಅಬಕಾರಿ ಇಲಾಖೆ ಅಧಿಕಾರಿಗಳು ಶಾಮೀಲಾಗಿದ್ದು, ಬಾರ್‌ನಲ್ಲಿ ರಾಜಾರೋಷವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ. ಅದನ್ನು ಕೇಳಲು ಹೋದ ಆದಿವಾಸಿಗಳಾದ ನಮ್ಮ ಮೇಲೆ ಕೇರಳಿಗರನ್ನು ಎತ್ತಿ ಕಟ್ಟಿ ನಮ್ಮ ಮೇಲೆ ಕೈ ಮಾಡಲು ಬಾರ್ ಮಾಲೀಕರು ಮುಂದಾಗುತ್ತಿದ್ದಾರೆ. ನಮಗೆ ಪ್ರಾಣ ಭಯವಿದೆ. ಆದ್ದರಿಂದ ಜಿಲ್ಲಾಧಿಕಾರಿಗಳು ಈ ಮದ್ಯದಂಗಡಿ ತೆರವುಗೊಳಿಸಿ, ನಮಗೆ ಜೀವ ಬೆದರಿಕೆ ಹಾಕಿರುವ ಕೇರಳಿಗರ ಮೇಲೆ ಕ್ರಮ ಕೈಗೊಳ್ಳಬೇಕು.

–ಲೀಲಾ, ಆದಿವಾಸಿ ಮಹಿಳೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಸೈರನ್ 108 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸೈತಾನ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕರಟಕ ದಮನಕ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಂಗನಾಯಕ (ಕ)	4 ಪ್ರದರ್ಶನಗಳು
ರಾಜಕಮಲ್	
ಯೋಧ (ಹಿಂ)	4 ಪ್ರದರ್ಶನಗಳು
ಸಂಗಂ	
ಕೆರೆಬೇಟೆ (ಕ)	4 ಪ್ರದರ್ಶನಗಳು
ಲಿಡೋ	
ಹೈಡ್ ಅಂಡ್ ಸೀಕ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸೈರನ್ (ತ)	4 ಪ್ರದರ್ಶನಗಳು
ಪ್ರಭಾ	
ಸೋಮು ಸೌಂಡ್ ಇಂಜಿನಿಯರ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕುಂಗ್ ಫು ಪಾಂಡ 4(3ಡಿ) (ಇಂ): ಬೆ.10.20ಕ್ಕೆ, ಸಂ.5.45ಕ್ಕೆ, ರಾ.7.50ಕ್ಕೆ, ರಾ.9.55ಕ್ಕೆ, ಕರಟಕ ದಮನಕ (ಕ): ಮ.12.25ಕ್ಕೆ, ಚೌಚೌ ಬಾತ್ (ಕ): ಮ.3.25ಕ್ಕೆ.
ಸ್ಕ್ರೀನ್ 2	ಹೈಡ್ & ಸೀಕ್ (ಕ): ಬೆ.10.25ಕ್ಕೆ, ಡ್ಯೂನ್ ಪಾರ್ಟ್2 (ಇಂ): ಮ.1ಕ್ಕೆ, ಆರ್ಟಿಕಲ್ 370 (ಹಿಂ): ಸಂ.4.10ಕ್ಕೆ, ಕರಟಕ ದಮನಕ (ಕ): ರಾ.7.15ಕ್ಕೆ, ಸೋಮು ಸೌಂಡ್ ಇಂಜಿನಿಯರ್ (ಕ): ರಾ.10.15ಕ್ಕೆ.
ಸ್ಕ್ರೀನ್ 3	ಮೆಹಬೂಬ (ಕ): ಬೆ.10.50ಕ್ಕೆ, ಕೆರೆಬೇಟೆ (ಕ): ಮ.1.35ಕ್ಕೆ, ಬಸ್ತಾರ್ ದಿ ನಕ್ಸಲ್ ಸ್ಟೋರಿ (ಹಿಂ): ಸಂ.4.30ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.7ಕ್ಕೆ, ರಜಾಕರ್ ಸೈಲೆಂಟ್ ಜೆನೋಸೈಡ್ ಆಫ್ ಹೈದ್ರಾಬಾದ್ (ತೆ): ರಾ.9.45ಕ್ಕೆ.
ಸ್ಕ್ರೀನ್ 4	ಜಾಕಿ (ಕ): ಬೆ.8ಕ್ಕೆ, ಬೆ.10.50ಕ್ಕೆ, ರಾ.10.10ಕ್ಕೆ, ಸೈತಾನ್ (ಹಿಂ): ಮ.1.45ಕ್ಕೆ, ಯೋಧ (ಹಿಂ): ಸಂ.4.30ಕ್ಕೆ, ರಾ.7.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಆಪರೇಷನ್ ವ್ಯಾಲೆಂಟೈನ್ (ತೆ): ಬೆ.9.55ಕ್ಕೆ, ಲಾಪತಾ ಲೇಡಿಸ್ (ಹಿಂ): ಮ.12.45ಕ್ಕೆ, ಡ್ಯೂನ್ ಪಾರ್ಟ್2 (ಇಂ): ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಡ್ಯೂನ್ ಪಾರ್ಟ್2 (ಇಂ): ಬೆ.9.50ಕ್ಕೆ, ಮ.1.20ಕ್ಕೆ, ಕ್ರೀಂ (ಕ): ಸಂ.4.50ಕ್ಕೆ, ಆಪರೇಷನ್ ವ್ಯಾಲೆಂಟೈನ್ (ತೆ): ರಾ.7.25ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಲಾಪತಾ ಲೇಡಿಸ್ (ಹಿಂ): ಬೆ.10ಕ್ಕೆ, ರಾ.7.25ಕ್ಕೆ, ಆರ್ಟಿಕಲ್ 370 (ಹಿಂ): ಮ.12.45ಕ್ಕೆ, ಸಂ.4.05ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4	ಆಪರೇಷನ್ ವ್ಯಾಲೆಂಟೈನ್ (ತೆ): ಮ.12ಕ್ಕೆ, ಉಪಾಧ್ಯಕ್ಷ (ಕ): ಮ.3.05ಕ್ಕೆ, ಒಂದು ಸರಳ ಪ್ರೇಮಕಥೆ (ಕ): ಸಂ.6.20ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಆರ್ಟಿಕಲ್ 370 (ಹಿಂ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ಡ್ಯೂನ್ ಪಾರ್ಟ್ 2 (ಇಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ಡೆಮೋನ್ ಸ್ಲೇಯರ್ (ಜ): ಸಂ.4.30ಕ್ಕೆ, ಆಪರೇಷನ್ ವ್ಯಾಲೆಂಟೈನ್ (ತೆ & ಹಿಂ): ಬೆ.9.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ಲಾಪತಾ ಲೇಡಿಸ್ (ಹಿಂ): ಬೆ.10.35ಕ್ಕೆ, ಸಂ.4.10ಕ್ಕೆ, ರಾ.9.45ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಬೆ.10.20ಕ್ಕೆ, ಮ.1.25ಕ್ಕೆ, ರಾ.7.25ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.11.55ಕ್ಕೆ, ಕ್ರೀಂ (ಕ): ಸಂ.6.55ಕ್ಕೆ, ಪ್ರೇಮಲು (ಮ): ರಾ.10.20ಕ್ಕೆ, ಜೋಶುವಾ (ತ): ಮ.1.20ಕ್ಕೆ, ಸಂ.6.55ಕ್ಕೆ, ಭ್ರಮಯುಗಂ (ಮ): ರಾ.9.45ಕ್ಕೆ, ವಾರನಂ ಆಯಿರಂ (ತ): ಮ.3.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕೊತ್ತೇಗಾಲ ಡೈರಿಗೆ ಜಯರಾಮೇಗೌಡ ಅಧ್ಯಕ್ಷ



ಡೈರಿ ಅಧ್ಯಕ್ಷ ಜಯರಾಮೇಗೌಡರನ್ನು ನಿರ್ದೇಶಕರು ಅಭಿನಂದಿಸಿದರು.

ಹಿರೀಕ್ಯಾತನಹಳ್ಳಿ, ಮಾ.18– ಹುಣಸೂರು ತಾಲೂಕಿನ ಕೊತ್ತೇಗಾಲ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಜಯರಾಮೇಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಹಿಂದಿನ ಅಧ್ಯಕ್ಷ ಗೋವಿಂದ ನಾಯಕ ಅವರು ಆಂತರಿಕ ಒಪ್ಪಂದ ದಂತೆ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರಿಂದ ಅವರಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಜಯರಾಮೇಗೌಡ ಅವರನ್ನು ಹೊರತು ಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿಯಾದ ಸಹಕಾರ ಇಲಾಖೆಯ ಶಿಲ್ಪಶ್ರೀ ಘೋಷಿಸಿದರು.

ಈ ಸಂದರ್ಭ ಉಪಾಧ್ಯಕ್ಷೆ ಮಂಜುಳಮ್ಮ, ನಿರ್ದೇಶಕರಾದ ಶಿವಪ್ರಕಾಶ್, ಸಿ.ಮಾದೇಗೌಡ, ಮಲ್ಲೇಶ್, ಡಿ.ಗೋವಿಂದ ನಾಯಕ, ಮೂರ್ತಿ, ಪ್ರಭಾಕರ ಆಚಾರ್, ಮಾದೇಗೌಡ, ಕೆ.ವಿ.ಸುರೇಶ್, ಜಗದೀಶ್, ಪ್ರಮೋದ್, ಸಂಘದ ಕಾರ್ಯ ನಿರ್ವಹಣಾಧಿಕಾರಿ ಶಂಕರ್ ಹಾಜರಿದ್ದರು.

ಅಂಕನಹಳ್ಳಿ ಗ್ರಾಪಂಗೆ ಎನ್.ಶಿವಮಾದಯ್ಯ ಅಧ್ಯಕ್ಷ

ತಿ.ನರಸೀಪುರ, ಮಾ.18– ತಾಲೂಕಿನ ಅಂಕನಹಳ್ಳಿ ಗ್ರಾಪಂ ನೂತನ ಅಧ್ಯಕ್ಷರಾಗಿ ಎನ್.ಶಿವಮಾದಯ್ಯ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಹಿಂದಿನ ಅಧ್ಯಕ್ಷ ಡಿ.ಎಂ.ಸೋಮಶೇಖರ್ ಅವರು ಒಪ್ಪಂದದಂತೆ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ ಕಾರಣ ಗ್ರಾಪಂ ಆವರಣದಲ್ಲಿ ಸೋಮವಾರ ನಡೆದ ಚುನಾವಣೆಯಲ್ಲಿ ಸಾಮಾನ್ಯ ವರ್ಗಕ್ಕೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಶಿವಮಾದಯ್ಯ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿಯೂ ಆದ ಕಾವೇರಿ ನೀರಾವರಿ ನಿಗಮದ ಇಂಜಿನಿಯರ್ ಶಾಂತಕುಮಾರ್ ಅವಿರೋಧ ಆಯ್ಕೆಯನ್ನು ಘೋಷಿಸಿದರು.

ಒಟ್ಟು 19 ಸದಸ್ಯರ ಪೈಕಿ ಉಪಾಧ್ಯಕ್ಷೆ ಜ್ಯೋತಿ, ಸದಸ್ಯರಾದ ನಾಗರತ್ನಮ್ಮ, ಶಿವಮ್ಮ, ಹೊಂಬಮ್ಮ, ಎನ್.ನಿಂಗಯ್ಯ, ಎನ್.ರೇಣುಕಾ, ಟಿ.ಸಿ.ಜಯಲಕ್ಷ್ಮಿ, ಸವಿತಾ, ಕೆ.ಎಸ್.ನಾಗರಾಜು, ಪುಟ್ಟಸ್ವಾಮಿ, ಡಿ.ಆರ್.ಪುಷ್ಪ, ಎಂ.ಸಿ.ಸವಿತಾ, ಡಿ.ಎಂ.ಚನ್ನಮ್ಮ, ಶಿವಮ್ಮ, ಡಿ.ಎಂ.ಸೋಮಶೇಖರ್,



ಅಂಕನಹಳ್ಳಿ ಗ್ರಾಪಂ ಅಧ್ಯಕ್ಷರಾಗಿ ಎನ್.ಶಿವಮಾದಯ್ಯ ಆಯ್ಕೆಯಾಗಿದ್ದಾರೆ.

ಮಹೇಶ್ ಚುನಾವಣೆಗೆ ಹಾಜರಾಗಿ ಪಂಚಾಯಿತಿ ವರಿಷ್ಠರ ಆಯ್ಕೆಗೆ ಅನುಮೋದನೆ ನೀಡಿದರೆ, ಸದಸ್ಯೆ ಎನ್.ಸಂಗೀತಾ ಹಾಗೂ ಡಿ.ಆರ್. ಶಂಕರ್ ಕುಮಾರ್ ಗೈರಾಗಿದ್ದರು. ಪಿಡಿಓ ಕೆ.ಸಿ.ಸಂತೋಷ್ ಇದ್ದರು.

ನೂತನ ಅಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿದ ತಾಪಂ ಮಾಜಿ ಅಧ್ಯಕ್ಷೆ ಗಾಯತ್ರಿ ಸ್ವಾಮಿಗೌಡ, ಕ್ಷೇತ್ರದ ಶಾಸಕ ಹೆಚ್.ಸಿ.ಮಹದೇವಪ್ಪ ಅವರು ಜಿಲ್ಲಾ ಉಸ್ತುವಾರಿ ಸಚಿವರಾಗಿರುವುದರಿಂದ ಹೆಚ್ಚಿನ ಅನುದಾನ ತಂದು ಗ್ರಾಪಂ ವ್ಯಾಪ್ತಿಯ ಗ್ರಾಮಗಳನ್ನು ಅಭಿವೃದ್ಧಿಪಡಿಸಲು ನೂತನ ಅಧ್ಯಕ್ಷರು ಮುಂದಾಗಬೇಕು. ಸರ್ಕಾರದಿಂದ ಬರುವ ಅನುದಾನವನ್ನು ಅಧ್ಯಕ್ಷರು ಎಲ್ಲಾ ಗ್ರಾಮಗಳಿಗೂ ಸಮಾನವಾಗಿ ಹಂಚಿಕೆ ಮಾಡಿ ಮೂಲಸೌಕರ್ಯಕ್ಕೆ ಹೆಚ್ಚಿನ ಒತ್ತು ನೀಡಬೇಕೆಂದು ಸಲಹೆ ನೀಡಿದರು.

ಈ ವೇಳೆ ಎಪಿಎಂಸಿ ಮಾಜಿ ಸದಸ್ಯ ಕೆ.ಸಿ.ಮಹದೇವು, ಡಿ.ಎಸ್.ಮಲ್ಲೇಶ್, ಮೇಣಸಿ ಕ್ಯಾತನಹಳ್ಳಿ ಮಹದೇವ್, ಮಹದೇವು, ದೊಡ್ಡಮಲಗೂಡು ಮಲ್ಲೇಶ್, ಅಂಕನಹಳ್ಳಿ ಮಹದೇವ್, ಗುಡ್ಡದ ಕೊಪ್ಪಲು ದೊರೆಸ್ವಾಮಿ, ಶಿವು, ರಮೇಶ್, ಮಹೇಶ್ ಇತರರಿದ್ದರು.

ತಂಬಾಕು ಹರಾಜು ಅಂತ್ಯ: ಪ್ರತಿ ಕೆಜಿಗೆ 257.46 ರೂ.

ಬರಗಾಲದಲ್ಲೂ ರೈತರ ಕೈ ಹಿಡಿದ ತಂಬಾಕು: ಸುಬ್ಬರಾವ್

ಹುಣಸೂರು, ಮಾ.18– ತಾಲೂಕಿನ ಕಟ್ಟೆಮಳಲವಾಡಿ ತಂಬಾಕು ಹರಾಜು ಮಾರುಕಟ್ಟೆಯಲ್ಲಿ ಪ್ರಸಕ್ತ ಸಾಲಿನ ಹರಾಜು ಪ್ರಕ್ರಿಯೆ ಅಂತ್ಯಗೊಂಡಿದ್ದು, ಈ ಬಾರಿ ಪ್ರತಿ ಕೆಜಿ ತಂಬಾಕಿಗೆ ದಾಖಲೆಯ ಸರಾಸರಿ 257.46 ರೂ ದೊರಕಿದ್ದು, ಆ ಮೂಲಕ ಭೀಕರ ಬರಗಾಲದಲ್ಲೂ ತಂಬಾಕು ಬೆಳೆ ರೈತರ ಕೈ ಹಿಡಿದಿದೆ ಎಂದು ತಂಬಾಕು ಮಂಡಳಿ ಪ್ರಾದೇಶಿಕ ವ್ಯವಸ್ಥಾಪಕ ಸುಬ್ಬರಾವ್ ತಿಳಿಸಿದ್ದಾರೆ.



2023–24ನೇ ಸಾಲಿನಲ್ಲಿ 100 ಮಿಲಿಯನ್ ತಂಬಾಕು ಮಾರಾಟ ಮಾಡಲು ತಂಬಾಕು ಮಂಡಳಿ ಅವಕಾಶ ನೀಡಿತ್ತು. ಆದರೆ 88.86 ಮಿಲಿಯನ್ ಮಾರಾಟ ಮಾಡಲಾಗಿದೆ. ಇದರಲ್ಲಿ ಉತ್ತಮ ದರ್ಜೆಯ ತಂಬಾಕು ಪ್ರತಿ ಕೆಜಿಗೆ 269.30 ರೂ., ಮಧ್ಯಮ ದರ್ಜೆ ತಂಬಾಕು 259.20 ರೂ. ಹಾಗೂ ಕೆಳ ದರ್ಜೆಯ ತಂಬಾಕು 238.70 ರೂ.ಗೆ ಮಾರಾಟವಾಗಿದೆ. ಕಳೆದ ವರ್ಷ ಉತ್ತಮ ದರ್ಜೆಯ ತಂಬಾಕು 234.10 ರೂ., ಮಧ್ಯಮ ದರ್ಜೆ ತಂಬಾಕು 232.38 ರೂ. ಹಾಗೂ ಕೆಳ ದರ್ಜೆಯ ತಂಬಾಕಿಗೆ 211.28 ರೂ. ಬೆಲೆ ದೊರೆತ್ತಿತ್ತು. ಒಟ್ಟಾರೆ ಈ ಅಂಕಿ ಅಂಶಗಳನ್ನು ಗಮನಿಸಿದರೇ ಕಳೆದ ಬಾರಿಗಿಂತ ಈ ಬಾರಿ ಪ್ರತಿ ಕೆಜಿಗೆ 29.46 ರೂ. ಹೆಚ್ಚಾಗಿದೆ ಎಂದರು.

ತಂಬಾಕು ಮಂಡಳಿ ಹರಾಜು ಮಾರುಕಟ್ಟೆಗಳಲ್ಲಿ ಕಳೆದ ವರ್ಷದಿಂದ ಹುಡಿ ಮಾರಾಟಕ್ಕೆ ಅವಕಾಶ ನೀಡಿದ್ದು, ಕಳೆದ ವರ್ಷ ಪ್ರತಿ ಕೆಜಿ 107.43 ರೂ.ಗಳಿಗೆ ಮಾರಾಟವಾಗಿತ್ತು. ಈ ಬಾರಿ 141.54 ರೂ. ಬೆಲೆ ದೊರೆತಿದ್ದು, 3.62 ಮಿಲಿಯನ್ ಕೆಜಿ ಹುಡಿ ಮಾರಾಟವಾಗಿದೆ. ತಂಬಾಕು ಬೆಳೆಗಾರರು ತಂಬಾಕು ಬೆಳೆಯನ್ನು ತಮ್ಮ ಅಧಿಕೃತ ಭೂಮಿಯಲ್ಲಿ ಬೆಳೆಯಬೇಕು. ಉಳಿದ ಭೂಮಿಯಲ್ಲಿ ಪರ್ಯಾಯ ಬೆಳೆಗಳನ್ನು ಬೆಳೆಯಬೇಕು ಎಂದು ರೈತರಿಗೆ ತಿಳಿಸಿದ್ದಾರೆ.

10 ವರ್ಷಗಳಲ್ಲಿ ಅತೀ ಹೆಚ್ಚಿನ ದರ: ಕಳೆದ 10 ವರ್ಷಗಳಲ್ಲಿ ತಂಬಾಕಿಗೆ ಈ ಬಾರಿ ದಾಖಲೆಯ ಬೆಲೆ ದೊರೆತಿದೆ. 2014–15ರಲ್ಲಿ ಸರಾಸರಿ ಬೆಲೆ 107.49 ರೂ., 2015–16ರಲ್ಲಿ ಸರಾಸರಿ ಬೆಲೆ 132.14 ರೂ., 2016–17ರಲ್ಲಿ ಸರಾಸರಿ ಬೆಲೆ 134.58 ರೂ., 2017–18ರಲ್ಲಿ ಸರಾಸರಿ ಬೆಲೆ 139.30 ರೂ., 2018–19ರಲ್ಲಿ ಸರಾಸರಿ ಬೆಲೆ 142.28 ರೂ., 2019–20ರಲ್ಲಿ ಸರಾಸರಿ ಬೆಲೆ 124.06 ರೂ., 2020–21ರಲ್ಲಿ ಸರಾಸರಿ ಬೆಲೆ 119.87 ರೂ., 2021–22ರಲ್ಲಿ ಸರಾಸರಿ ಬೆಲೆ 163.11 ರೂ., 2022–23ರಲ್ಲಿ ಸರಾಸರಿ ಬೆಲೆ 228.01 ರೂ.ಗೆ ತಲುಪಿತ್ತು. 2021–22ಕ್ಕೆ ಹೋಲಿಸಿದರೆ 2022–23ರಲ್ಲಿ ತಂಬಾಕಿನ ಬೆಲೆ ಶೇ.39.75ರಷ್ಟು ಹೆಚ್ಚಾಗಿತ್ತು. ಇದೀಗ ಪ್ರಸಕ್ತ ಸಾಲಿನ ಅಂತ್ಯಕ್ಕೆ ಮತ್ತೆ ಶೇ.12.92 ರಷ್ಟು ಹೆಚ್ಚಾಗಿ ಕೆಜಿ ತಂಬಾಕಿಗೆ ಸರಾಸರಿ 257.45 ರೂ. ದೊರಕಿದ್ದು, ದಶಕದಲ್ಲೇ ಹೆಚ್ಚಿನ ದರ ಸಿಕ್ಕಿದಂತಾಗಿದೆ ಎಂದರು.

ಮೂಗೂರಲ್ಲಿ ನಟ ಪುನೀತ್ ಹುಟ್ಟುಹಬ್ಬ ಆಚರಣೆ



ಮೂಗೂರಲ್ಲಿ ಪುನೀತ್ ರಾಜಕುಮಾರ್ ಹುಟ್ಟುಹಬ್ಬ ಆಚರಿಸಲಾಯಿತು.

ಮೂಗೂರು, ಮಾ.18– ಗ್ರಾಮದ ಅಪ್ಪು ಅಭಿಮಾನಿ ಬಳಗದಿಂದ ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರ 49ನೇ ಹುಟ್ಟುಹಬ್ಬವನ್ನು ಕೇಕ್ ಕತ್ತರಿಸುವ ಮೂಲಕ ವಿಜೃಂಭಣೆಯಿಂದ ಆಚರಿಸಲಾಯಿತು.

ಗ್ರಾಮದ ಮುಖಂಡ ಗೌಡರ ಪುಟ್ಟು ಪುನೀತ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿ, ಪುನೀತ್ ರಾಜ್‌ಕುಮಾರ್ ಕನ್ನಡ ಚಿತ್ರರಂಗದ ಮೇರುನಟನಾಗಿ ತಮ್ಮ ಜೀವಿತದ ಕೊನೆವರೆಗೂ ದೀನ, ದುರ್ಬಲರ ಏಳಿಗೆಗಾಗಿ ಶ್ರಮಿಸುವ ಮೂಲಕ ಸಮಾಜಕ್ಕೆ ಉತ್ತಮ ಕೊಡುಗೆ ನೀಡಿದ್ದಾರೆ. ಇಂದು ಅವರು ನಮ್ಮೊಂದಿಗೆ ಇಲ್ಲದಿದ್ದರೂ ಕನ್ನಡಿಗರ ಮನದಲ್ಲಿ ಚಿರಸ್ಥಾಯಿಯಾಗಿ ಉಳಿದಿದ್ದಾರೆ ಎಂದರು. ಈ ವೇಳೆ ಹೋಟೆಲ್ ಕುಮಾರ್, ಭರತ್ ಕುಮಾರ್, ಅಭಿಷೇಕ್, ಮಹದೇವಸ್ವಾಮಿ, ಕಿರಣ್ ಕುಮಾರ್, ನಾಗಪ್ಪ ಇತರರಿದ್ದರು.



ಬನ್ನೂರು ಸಮೀಪದ ಮಲಿಯೂರು ಗ್ರಾಮದಲ್ಲಿ ನಡೆದ ಕಬಡ್ಡಿ ಪಂದ್ಯಾವಳಿಯಲ್ಲಿ ಪ್ರಥಮ ಬಹುಮಾನ ಪಡೆದ ತುರಗನೂರು ಯುವಕರ ತಂಡಕ್ಕೆ ಮಲಿಯೂರು ಗ್ರಾಪಂ ಅಧ್ಯಕ್ಷೆ ರೇಖಾ ಬಹುಮಾನ ವಿತರಿಸಿದರು. ಈ ವೇಳೆ ಭಾಗ್ಯಲಕ್ಷ್ಮಿ, ಮಹದೇವಮ್ಮ, ಶಿಲ್ಪ ಸೇರಿದಂತೆ ಇತರರಿದ್ದರು.

ಕಟ್ಟಡದ ಮೇಲ್ಭಾಗದ ಗಾರೆ ಬಿದ್ದು ವೃದ್ಧೆಗೆ ತೀವ್ರ ಗಾಯ

ಹುಣಸೂರು, ಮಾ.18– ಕಟ್ಟಡದ ಮೇಲ್ಭಾಗದ ಗಾರೆ ಬಿದ್ದು ವೃದ್ಧೆ ತೀವ್ರ ಗಾಯಗೊಂಡಿರುವ ಘಟನೆ ನಗರದ ತಾಲೂಕು ಕಚೇರಿಯಲ್ಲಿ ನಡೆದಿದೆ.

ತಾಲೂಕಿನ ಕಳ್ಳಿಕೊಪ್ಪಲು ಗ್ರಾಮದ ಮಹದೇವು ಅವರ ಪತ್ನಿ ನಾಗಮ್ಮ(68) ಗಾಯಗೊಂಡವರು. ಈಕೆ ಹುಣಸೂರಿನ ಉಪನೋಂದಣಾಧಿಕಾರಿ ಕಚೇರಿಯಲ್ಲಿ ತಮ್ಮ ಜಮೀನಿನ ನೋಂದಣಿ ಮಾಡಿಸಲು ತಾಲೂಕು ಕಚೇರಿಯಲ್ಲಿ ಕುಳಿತ್ತಿದ್ದ ವೇಳೆ ಕಟ್ಟಡದ ಮೇಲ್ಭಾಗದ ಗಾರೆ ನಾಗಮ್ಮ ಅವರ ಕಾಲಿನ ಮೇಲೆ ಬಿದ್ದಿದೆ. ಪರಿಣಾಮ ಆಕೆಯ ಕಾಲಿನ ಬೆರಳುಗಳು ತುಂಡಾಗಿದೆ. ಈ ವೇಳೆ ನಾಗಮ್ಮ ಅವರ ಸಹಾಯಕ್ಕೆ ಯಾರೂ ಆಗಮಿಸಲಿಲ್ಲ. ವಿಷಯ ತಿಳಿದ ಉಪ ತಹಸೀಲ್ದಾರ್ ಅರುಣ್ ಗಾಯಗೊಂಡಿದ್ದ ನಾಗಮ್ಮಳನ್ನು ತಮ್ಮ ವಾಹನದಲ್ಲೇ ಕರೆದೊಯ್ದು ನಗರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದರು.

ಇದೇ ವೇಳೆ ವಿಷಯ ತಿಳಿದು ತಹಸೀಲ್ದಾರ್ ಆಸ್ಪತ್ರೆಗೆ ಭೇಟಿ ನೀಡಿ ನಾಗಮ್ಮ ಅವರ ಆರೋಗ್ಯ ವಿಚಾರಿಸಿದರು. ಅಲ್ಲದೇ ದಸಂಸ ಮುಖಂಡ ನಿಂಗರಾಜ್ ಮಲ್ಲಾಡಿ ಸಹ ವೃದ್ಧೆ ಆರೋಗ್ಯ ವಿಚಾರಿಸಿ ಮಾತನಾಡಿ, ತಹಸೀಲ್ದಾರ್ ಕಚೇರಿ ಸೇರಿದಂತೆ ನಗರದ ಎಲ್ಲಾ ಕಚೇರಿಗಳು ಶಿಥಿಲಗೊಂಡಿವೆ. ನಿತ್ಯ ತಮ್ಮ ಕೆಲಸ ಕಾರ್ಯಗಳಿಗಾಗಿ ಸಾವಿರಾರು ಮಂದಿ ಕಚೇರಿಗಳಿಗೆ ಆಗಮಿಸುವುದರಿಂದ ಎಲ್ಲಾ ಕಚೇರಿಗಳ ದುರಸ್ತಿಗೆ ಕ್ರಮ ಕೈಗೊಳ್ಳಬೇಕು ಎಂದು ತಹಸೀಲ್ದಾರ್‌ಗೆ ಮನವಿ ಮಾಡಿದರು.

ನೇಮಕ



ತಿ.ನರಸೀಪುರ, ಮಾ.18– ಮೈಸೂರು ಜಿಲ್ಲೆಯ ಕಲೆ ಮತ್ತು ಸಾಂಸ್ಕೃತಿಕ ಪ್ರಕೋಷ್ಠ ಸಂಚಾಲಕರಾಗಿ ರಂಗಭೂಮಿ ಕಲಾವಿದ ಕೆಬ್ಬೇಹುಂಡಿ ಶಿವಕುಮಾರ್ ಅವರನ್ನು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರ ಆದೇಶದ ಮೇರೆಗೆ ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

ಮೊಹಮ್ಮದ್ ಅನ್ವರ್ ನಿಧನ

ಹುಣಸೂರು, ಮಾ.18– ನಗರದ ಬಜಾರ್ ರಸ್ತೆಯ ಜಾಮಿಯಾ ಮಸೀದಿ ಅಧ್ಯಕ್ಷರೂ ಆದ ಮುಸ್ಲಿಂ ಬ್ಲಾಕ್ ನಿವಾಸಿ ಮೊಹಮ್ಮದ್ ಅನ್ವರ್ (83) ಸೋಮವಾರ ನಿಧನರಾದರು.



ಮೃತರು ಪತ್ನಿ, ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಧ್ಯಾಹ್ನ ಶಬ್ಬೀರ್ ನಗರದ ಸ್ಮಶಾನದಲ್ಲಿ ನೆರವೇರಿತು.

ಪುಟ್ಟವೀರಣ್ಣ

ಸರಗೂರು, ಮಾ.18– ಪಟ್ಟಣದ ನಿವಾಸಿ ಸಾಹುಕಾರ್ ಲೇ. ವೀರಭದ್ರಪ್ಪನವರ ಪುತ್ರ ಪುಟ್ಟವೀರಣ್ಣ (69) ಸೋಮವಾರ ನಿಧನರಾದರು.



ಮೃತರು ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ಮೈಸೂರಿನ ವಿದ್ಯಾರಣ್ಯಪುರನಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚಾಮರಾಜನಗರ, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲು

ಸುನೀಲ್ ಬೋಸ್, ಡಾ.ಯತೀಂದ್ರಗೆ ಕಾಂಗ್ರೆಸ್ ಟಿಕೆಟ್ ನೀಡಲಿ

ತಿ.ನರಸೀಪುರ, ಮಾ.18– ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಚಾಮರಾಜನಗರದಿಂದ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಪುತ್ರ ಸುನೀಲ್ ಬೋಸ್ ಹಾಗೂ ಮೈಸೂರು–ಕೊಡಗು ಕ್ಷೇತ್ರದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ ಡಾ.ಯತೀಂದ್ರ ಅಥವಾ ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಬಿ.ಜೆ. ವಿಜಯಕುಮಾರ್ ಅವರಿಗೆ ಕಾಂಗ್ರೆಸ್ ಪಕ್ಷ ಟಿಕೆಟ್ ನೀಡಬೇಕು ಎಂದು ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಆಗ್ರಹಿಸಿದರು.



ಸುದ್ದಿಗೋಷ್ಠಿಯಲ್ಲಿ ತಾಪಂ ಮಾಜಿ ಅಧ್ಯಕ್ಷ ಬಿ.ಮರಯ್ಯ ಮಾತನಾಡಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದೆ ನಡೆದ ಚುನಾವಣೆಗಳಲ್ಲಿ ಕ್ಷೇತ್ರದ ಜನತೆ ಸಿದ್ದರಾಮಯ್ಯ ಅವರನ್ನು ಅಧಿಕ ಮತಗಳಿಂದ ಗೆಲ್ಲಿಸಿ 2 ಬಾರಿ ಮುಖ್ಯಮಂತ್ರಿ ಮಾಡಿದ್ದಾರೆ. ಡಾ. ಹೆಚ್.ಸಿ. ಮಹದೇವಪ್ಪ ಅವರನ್ನು ಗೆಲ್ಲಿಸಿ ಸಚಿವರನ್ನಾಗಿ ಮಾಡಿದ್ದಾರೆ. ಕ್ಷೇತ್ರದ ಜನರು ಮುಖ್ಯಮಂತ್ರಿ ಹಾಗೂ ಸಚಿವರನ್ನು ಕೊಟ್ಟು ತಮ್ಮ ಸಾಮರ್ಥ್ಯ ತೋರಿಸಿದ್ದಾರೆ. ಹೀಗಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ವರಿಷ್ಠರಾದ ಸೋನಿಯಾ ಗಾಂಧಿ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕ್ಷೇತ್ರದ ಮತದಾರರ ಅಭಿಪ್ರಾಯ ಪರಿಗಣಿಸಿ ಪಕ್ಷದ ಸಂಘಟನೆಗೆ ದುಡಿದ ಹಾಗೂ ಗೆಲ್ಲುವ ಅಭ್ಯರ್ಥಿ ಗಳಾದ ಸುನೀಲ್ ಬೋಸ್, ಡಾ.ಯತೀಂದ್ರ ಅಥವಾ ಡಾ.ಬಿ.ಜೆ.ವಿಜಯ ಕುಮಾರ್‌ರಿಗೆ ಟಿಕೆಟ್ ನೀಡಬೇಕೆಂದು ಒತ್ತಾಯಿಸಿದರು.

ಕಳೆದ 40 ವರ್ಷಗಳಿಂದ ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದಲ್ಲಿ ಹೊರಗಿನ ಅಭ್ಯರ್ಥಿಗಳಿಗೆ ಹೈಕ ಮಾಂಡ್ ಮಣೆ ಹಾಕುತ್ತಾ ಬಂದಿದೆ. ಹಿಂದೆ ಇಲ್ಲಿ ಸ್ಪರ್ಧಿಸಿದ್ದ ಸಿದ್ದರಾಜು, ಶ್ರೀನಿವಾಸ ಪ್ರಸಾದ್ ಹಾಗೂ ಶಿವಣ್ಣ ಅವರು ಗೆದ್ದು ಪಾರ್ಲಿಮೆಂಟ್ ಪ್ರವೇಶ ಮಾಡಿದ್ದಾರೆ. ಇದರಿಂದ ಸ್ಥಳೀಯರಿಗೆ ಅವಕಾಶ ಇಲ್ಲದಂತಾಗಿದೆ. ಹೀಗಾಗಿ ಈ ಬಾರಿ ಹಾಗಾಗುವುದು ಬೇಡ. 10 ವರ್ಷ ಪಕ್ಷದಲ್ಲಿ ದುಡಿದಿರುವ ಡಾ.ಬಿ.ಜೆ.ವಿಜಯ ಕುಮಾರ್ ಅಥವಾ ಮಾಜಿ ಶಾಸಕ ಡಾ.ಯತೀಂದ್ರರಿಗೆ ಟಿಕೆಟ್ ನೀಡಬೇಕು. ಜಾರಿಗೆ ತಂದಿದ್ದು, ಇವು ಪಕ್ಷದ ಗೆಲುವಿಗೆ ಸಹಕಾರಿಯಾಗಲಿದೆ. ಹೀಗಾಗಿ ಚಾಮರಾಜ ನಗರದಿಂದ ಸುನೀಲ್ ಬೋಸ್, ಮೈಸೂರು– ಕೊಡಗು ಕ್ಷೇತ್ರದಿಂದ ಸ್ಪರ್ಧಿಸಲು ಡಾ.ಯತೀಂದ್ರ ಅಥವಾ ಬಿ.ಜೆ. ವಿಜಯ ಕುಮಾರ್‌ಗೆ ಟಿಕೆಟ್ ನೀಡಬೇಕು. ಇವರಿಗೆ ಕಾಂಗ್ರೆಸ್ ಟಿಕೆಟ್ ನೀಡಿದ್ದೆ ಆದಲ್ಲಿ ನಾವೆಲ್ಲಾ ಹಗಲಿರುಳು ದುಡಿದು ಗೆಲ್ಲಿಸಿ ಪಾರ್ಲಿಮೆಂಟ್‌ಗೆ ಕಳುಹಿಸಿ ಕೊಡುತ್ತೇವೆ. ಒಂದು ವೇಳೆ ನಮ್ಮ ಅಭ್ಯರ್ಥಿಗಳಿಗೆ ಟಿಕೆಟ್ ನೀಡದಿದ್ದಲ್ಲಿ ಕಾರ್ಯಕರ್ತರೊಡಗೂಡಿ ಪ್ರತಿಭಟನೆ ನಡೆಸ ಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಈ ವೇಳೆ ಆಲಗೂಡು ಘಟಕದ ಮಹದೇವು, ರಾಜು ಹಾಪ್‌ಕಾಮ್ಸ್ ಮಾಜಿ ಸದಸ್ಯ ಪ್ರಕಾಶ್ ಹಾಜರಿದ್ದರು.

ಹಾಗಾದಲ್ಲಿ ಮಾತ್ರ ಗೆಲುವು ಸಾಧ್ಯ ಎಂದರು.

ಲೋಕಸಭಾ ಕ್ಷೇತ್ರದ 8 ವಿಧಾನಸಭಾ ಕ್ಷೇತ್ರಗಳ ಪೈಕಿ ಹನೂರು ಕ್ಷೇತ್ರ ಹೊರತು ಪಡಿಸಿದರೆ ಉಳಿದ 7 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷವೇ ಗೆಲುವು ಸಾಧಿಸಿದೆ. ಹಾಗಾಗಿ ಪಕ್ಷಕ್ಕೆ ಗೆಲುವು ಸುಲಭವಾಗಲಿದೆ. ಅಲ್ಲದೇ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳುತ್ತಿದ್ದಂತೆ 5 ಗ್ಯಾರಂಟಿಗಳನ್ನು

ಬನ್ನೂರಿನ ವಿವಿಧೆಡೆ ಸುನೀಲ್ ಬೋಸ್ ಮಿಂಚಿನ ಸಂಚಾರ

ತಿ.ನರಸೀಪುರ: ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಹಾಗೂ ಯುವ ಮುಖಂಡ ಸುನೀಲ್ ಬೋಸ್ ಅವರು ಸೋಮವಾರ ತಾಲೂಕಿನ ಬನ್ನೂರಿನ ವಿವಿಧೆಡೆ ಮಿಂಚಿನ ಸಂಚಾರ ನಡೆಸಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರನ್ನು ಭೇಟಿ ಮಾಡಿ, ಚರ್ಚೆ ನಡೆಸಿದ್ದಾರೆ.



ಪಕ್ಷದ ಮುಖಂಡರ ಜೊತೆ ಚರ್ಚಿಸುತ್ತಿರುವ ಸುನೀಲ್ ಬೋಸ್

ಈಗಾಗಲೇ ಲೋಕಸಭಾ ಚುನಾವಣೆ ಕಾವು ರಂಗೇರಿದ್ದು, ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಲು ಸಚಿವ ಹೆಚ್.ಸಿ.ಮಹದೇವಪ್ಪ ಅವರ ಪುತ್ರ, ಯುವ ಮುಖಂಡ ಸುನೀಲ್ ಬೋಸ್ ಹೆಸರು ಅಂತಿಮ ಎನ್ನಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸುನೀಲ್ ಬೋಸ್ ಕ್ಷೇತ್ರಾದ್ಯಂತ ಸಂಚಾರ ಕೈಗೊಂಡಿದ್ದು, ಇಂದು ಬನ್ನೂರು ಭಾಗದ ಮುಖಂಡರನ್ನು ಭೇಟಿ ಮಾಡಿ ಮಾತುಕತೆ ನಡೆಸಿ ಚುನಾವಣೆಗೆ ಸಜ್ಜಾಗುತ್ತಿದ್ದಾರೆ.

ಈ ವೇಳೆ ಮಾತನಾಡಿದ ಅವರು, ನನ್ನನ್ನು ಒಳಗೊಂಡಂತೆ ಚಾಮರಾಜನಗರ ಕ್ಷೇತ್ರದ ಟಿಕೆಟ್‌ಗೆ 8 ಮಂದಿ ಆಕಾಂಕ್ಷಿಗಳಿದ್ದಾರೆ. ಆದರೆ ನನಗೆ ಟಿಕೆಟ್ ಸಿಗುತ್ತದೆ ಎಂಬ ವಿಶ್ವಾಸವಿದೆ. ಒಂದು ವೇಳೆ ನನಗೆ ಟಿಕೆಟ್ ತಪ್ಪಿದರೆ ಪಕ್ಷ ಕಣಕ್ಕಿಳಿಸುವ ಅಭ್ಯರ್ಥಿ ಗೆಲುವಿಗೆ ಶ್ರಮಿಸುತ್ತೇನೆ ಎಂದರು.

ಈ ವೇಳೆ ಬನ್ನೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೇಶವ, ಅಶೋಕ್, ಅತ್ತಳ್ಳಿ ಗ್ರಾಪಂ ಸದಸ್ಯರಾದ ಸುನೀಲ್, ಮಹೇಶ್, ರಂಗಸ್ವಾಮಿ, ಪೈರಮೇಶ್ ಮತ್ತಿತರರಿದ್ದರು.

ಹಾಸನದಲ್ಲಿ ಪ್ರಜ್ವಲ್ ಸ್ಪರ್ಧೆಗೆ ಬಿಜೆಪಿ ಆಕ್ಷೇಪ


ಪ್ರಜ್ವಲ್ ರೇವಣ್ಣ

ಹಾಸನ: ಲೋಕಸಭೆ ಕ್ಷೇತ್ರದಲ್ಲಿ ಮೈತ್ರಿ ಅಭ್ಯರ್ಥಿಯಾಗಿರುವ ಪ್ರಜ್ವಲ್ ರೇವಣ್ಣ ಅವರನ್ನು ಬದಲಿಸುವಂತೆ ಎಚ್.ಡಿ. ರೇವಣ್ಣ ಅವರಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಸೂಚಿಸಿದ್ದು, ಜೆಡಿಎಸ್ ಪರ್ಯಾಯ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಲಿದೆಯೇ ಎನ್ನುವ ಚರ್ಚೆ ಶುರುವಾಗಿದೆ.

ಸ್ಥಳೀಯ ಬಿಜೆಪಿ ನಾಯಕರ ವಿರೋಧದ ನಡುವೆಯೂ ಮೈತ್ರಿಕೂಟದಲ್ಲಿ ಹಾಸನ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟು ಕೊಡಲಾಗಿದೆ. ಈಗ ವರಿಷ್ಠರ ಮಾತಿಗೆ ಕಟ್ಟುಬಿದ್ದಿರುವ ಸ್ಥಳೀಯ ಬಿಜೆಪಿ ಮುಖಂಡರು, ಪ್ರಜ್ವಲ್ ಬದಲು ಬೇರೆ ಅಭ್ಯರ್ಥಿಯನ್ನು ಕಣಕ್ಕಿಳಿಸಲು ಜೆಡಿಎಸ್‌ಗೆ ಸೂಚಿಸುವಂತೆ ವರಿಷ್ಠರ ಮೇಲೆ ಒತ್ತಡ ಹಾಕಿದ್ದಾರೆ. ಜೊತೆಗೆ, ಪ್ರಜ್ವಲ್ ಅವರ ಅನರ್ಹತೆ ಪ್ರಕರಣದ ವಿಚಾರಣೆ ಸುಪ್ರೀಂಕೋರ್ಟ್‌ನಲ್ಲಿ ನಡೆಯುತ್ತಿದ್ದು, ಚುನಾವಣೆಯ ಹೊತ್ತಿನಲ್ಲಿಯೇ ತೀರ್ಪು ಬಂದರೆ, ಮೈತ್ರಿಕೂಟಕ್ಕೆ ಮುಖಭಂಗವಾಗಲಿದೆ. ಸುರಕ್ಷತೆಗಾಗಿ ಬೇರೆ ಅಭ್ಯರ್ಥಿಯನ್ನು ಕಣಕ್ಕಿಳಿಸುವಂತೆ ಸೂಚಿಸಬೇಕು ಎಂದು ಬಿಜೆಪಿ ಮುಖಂಡರು, ದಾಖಲೆಗಳ ಸಹಿತ ಕೇಂದ್ರ ನಾಯಕರಿಗೆ ಮನವರಿಕೆ ಮಾಡಿದ್ದಾರೆ ಎನ್ನಲಾಗಿದೆ.

ಪ್ರಜ್ವಲ್ ಸ್ಪರ್ಧೆಗೆ ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪ್ರೀತಂ ಗೌಡ, ಮಾಜಿ ಶಾಸಕ ಎ.ಟಿ. ರಾಮಸ್ವಾಮಿ ಪ್ರಬಲ ವಿರೋಧ ವ್ಯಕ್ತಪಡಿಸಿದ್ದು, ಅಮಿತ್ ಶಾ ಮೈಸೂರಿಗೆ ಬಂದಾಗಲೂ ಅದನ್ನೇ ಹೇಳಿದ್ದರು. ಪ್ರಜ್ವಲ್ ವಿರುದ್ಧ ಪ್ರಕರಣ ದಾಖಲಿಸಿರುವ ಬಿಜೆಪಿ ಮುಖಂಡ ದೇವರಾಜೇಗೌಡರ ಮೂಲಕ ದಾಖಲೆಗಳನ್ನು ಅಮಿತ್ ಶಾ ಮುಂದಿಟ್ಟಿದ್ದು, ಮೈತ್ರಿ ಅಭ್ಯರ್ಥಿ ಬದಲಿಸುವಂತೆ ಪಟ್ಟು ಹಿಡಿದಿದ್ದಾರೆ ಎಂದು ತಿಳಿದು ಬಂದಿದೆ. ಎಚ್.ಡಿ. ದೇವೇಗೌಡರು ಅಥವಾ ಎಚ್.ಡಿ. ಕುಮಾರಸ್ವಾಮಿ ಸ್ಪರ್ಧಿಸಲಿ. ಇಲ್ಲದಿದ್ದರೆ, ಬಿಜೆಪಿ ಅಭ್ಯರ್ಥಿಗೆ ಟಿಕೆಟ್ ನೀಡುವಂತೆ ಒತ್ತಡ ಹೇರಿದ್ದಾರೆ ಎನ್ನಲಾಗಿದೆ.

ಎ.ಮಂಜು–ಕುಮಾರಸ್ವಾಮಿ ಭೇಟಿ: ಈ ನಡುವೆ, ಅರಕಲಗೂಡಿನ ಜೆಡಿಎಸ್ ಶಾಸಕ ಎ.ಮಂಜು ಅವರ ಬೆಂಗಳೂರಿನ ನಿವಾಸಕ್ಕೆ ಭೇಟಿ ನೀಡಿದ ಎಚ್.ಡಿ. ಕುಮಾರಸ್ವಾಮಿ ಸುದೀರ್ಘ ಚರ್ಚೆ ನಡೆಸಿದ್ದಾರೆ.

ದೇವೇಗೌಡರಿಗೆ ಇದು ಕೊನೆಯ ಚುನಾವಣೆಯಾಗಿದ್ದು, ಹಾಸನದಿಂದ ಅವರೇ ಸ್ಪರ್ಧಿಸಲಿ ಎಂದು ಈ ಹಿಂದೆಯೇ ಎ.ಮಂಜು ಹೇಳಿದ್ದರು. ಅದರ ಬೆನ್ನಲ್ಲೇ, ಭವಾನಿ ರೇವಣ್ಣ ಹಾಗೂ ಪ್ರಜ್ವಲ್ ಕೂಡ ಎ.ಮಂಜು ಅವರನ್ನು ಭೇಟಿ ಮಾಡಿ, ಚರ್ಚೆ ನಡೆಸಿದ್ದರು. ಇದೀಗ ಮಂಜು–ಕುಮಾರಸ್ವಾಮಿ ಮಾತುಕತೆ ನಡೆಸಿದ್ದು, ಅಂತಿಮ ಅಭ್ಯರ್ಥಿ ಯಾರಾಗಲಿದ್ದಾರೆ ಎಂಬುದು ಕುತೂಹಲ ಕೆರಳಿಸಿದೆ.

ಅಪ್ರಾಪ್ತ ಮನೆ ಕೆಲಸದಾಕೆಯ ಮೇಲೆ ಅತ್ಯಾಚಾರ ಆರೋಪ

ಅಸ್ಸಾಂ ಹಿರಿಯ ಪೊಲೀಸ್ ಅಧಿಕಾರಿ ಬಂಧನ

ಗುವಾಹಟಿ: ಅಪ್ರಾಪ್ತ ಮನೆಯ ಕೆಲಸದಾಕೆಯ ಮೇಲೆ ಅತ್ಯಾಚಾರ ಎಸಗಿದ ಆರೋಪದ ಮೇಲೆ ಅಸ್ಸಾಂನ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರನ್ನು ಭಾನುವಾರ ಬಂಧಿಸಲಾಗಿದೆ.

ಗೋಲಘಾಟ್ ಜಿಲ್ಲೆಯ ಲಚಿತ್ ಬೊರ್ಫುಕನ್ ಪೊಲೀಸ್ ಅಕಾಡೆಮಿಯಲ್ಲಿ(ಎಲ್‌ಬಿಪಿಎ) ನಿಯೋಜಿಸಲಾಗಿದ್ದ ಪೊಲೀಸರು ಉಪ ವರಿಷ್ಠಾಧಿಕಾರಿ(ಡಿಎಸ್‌ಪಿ) ಕಿರಣ್ ನಾಥ್ ಅವರನ್ನು ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಆರೋಪದ ಮೇಲೆ ಭಾನುವಾರ ಸಂಜೆ ವಶಕ್ಕೆ ತೆಗೆದುಕೊಳ್ಳಲಾಗಿದೆ.

15 ವರ್ಷದ ಬಾಲಕಿ, ಪೊಲೀಸ್ ಅಧಿಕಾರಿ ತನ್ನ ಮೇಲೆ ಅನೇಕ ಸಂದರ್ಭಗಳಲ್ಲಿ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಆರೋಪಿಸಿದ್ದಾರೆ. ಅಲ್ಲದೇ ತನ್ನನ್ನು ಮನೆಯಲ್ಲಿ ಕೂಡಿ ಹಾಕಿ ಚಿತ್ರಹಿಂಸೆ ನೀಡಿದ್ದಾರೆ ಎಂದು ಆರೋಪಿಸಿದ್ದಾರೆ.

ಈ ಸಂಬಂಧ ಬಾಲಕಿಯ ಕುಟುಂಬಸ್ಥರು ಪೊಲೀಸರಿಗೆ ದೂರು ನೀಡಿದಾಗ ವಿಷಯ ಬೆಳಕಿಗೆ ಬಂದಿದೆ. ಆರೋಪಿಯ ವಿರುದ್ಧ ಐಪಿಸಿ ಸೆಕ್ಷನ್ 376 (ಲೈಂಗಿಕ ದೌರ್ಜನ್ಯ) ಮತ್ತು 506 (ಕ್ರಿಮಿನಲ್ ಬೆದರಿಕೆ) ಮತ್ತು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆಯ ಸೆಕ್ಷನ್ 6 ರ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಸಾಕ್ಷ್ಯಾಧಾರಗಳ ಆಧಾರದ ಮೇಲೆ ಕಿರಣ್‌ನಾಥ್ ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಮಹಾನಿರ್ದೇಶಕ ಜಿಪಿ ಸಿಂಗ್ ಹೇಳಿದ್ದಾರೆ.

ಕಾಂಗ್ರೆಸ್ ಅನ್ನು ದುರ್ಬಲ ಅಂತಾ ಪರಿಗಣಿಸಲ್ಲ: ಸಿ.ಟಿ.ರವಿ



ಚಿಕ್ಕಮಗಳೂರು: ಕಾಂಗ್ರೆಸ್ ಅನ್ನು ನಾವು ದುರ್ಬಲ ಎಂದು ಪರಿಗಣಿಸಲ್ಲ. ಕಾಂಗ್ರೆಸ್‌ನಲ್ಲಿ ಪ್ರಬಲ ಅಭ್ಯರ್ಥಿಗಳಿಲ್ಲದೆ ಇರಬಹುದು. ಬಿಜೆಪಿ ವಿರೋಧಿ ಮತಗಳು ಕಾಂಗ್ರೆಸ್ಸಿಗೆ ಹೋಗುತ್ತದೆ ಎಂದು ಮಾಜಿ ಶಾಸಕ ಸಿ.ಟಿ.ರವಿ ಹೇಳಿದ್ದಾರೆ.

ಚಿಕ್ಕಮಗಳೂರಿನಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಯುದ್ಧ ಮತ್ತು ಚುನಾವಣೆಯನ್ನು ಹಗುರವಾಗಿ ಪರಿಗಣಿಸಲ್ಲ. ಗಂಭೀರವಾಗಿ ತೆಗೆದುಕೊಂಡು ಗಂಭೀರವಾಗಿ ಎದುರಿಸಬೇಕು. ಮೇಲ್ನೋಟಕ್ಕೆ ಎಲ್ಲಾ ಕಡೆ ಮೋದಿ ಪರ ಅಲೆ ಇರುವುದು ಅರ್ಥವಾಗುತ್ತಿದೆ. ಕಳೆದ ಬಾರಿ ಕಾಂಗ್ರೆಸ್‌ಗೆ ವೋಟ್ ಹಾಕಿದವರು ದೇಶಕ್ಕಾಗಿ ಮೋದಿಗೆ ವೋಟ್ ಹಾಕುತ್ತೇವೆ ಎನ್ನುತ್ತಿದ್ದಾರೆ ಎಂದರು.

ನಾವೇನೂ ದೇಶಭಕ್ತರಲ್ವಾ, ಮೋದಿ ಪ್ರಧಾನಿಯಾಗೋದು ನಮಗೂ ಇಷ್ಟ, ಅಭ್ಯರ್ಥಿ ಬಗ್ಗೆ ಚರ್ಚೆಯಾಗುತ್ತಿರೋದು ಕಡಿಮೆ. ಎಲ್ಲಾ ಕಡೆ ಮೋದಿ ಹವಾ ಇದೆ. ಕಾಂಗ್ರೆಸ್ಸಿನಲ್ಲಿ ಯಾರು ಅಭ್ಯರ್ಥಿಯಾಗುತ್ತಾರೆ ಅನ್ನೋದು ಮುಖ್ಯವಲ್ಲ. ಕಾಂಗ್ರೆಸ್ಸಿಗೆ ಒಂದಿಷ್ಟು ಮತ ಇದೆ ಎನ್ನುವುದನ್ನು ಮರೆಯುವ ಹಾಗಿಲ್ಲ ಎಂದು ಹೇಳಿದರು.

ಕೆ.ಎಸ್. ಈಶ್ವರಪ್ಪ ಅಸಮಾಧಾನ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ಯಡಿಯೂರಪ್ಪ– ಈಶ್ವರಪ್ಪನವರ ಸಂಬಂಧ 4 ದಶಕ ಮೀರಿದ್ದು. ಒಂದು ಕಾಲದಲ್ಲಿ ಬ್ಯುಸಿನೆಸ್ಸನ್ನೂ ಜಂಟಿಯಾಗಿಯೇ ಮಾಡುತ್ತಿದ್ದರು ಅನ್ನೋದನ್ನ ಕೇಳಿದ್ದೀವಿ. ಅವರಿಗಿಂತ ಹತ್ತಿರವಾದವರೂ ಯಾರು ಇಲ್ಲ. ಏನೇ ಸಮಸ್ಯೆ ಇದ್ದರೂ ಅವರೇ ಬಗೆಹರಿಸಿಕೊಳ್ಳುತ್ತಾರೆ ಎಂದು ತಿಳಿಸಿದರು.

ಖ್ಯಾತ ಗಾಯಕಿ ಮಂಗ್ಲಿ ಪ್ರಯಾಣಿಸುತ್ತಿದ್ದ ಕಾರಿಗೆ ಭೀಕರ ಅಪಘಾತ



ಬೆಂಗಳೂರು: ಕನ್ನಡ ಸೇರಿದಂತೆ ಹಲವು ಭಾಷೆಗಳಲ್ಲಿ ಅದ್ಭುತ ಕಂಠಸಿರಿಯಿಂದ ಫೇಮಸ್ ಆದವರು ಗಾಯಕಿ ಮಂಗ್ಲಿ ಅವರು ಭೀಕರ ಅಪಘಾತದಲ್ಲಿ ಸ್ವಲ್ಪದಲ್ಲಿಯೇ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಹೈದರಾಬಾದ್–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಈ ಘಟನೆ ಸಂಭವಿಸಿದೆ. ಟಾಲಿವುಡ್‌ನ ಹೆಚ್ಚು ಬೇಡಿಕೆಯ ಹಿನ್ನೆಲೆ ಗಾಯಕಿಯಾಗಿರುವ ಮಂಗ್ಲಿ ಅವರ ಅಪಘಾತದ ಸುದ್ದಿ ಸಿನಿಮಾ ಜಗತ್ತಿನಲ್ಲಿ ಬರಸಿಡಿಲಿನಂತೆ ಎರಗಿದೆ. ಇಬ್ಬರು ಪರಿಚಯಸ್ಥರೊಂದಿಗೆ ಶಂಶಾ ಬಾದ್‌ನಿಂದ ಹಿಂತಿರುಗುತ್ತಿದ್ದ ಸಂದರ್ಭದಲ್ಲಿ ತೊಂಡಪಲ್ಲಿ ರಸ್ತೆಯಲ್ಲಿ ಅವರು ಪ್ರಯಾಣಿಸುತ್ತಿದ್ದ ಕಾರಿಗೆ ಟ್ರಕ್‌ವೊಂದು ಹಿಂಬದಿಯಿಂದ ಡಿಕ್ಕಿ ಹೊಡೆದ ಪರಿಣಾಮ ಭಾರಿ ಅಪಘಾತ ಸಂಭವಿಸಿದೆ. ಆದರೆ ಅದೃಷ್ಟವಶಾತ್, ಸಣ್ಣಪುಟ್ಟ ಗಾಯಗಳೊಂದಿಗೆ ಮಂಗ್ಲಿ ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ವರದಿಯಾಗಿದೆ.

IN THE COURT OF THE HON'BLE X ADDL. CIVIL JUDGE & JMFC AT MYSURU
O.S. No.1162/2021

BETWEEN : **Kusum Tayal** W/o Chean P. Tayal, Aged about 64 years, No.66, Fortune Valley, Dasarahalli Main Road, Bangalore - 560024 .....Plaintiff

And

1. **Smt. Manchamma** W/o Late Siddaiah, Aged Major
2. **Smt. Jyothi** W/o Manju, Aged Major, All are residing at Mellahalli Village, Harohalli Post, Varuna Hobli, Mysuru Taluk and District .....Defendants

SUMMONS TO DEFENDANTS THROUGH PAPER PUBLICATION

Whereas, the above named plaintiff instituted the above top noted suit against defendants for enforcement of registered agreement to sell dated 04-02-2015 since the defendants is avoiding to take the notice of the above suit proceedings, the notice to defendants is published in this newspaper, accordingly, the defendants is hereby summoned to appear before this court in person, or through pleader on the 30-04-2024, at 11 AM to answer the same failing which you will be placed ex-parte, given under my hand and seal of the court, this 16-03-2024.

By Order of the Court.
Sd/- Chief Ministerial Officer,
Civil Judge & JMFC, Court, Mysuru

Advocate for Plaintiff
M. Sampath Kumar, Advocate, Building No.11, House No. 123, Kengeri Satellite Town. Bangalore - 560060

PUBLIC NOTICE

This is to inform the general public that my client intends to purchase the below explain Schedule Property, from the property owner Mr. D. Jnaneshwara Sharma, son of Late A. Deendayal, residing at No. 36, Suvarna Nagar near H.M.T. Layout, Nagasandra Post, Bangalore-560073, Karnataka, India.

Any person having or claiming any right, title, estate or interest by waiver, inheritance, share, sale, mortgage, transfer, lease, tenancy, lien, charge, trust, maintenance, easement, gift, devise bequest, exchange, preemption, possession or encumbrance or otherwise howsoever into or upon the schedule Property described herein below are called upon to intimate the same in writing to the undersigned at the below given address along with all the documents relating to such claim within 7 days from the date of publication of this notice, failing which, any such claim of any party shall be deemed to have been waived for all legal practical purposes and shall not be entertained after such period and my client will proceed with the proposed purchase of the Scheduled Property on the basis that there are no claims whatsoever with respect thereto.

SCHEDULE PROPERTY

ITEM No. I:-

All that piece and parcel of the immovable agricultural land being a portion of Survey No. 106/1, measuring 01 acre 14 guntas, Situated at Belawadi Village, Kasaba Hobli, Srirangapattana Taluk, Mandya District & bounded on the: East By: Land in Sy No. 107; West By: Remaining portion of land in Sy. No. 106/1 ; North By: Land in Sy. No. 105 ; South By: Land in Sy.No. 107.

ITEM No. II:-

All that piece and parcel of the immovable agricultural land bearing Survey No. 107/2, measuring 03 Acres, Situated at Belawadi Village, Kasaba Hobli, Srirangapattana Taluk, Mandya District and bounded on the:

East By: Lands of Patel Eregowda and Harahalli Eregowda; West By: Lands of Seeri Nanjegowda and Chikkeregowda; North By: Lands of Harohalli Kencha and Varuna Channel; South By: Lands of Muddaiahna Raegowda and Chikkananjegowda.

Sd/- Manoj B.V, Advocate,
No. 28/A, Nrupatunga Road, Kuvempunagar 2nd Stage, Mysuru - 570023, Karnataka, India. Mobile-9945104646
Mail ID- manojbv8@gmail.com
Date:18.03.2024
Place: Mysuru

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಕರ್ನಾಟಕ ಸರ್ಕಾರ – ಹಿಂದೂ ಧಾರ್ಮಿಕ ದತ್ತಿ ಇಲಾಖೆ

ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ, ನಂಜನಗೂಡು.

ದೊಡ್ಡಜಾತ್ರಾ ಮಹೋತ್ಸವ–2024

ಸ್ವಸ್ತಿ ಶ್ರೀ ವಿಜಾಯಾಭ್ಯುದಯ ಶಾಲಿವಾಹನ ಶಕ ವರ್ಷಂಗಳು 1945ಕ್ಕೆ ಸಲ್ಲುವ ಶ್ರೀಶೋಭಕೃತ್‌ನಾಮ ಸಂವತ್ಸವರದ 2024 ನೇ ಸಾಲಿನ ಶ್ರೀ ಗೌತಮ ಪಂಚಮಹಾ ರಥೋತ್ಸವ ಮತ್ತು ತೆಪ್ಪೋತ್ಸವ ವಿವರ

1	ದಿ: 19-03-2024 ಮಂಗಳವಾರ	ಸಂಜೆ: 7.00ಗಂಟೆಗೆ	"ಶ್ರೀ ಶ್ರೀಕಂಠಮುಡಿ ಉತ್ಸವ"
3	ದಿ: 22-03-2024 ಶುಕ್ರವಾರ	ಬೆಳಿಗ್ಗೆ: 06-30 ರಿಂದ 06-50 ಗಂಟೆಯೊಳಗೆ	"ಶ್ರೀ ಮನ್ಮಹಾಗೌತಮ ರಥಾರೋಹಣ"
4.	ದಿ: 24-03-2024 ಭಾನುವಾರ	ಸಂಜೆ: 7.00 ಗಂಟೆಗೆ	"ಕಪಿಲಾ ನದಿಯಲ್ಲಿ ತೆಪ್ಪೋತ್ಸವ"

ಭಕ್ತ ಮಹಾಶಯರುಗಳಾದ ತಾವುಗಳು ಸಪರಿವಾರ ಸಮೇತ ಸದರಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಶ್ರೀ ಶ್ರೀಪಾರ್ವತೀ ಸಮೇತ ಶ್ರೀ ಶ್ರೀಕಂಠೇಶ್ವರಸ್ವಾಮಿಯವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸಿದೆ.

ರಥೋತ್ಸವದ ಆಚಾರ್ಯತ್ವ ಶ್ರೀ ಜಿ.ನಾಗಚಂದ್ರ ದೀಕ್ಷಿತ್ ,
ಆಗಮಿಕರು, ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ, ನಂಜನಗೂಡು.

ಸರ್ವರಿಗೂ ಆದರದ ಸುಸ್ವಾಗತ

ಸಹಿ/– ಜಗದೀಶ್ ಕುಮಾರ್ ಎಂ. ಕಾರ್ಯನಿರ್ವಾಹಕ ಅಧಿಕಾರಿ, ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ, ನಂಜನಗೂಡು.

ಸಹಿ/– ಪಿ. ಶಿವರಾಜು, ಕ.ಆ.ಸೇ.(ಆಯ್ಕೆ ಶ್ರೇಣಿ) ಆಡಳಿತಾಧಿಕಾರಿ ಹಾಗೂ ಅಪರ ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ, ಮೈಸೂರು.

ಸಹಿ/– ಡಾ. ರಾಜೇಂದ್ರ, ಕೆ.ವಿ.,ಭಾ.ಆ.ಸೇ. ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ, ಮೈಸೂರು.

ಸಹಿ/– ಬಸವರಾಜೇಂದ್ರ, ಹೆಚ್ ಭಾ.ಆ.ಸೇ. ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು, ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, ಬೆಂಗಳೂರು.